# ಪ್ರಸಾದ

**ಸಂಪುಟ 29 ಸಂಚಿಕೆ 5** **ಸೆಪ್ಟೆಂಬರ್-ಅಕ್ಟೋಬರ್ 2014**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ

ಮೈಸೂರು 570 004




**ಸಂಸ್ಥಾಪಕರು**

'ಶ್ರೀಮನ್ಮಹಾರಾಜ ರಾಜಗುರುತಿಲಕ' ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳು
ಶ್ರೀ ಬಿ.ಎನ್. ಬೆಟ್‌ಕೆರೂರ್
ಶ್ರೀ ಎಸ್.ಪಿ. ಮಂಜುನಾಥ್
ಶ್ರೀ ಮ.ಗು. ಸದಾನಂದಯ್ಯ
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಎಸ್. ನಂಜುಂಡಯ್ಯ
ಶ್ರೀ ಕೆ.ಸಿ. ಶಿವಪ್ಪ
ಡಾ. ಬಿ.ನಂ. ಚಂದ್ರಯ್ಯ
ಡಾ. ಓ.ಎಲ್. ನಾಗಭೂಷಣಸ್ವಾಮಿ
ಡಾ. ಪದ್ಮಾ ಶೇಖರ್
ಡಾ. ಎನ್.ಎಸ್. ತಾರಾನಾಥ
ಶ್ರೀಮತಿ ಎಚ್.ಟಿ. ಶೈಲಜಾ
ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು


# ಪರಿವಿಡಿ


ಸಂಪಾದಕೀಯ 5
ಗುರುವಾಣಿ 7
ಪಂಚಯ್ಯ ಕವಿಯ ಭಕ್ತಿರಸ ಸೋನೆ 9
**ಡಾ. ಎಫ್.ಟಿ. ಹಳ್ಳಿಕೇರಿ**

ಅಕ್ಕಮಹಾದೇವಿಯ ವಚನಗಳ ಪ್ರತಿಮಾವಿಧಾನ 24
**ಎಚ್.ಎಂ. ಚನ್ನಯ್ಯ**

ತಮಿಳುನಾಡಿನಲ್ಲಿ ವೀರಶೈವ ಧರ್ಮ, ಪರಂಪರೆ 32
**ಸು. ಬಸವರಾಜದೊಡ್ಡಟ್ಟಿ**

ವಾರ್ತಾವಿಹಾರ 44
ಸಾದರ ಸ್ವೀಕಾರ 60


**ಮುಖಪುಟ ಚಿತ್ರ**

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 99ನೆಯ ಜಯಂತಿ ಮಹೋತ್ಸವದ ಉದ್ಘಾಟನೆಯನ್ನು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಮಾಡಿದರು. ಚಿತ್ರದಲ್ಲಿ ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಎಂ.ಕೆ. ಸೋಮಶೇಖರ್, ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್, ಪರಮಪೂಜ್ಯ ಜಗದ್ಗುರು ಶ್ರೀಗಳವರು, ಕೇಂದ್ರ ವಿಮಾನಯಾನ ರಾಜ್ಯ ಸಚಿವ ಶ್ರೀ ಜಿ.ಎಂ. ಸಿದ್ಧೇಶ್ವರರವರು, ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್, ನಮೀಬಿಯ ರಾಯಭಾರಿ ಶ್ರೀಮತಿ ಎಲಿಜೆಬತ್ ಏನಲಿ ವನ್ಸಿಸ್ ಮತ್ತು ಶ್ರೀ ವಾಸುರವರು

## ಲೇಖಕರ ವಿಳಾಸ


**ಡಾ. ಎಫ್.ಟಿ. ಹಳ್ಳಿಕೇರಿ**
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276
ಬಳ್ಳಾರಿ ಜಿಲ್ಲೆ

**ಸು. ಬಸವರಾಜದೊಡ್ಡಟ್ಟಿ**
ನಿವೃತ್ತ ಮುಖ್ಯಶಿಕ್ಷಕರು
ನಂ. 1317, ನಾರಾಯಣ ರಾಯರ ಅಗ್ರಹಾರ
ನಂಜನಗೂಡು 571301


# ಸಂಪಾದಕೀಯ

'ಸ್ವಚ್ಛ ಭಾರತ ಅಭಿಯಾನ', 'ಮೊದಲು ಶೌಚಾಲಯ, ಅನಂತರ ದೇವಾಲಯ' ಇತ್ತೀಚಿನ ದಿನಗಳಲ್ಲಿ ಈ ಮಾತುಗಳು ಎಲ್ಲ ಮಾಧ್ಯಮಗಳಲ್ಲಿಯೂ ನಿತ್ಯವೂ ಕಾಣಿಸಿಕೊಳ್ಳುತ್ತಿವೆ. ಅಷ್ಟೇ ಅಲ್ಲ, ಗಾಂಧೀ ಜಯಂತಿಯಂದು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರೇ ಪೊರಕೆ ಹಿಡಿದು ಇದಕ್ಕೆ ಚಾಲನೆ ಕೊಟ್ಟ ಚಿತ್ರಗಳೂ ದೇಶಾದ್ಯಂತ ಸಂಚಲನವನ್ನು ಉಂಟುಮಾಡಿವೆ. ಇದು ಕೇವಲ ರಾಜಕೀಯ ಪ್ರಹಸನ ಎಂದು ಟೀಕಿಸುವವರಿಗೂ ಕೊರತೆ ಇಲ್ಲ; ಇರಲಿ. ಸ್ವಚ್ಛತೆಯಲ್ಲಿ ನಾರ್ವೆಯಂತಹ ಪುಟ್ಟ ದೇಶ ಪ್ರಪಂಚದ ಪ್ರಥಮ ಸ್ಥಾನ ಪಡೆಯುವ ಮಟ್ಟಿಗೆ ಪರಿಸರಪ್ರಜ್ಞೆಯನ್ನು ಬೆಳೆಸಿಕೊಂಡಿದೆ. ಕೋಟಿ ಕೋಟಿ ದೇವಾನುದೇವತೆಗಳು ವಾಸಿಸುವ, ಓಡಾಡುವ ಈ ರಾಷ್ಟ್ರ ಸ್ವಚ್ಛತೆಯ ದೃಷ್ಟಿಯಿಂದ ಪ್ರಪಂಚದಲ್ಲಿ 125ನೇ ಸ್ಥಾನದಲ್ಲಿದೆ. ಇದಕ್ಕೆ ಪ್ರಜ್ಞಾವಂತ ನಾಗರಿಕರು ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯದಾಗಿದೆ. 2019ರ ಹೊತ್ತಿಗೆ ದೇಶ ಸಂಪೂರ್ಣ ಸ್ವಚ್ಛವಾಗಲಿದೆ ಎನ್ನುವುದು ಪ್ರಧಾನಿಗಳ ಕನಸು! ಇದಕ್ಕಾಗಿ ಎರಡು ಲಕ್ಷ ಕೋಟಿ ರೂ.ಗಳು ಖರ್ಚಾಗುವ ಅಂದಾಜಿದೆ.

ದೇಶಕ್ಕೆ ಸ್ವಾತಂತ್ರ ಬಂದು ಏಳು ದಶಕಗಳು ಮುಟ್ಟುವಂಥ ದಿನ ಬಹು ದೂರದಲ್ಲಿಲ್ಲ. ಆದರೂ ಕುಡಿಯುವುದಕ್ಕೆ ಶುದ್ಧ ನೀರು, ಕೊಳಚೆ ನೀರು ಹರಿಯಲು ಚರಂಡಿ, ತಿರುಗಾಡಲು ದಾರಿ, ಮನೆಗೊಂದು ಶೌಚಾಲಯ, ಊರಿಗೊಂದು ಪ್ರಾಥಮಿಕ ಆರೋಗ್ಯ ಕೇಂದ್ರ - ಇಂತಹ ಕನಿಷ್ಠ ಮೂಲಭೂತ ಅವಶ್ಯಕತೆಗಳಿಗಾಗಿ ರಾಜಕಾರಣಿಗಳ ಬೆನ್ನುಹತ್ತುವ, ಚಳವಳಿ ಮಾಡುವ ಪರಿಸ್ಥಿತಿಯಿಂದ ನಾವಿನ್ನೂ ಮುಕ್ತರಾಗಿಲ್ಲ. ಇದಕ್ಕೆ ಕಾರಣವೇನು? ಸಂಪನ್ಮೂಲಗಳ ಕೊರತೆಯೆ? ಜನಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯವೆ? ಸಾರ್ವಜನಿಕರ ಪ್ರಜ್ಞಾರಹಿತ ನಡವಳಿಕೆಯೆ? ಜನಸಂಖ್ಯಾ ಬಾಹುಳ್ಯವೆ? – ಈ ಎಲ್ಲ ಪ್ರಶ್ನೆಗಳೂ ಒಟ್ಟಾಗಿ ಬಂದು ನಮ್ಮ ಮುಂದೆ ನಿಲ್ಲುತ್ತವೆ. ಇದನ್ನು ವಿಶ್ಲೇಷಿಸಿದಾಗ ಈ ಎಲ್ಲವೂ ಒಂದರೊಳಗೊಂದು ಹೆಣೆದುಕೊಂಡಿರುವಂತೆ ಕಂಡುಬರುತ್ತದೆ. ಜನರಲ್ಲಿ ಕಂಡುಬರುವ ಅರಿವಿನ ಕೊರತೆಯೇ ಇದಕ್ಕೆ ಪ್ರಮುಖ ಕಾರಣ ಎನ್ನುವುದು ಬಹುಮಟ್ಟಿಗೆ ನಿಜ. ಕೇವಲ ಬಡತನ ಇದಕ್ಕೆ ಕಾರಣವಾಗಲಾರದು. ಏಕೆಂದರೆ, ಬಡತನವಿದ್ದರೂ ಥಾಯ್‌ಲ್ಯಾಂಡ್, ಶ್ರೀಲಂಕಾ ಮುಂತಾದ ರಾಷ್ಟ್ರಗಳು ಹೆಚ್ಚು ಸ್ವಚ್ಛವಾಗಿರುವುದು ನಮ್ಮ ಕಣ್ಣ ಮುಂದೆಯೇ ಇರುವ ಉದಾಹರಣೆಗಳು. ಕಂಡಕಂಡ ಕಡೆ ಉಗುಳುವುದು, ಮೂತ್ರವಿಸರ್ಜನೆ ಮಾಡುವುದು, ಕಸವನ್ನು ಚೆಲ್ಲುವುದು,

ಪ್ಲಾಸ್ಟಿಕ್ ಅನ್ನು ಎಲ್ಲೆಂದರಲ್ಲಿ ಎಸೆಯುವುದು, ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡದಿರುವುದು, ಕೆರೆಕಟ್ಟೆಗಳನ್ನು ನಾಶಮಾಡಿ ನಿವೇಶನಗಳನ್ನಾಗಿ ಪರಿವರ್ತಿಸುವುದು, ಕೈಗಾರಿಕೆಗಳ ಕಲುಷಿತ ನೀರನ್ನು ನದಿಗಳಿಗೆ ನೇರವಾಗಿ ಹರಿಯಬಿಡುವುದು - ಇಂತಹ ಅನೇಕ 'ಅನಾಗರಿಕ' ಸಂಗತಿಗಳನ್ನು ನಾವು ಎಲ್ಲ ಕಡೆ ಕಾಣುತ್ತೇವೆ.

ಸಂಪದ್ಭರಿತ ರಾಷ್ಟ್ರಗಳು ನಮ್ಮಲ್ಲಿಗೆ ಬಂದು ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಸತತವಾಗಿ ಪ್ರಯತ್ನಿಸುತ್ತಿವೆ. ಅಂತಹ ಬಂಡವಾಳ ಹೂಡಿಕೆದಾರರು ಬರುವುದನ್ನು ನಮ್ಮ ಪ್ರಧಾನಿಯವರೂ ಸ್ವಾಗತಿಸುತ್ತಿದ್ದಾರೆ. ಅದಕ್ಕಾಗಿ ಸಹಸ್ರ ಸಹಸ್ರ ಎಕರೆ ಆಹಾರ ಉತ್ಪಾದನೆ ಮಾಡುವಂಥ ಭೂಮಿ 'ಕೈಗಾರಿಕಾ ವಲಯ'ವಾಗಿ ಮಾರ್ಪಡುತ್ತಿದ್ದು, ಇದು ಮತ್ತಷ್ಟು ನೆಲ, ಜಲಗಳ ಮಾಲಿನ್ಯಕ್ಕೆ ಕಾರಣವಾಗುತ್ತದೆ.  ಗಂಗೆಯಂತಹ ದೊಡ್ಡ ನದಿಯ ಮಾತಿರಲಿ, ನಮ್ಮ ಬೆಂಗಳೂರಿನ ಹೃದಯಭಾಗದಲ್ಲಿರುವ ಅರ್ಕಾವತಿ ನದಿ ಎಂದೋ ತನ್ನ ಪರಿಶುದ್ಧತೆಯನ್ನು ಕಳೆದುಕೊಂಡು, ದೊಡ್ಡ ಮೋರಿಯಾಗಿ ಪರಿವರ್ತಿತವಾಗಿ ಮೈಲಿಮೈಲಿಗಳವರೆಗೆ ದುರ್ವಾಸನೆ ಬೀರುತ್ತಿದೆ. ತೀರ್ಥವೆನಿಸಿದ್ದ ನಮ್ಮ ನಂಜನಗೂಡಿನ ಕಪಿಲಾ ನದಿ, ಸುತ್ತಲಿನ ಕಾರ್ಖಾನೆಗಳ ದೆಸೆಯಿಂದ ಇಂದು ನಂಜಿನ ಗೂಡಾಗಿದ್ದಾಳೆ.

ಇಂತಹ ಭಯಾನಕ ಪರಿಸರದಲ್ಲಿ ಬದುಕುತ್ತಿರುವ ನಾವು ಇಂದು ಗಂಭೀರವಾಗಿ ಚಿಂತಿಸಿ ಕಾರ್ಯಪ್ರವೃತ್ತರಾಗಬೇಕಿದೆ. ಇಲ್ಲದಿದ್ದರೆ ಇಂಥ ಕೊಳಕಿನ ಪರಿಸರದಿಂದ ಉಂಟಾಗಬಹುದಾದ ಆರೋಗ್ಯಸಂಬಂಧಿ ಅಪಾಯಗಳಿಗೆ ನಾವು ಬಹು ದೊಡ್ಡ ಬೆಲೆ ತೆರಬೇಕಾಗುತ್ತದೆ. ಬಹಳ ವರ್ಷಗಳ ಹಿಂದೆ ಖ್ಯಾತ ಚಿಂತಕ ಬರ್ಟ್ರೆಂಡ್ ರಸೆಲ್, 'Men Versus Insects' ಎನ್ನುವ ತನ್ನ ಪ್ರಬಂಧದಲ್ಲಿ, "ಮುಂದಿನ ಮಹಾಯುದ್ಧ ನಡೆಯುವುದು ಮನುಷ್ಯಮನುಷ್ಯರ ನಡುವೆಯಲ್ಲ, ಅದು ಮನುಷ್ಯರು ಮತ್ತು ಕ್ರಿಮಿಕೀಟಗಳ ನಡುವೆ" ಎಂದು ಬರೆದಿದ್ದರು.  ಇದು ನಿಜವಾಗುವ ಮೊದಲೆ, ಸ್ವಚ್ಛ ಭಾರತಕ್ಕಾಗಿ ನಾವು 'ಪೊರಕೆ' ಹಿಡಿಯಬೇಕಾಗಿದೆ; 'ಹರಕೆ' ಹೊರಬೇಕಾಗಿದೆ. ಇದು ಕೇವಲ ಪ್ರಧಾನಿಯೊಬ್ಬರ ಕನಸು ಮಾತ್ರ ಆಗಬಾರದು, ಶ್ರೀಸಾಮಾನ್ಯರ ಕನಸೂ ಆಗಬೇಕು. ಇದೇನೂ ಜನಸೇವೆಯಲ್ಲ; ಇದು ನಮಗೆ ನಾವೇ ಮಾಡಿಕೊಳ್ಳುವ ಸೇವೆ. ಗಾಂಧೀ ಜಯಂತಿಯ ಈ ಶುಭ ಸಂದರ್ಭದಲ್ಲಿ ನಾವು ಇಂತಹ ಒಂದು ಪ್ರತಿಜ್ಞೆಯನ್ನು ಮಾಡಿ, ಅದನ್ನು ಮೊದಲು ನಮ್ಮ ಮನೆಯಂಗಳದಿಂದಲೇ ಪ್ರಾರಂಭಿಸೋಣ. ಇದು ನಮ್ಮಲ್ಲಿರುವ ಮಾನವಶಕ್ತಿಯ ಬಳಕೆಯ ಕನಿಷ್ಠತಮ ಕಾರ್ಯಕ್ರಮ ಎಂದು ಭಾವಿಸೋಣ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

ಪ್ರತಿ ವರ್ಷ ಆಶ್ವಯುಜ ಮಾಸ ಬಂತೆಂದರೆ ಕರ್ನಾಟಕದ, ಅದರಲ್ಲೂ ಸಾಂಸ್ಕೃತಿಕ ನಗರಿಯಾದ ಮೈಸೂರಿನ ಜನತೆಗೆ ಎಲ್ಲಿಲ್ಲದ ಉತ್ಸಾಹ ಕೋಡಿವರಿಯುತ್ತದೆ. ಇದಕ್ಕೆ ಕಾರಣ ನವರಾತ್ರಿ ಹಾಗೂ ದಸರೆಯ ಕೊನೆಯ ದಿನವಾದ ವಿಜಯದಶಮಿ. ಇದು ಮೈಸೂರು ನಗರದ ಬಹು ದೊಡ್ಡ ಧಾರ್ಮಿಕ ಉತ್ಸವ. ಇತ್ತೀಚಿನ ವರ್ಷಗಳಲ್ಲಿ ಇದಕ್ಕೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಯಾಮಗಳೂ ಸೇರಿಕೊಂಡು ಮೈಸೂರು ಇಡೀ ರಾಷ್ಟ್ರದ ಗಮನ ಸೆಳೆಯುತ್ತಿದೆ.

ನಮ್ಮ ಪುರಾಣಗಳ ಪ್ರಕಾರ, ಶಕ್ತಿದೇವತೆಯಾದ ದುರ್ಗೆ ಈ ನವರಾತ್ರಿಯ ಒಂಬತ್ತು ದಿನಗಳೂ, ಶೈಲಪುತ್ರಿ, ಬ್ರಹ್ಮಚಾರಿಣಿ ಇತ್ಯಾದಿ ಒಂಬತ್ತು ಹೆಸರುಗಳಿಂದ ಪೂಜಿಸಲ್ಪಡುತ್ತಾಳೆ. ವಿವಿಧ ದೇವತೆಗಳ ತೇಜಸ್ಸಿನಿಂದ ಉದ್ಭವವಾದ ಹಲವಾರು ಆಯುಧಗಳನ್ನು ಪಡೆದು ದೈತ್ಯಸಂಹಾರಕ್ಕಾಗಿ ಅವತರಿಸಿದ ನವದುರ್ಗೆಯರನ್ನು ಪೂಜಿಸುವ ಪರಿಪಾಠ ಭರತಖಂಡದ ಉದ್ದಗಲಕ್ಕೂ ಪ್ರಚಲಿತವಿದೆ. ಈ ಪೌರಾಣಿಕ ಪರಿಕಲ್ಪನೆಯ ಹಿಂದೆ ಅದರದ್ದೇ ಆದ ತಾತ್ವಿಕ ಅಂಶಗಳು ಅಡಕವಾಗಿರುವುದನ್ನು ಶುಷ್ಕ ವೈಚಾರಿಕತೆಯ ಆಚೆಗಿನ ಅಸಾಧಾರಣ ಸ್ತರಗಳಲ್ಲಿ ಅರ್ಥೈಸಬೇಕಾಗುತ್ತದೆ.

ಈ ಇಡೀ ಪ್ರಕ್ರಿಯೆಯನ್ನು ಒಂದು ರೂಪಕವಾಗಿ ಸ್ವೀಕರಿಸಿದಾಗ ಬಹುಶಃ ಅದರ ಹಿಂದಿನ ನಂಬಿಕೆ, ನಡವಳಿಗಳನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಈ ಪೌರಾಣಿಕ ಹಿನ್ನೆಲೆಯೇ ಮೈಸೂರಿನ ನವರಾತ್ರಿಯ ಪೂಜಾನುಷ್ಠಾನದ ಮೂಲಧಾತುವೂ ಆಗಿದೆ.

ವಿಜಯದಶಮಿಯ ಹಿಂದಿನ ದಿನವನ್ನು ಮಹಾನವಮಿ ಎಂದೂ, ಆಯುಧಪೂಜೆಯ ದಿನವೆಂದೂ ಕರೆಯಲಾಗುತ್ತದೆ. ಜೈನಧರ್ಮೀಯರ ಪ್ರಕಾರ ಆ ದಿನ ಆದಿತೀರ್ಥಂಕರನ ಪುತ್ರನಾದ ಭರತಚಕ್ರವರ್ತಿಯ ಆಯುಧಾಗಾರದಲ್ಲಿ 'ಚಕ್ರರತ್ನ'ವೊಂದು ಉದ್ಭವವಾಯಿತು. ಅದನ್ನು ಮುಂದಿಟ್ಟುಕೊಂಡು ಭರತ ಚಕ್ರವರ್ತಿಯು ಇಡೀ ಭೂಮಂಡಲವನ್ನೇ ಜಯಿಸಿದ. ಆ ಕಾರಣಕ್ಕಾಗಿ ಆಯುಧಪೂಜೆ (ಚಕ್ರದ ಪೂಜೆ) ಪ್ರಾರಂಭವಾಯಿತು ಎಂದು ಐತಿಹ್ಯವಿದೆ. ಅಜ್ಞಾತವಾಸ ಮುಗಿಸಿದ ಪಾಂಡವರು ತಮ್ಮ ಆಯುಧಗಳನ್ನು ಬಚ್ಚಿಟ್ಟಿದ್ದ ಬನ್ನಿವೃಕ್ಷಕ್ಕೆ ಪೂಜೆ ಸಲ್ಲಿಸಿ, ಆ ಆಯುಧಗಳನ್ನು ಮತ್ತೆ ಸ್ವೀಕರಿಸಿದ ಶುಭ ದಿನವೇ ವಿಜಯದಶಮಿ. ಆ ಕಾರಣಕ್ಕಾಗಿ ಮೈಸೂರರಸರು ದಶಮಿಯ ದಿನದಂದು ಮೆರವಣಿಗೆಯಲ್ಲಿ (ಜಂಬೂಸವಾರಿ) ಹೋಗಿ

ಶಮೀವೃಕ್ಷವನ್ನು ಪೂಜಿಸುವ ಪದ್ಧತಿ ಬಂದಿದೆ.

ಈ ನಾಡಿನ ಪ್ರತಿಯೊಂದು ಉತ್ಸವಕ್ಕೂ ಇಂತಹ ಒಂದಿಲ್ಲೊಂದು ಪೌರಾಣಿಕ, ಚಾರಿತ್ರಿಕ, ದಾರ್ಶನಿಕ ಅಂಶಗಳು ಇರುವುದರಿಂದಲೇ ಅವು ನಿರಂತರವಾಗಿ ಮುಂದುವರಿಯುತ್ತ ಬಂದು ಜನಮಾನಸವನ್ನು ಆವರಿಸಿಕೊಳ್ಳುವುದು ಸಾಧ್ಯವಾಗಿದೆ. ಸಾಮಾಜಿಕವಾಗಿ ಏನೇ ಸ್ಥಿತ್ಯಂತರಗಳು ಉಂಟಾದರೂ ಈ ಆದಿಮ ಧಾರ್ಮಿಕ ಪ್ರಜ್ಞೆ ಮಾತ್ರ ನಿರಂತರವಾಗಿ, ಸಮುದಾಯದ ಅಂತಸ್ಸತ್ವದ ಭಾಗವಾಗಿದ್ದು ಕೊಂಡು, ಅವರನ್ನು ನೈತಿಕವಾಗಿ ನಿಯಂತ್ರಿಸುವ ಕೆಲಸವನ್ನೂ ಮಾಡುತ್ತಿರುವುದನ್ನು ಸುಲಭವಾಗಿ ಅಲ್ಲಗಳೆಯುವಂತಿಲ್ಲ.

ಇಂತಹ ಒಂದು ರಮ್ಯ ಕಲ್ಪನೆಯ ಹಿನ್ನೆಲೆಯಲ್ಲಿಯೇ ಮೈಸೂರಿಗರ ಆರಾಧ್ಯ ದೇವತೆ ಶ್ರೀ ಚಾಮುಂಡೇಶ್ವರಿಯೂ ರೂಪುಗೊಂಡಿರುವುದು. ಚಂಡಮುಂಡರೆಂಬ ರಾಕ್ಷಸರನ್ನು ಕೊಂದು ಆಕೆ ಚಾಮುಂಡಿಯಾದಳು. ಈ ದೇವಿಯನ್ನು ಪ್ರಾರ್ಥಿಸುವ 'ಕಾಯೌ ಶ್ರೀಗೌರಿ' ಎಂಬ ಪದ್ಯ ಮೈಸೂರಿನ ಶಾಲೆಗಳಲ್ಲಿ ಬಹಳ ಕಾಲದವರೆಗೂ 'ನಾಡಗೀತೆಯೇ' ಆಗಿ ಪ್ರಸಿದ್ಧಿ ಪಡೆದಿತ್ತು. ಹತ್ತನೆಯ ಚಾಮರಾಜ ಒಡೆಯರ ಕಾಲದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದ ಅಭಿನವ ಕಾಳಿದಾಸ ಶ್ರೀ ಬಸವಪ್ಪಶಾಸ್ತ್ರಿಗಳು ಇದನ್ನು ರಚಿಸಿದ್ದು, ಅದರ ಪೂರ್ಣ ಪಾಠ ಹೀಗಿದೆ :

ಕಾಯೌ ಶ್ರೀಗೌರೀ ಕರುಣಾಲಹರೀ |
ತೋಯೇಜಾಕ್ಷೀ ಶಂಕರೀಶ್ವರೀ || ಪ ||

ವೈಮಾನಿಕ ಭಾಮಾರ್ಚಿತ ಕೋಮಲತರ ಪಾದೆ |
ಸೀಮಾತಿಗ ಭೂಮಾಸ್ಪದೆ ಕಾಮಿತಫಲದೆ || ಕಾಯೌ ||

ಶುಂಭಾದಿ ಮದಾಂಭೋನಿಧಿ ಕುಂಭಜನಿಭೆ ದೇವಿ |
ಜಂಭಾಹಿತ ಸಂಭಾವಿತ (ಶಾಂಭವಿ) ಶುಭದೇ || ಕಾಯೌ ||

ಶ್ಯಾಮಾಲಕೆ ಚಾಮುಂಡಿಕೆ ಸೋಮಕುಲಜ ಚಾಮ |
ನಾಮಾಂಕಿತ ಭೂಮೀಂದ್ರ ಲಲಾಮನ ಮುದದೇ || ಕಾಯೌ ||

ಎಲ್ಲ ಧಾರ್ಮಿಕ ಉತ್ಸವಗಳ ಮೂಲೋದ್ದೇಶವೇ ಅವರವರು ನಂಬಿದ ದೈವಗಳನ್ನು ಸ್ತುತಿಸುವುದಾಗಿದೆ. ವಿಜಯದಶಮಿಯ ಸಂದರ್ಭದಲ್ಲಿ ಆಳರಸರು ಮಾಡುತ್ತಿದ್ದ ಈ ಪ್ರಾರ್ಥನೆ, ಇಂದು ಪ್ರತಿಯೊಬ್ಬರ ಪ್ರಾರ್ಥನೆಯಾಗಬೇಕು. ಚಾಮುಂಡಿಯು ಹೊರಗಿನ ದುಷ್ಟರನ್ನು ಸಂಹರಿಸಿ ಲೋಕೋದ್ಧಾರವನ್ನು ಮಾಡಿದಂತೆ, ಪ್ರತಿಯೊಬ್ಬರೂ ತಮ್ಮೊಳಗೇ ಇರುವ 'ದುಷ್ಟತನ'ವನ್ನು, ತಮ್ಮ ಪ್ರಜ್ಞೆಯೆಂಬ ಆಯುಧದ ಮೂಲಕ, ನಿವಾರಣೆ ಮಾಡುತ್ತಿರಲೆಂದು ಆಶಿಸುತ್ತ, ಈ ಶುಭ ಸಂದರ್ಭದಲ್ಲಿ ಎಲ್ಲರಿಗೂ ಒಳಿತನ್ನು ಹಾರೈಸುತ್ತೇವೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಪಂಚಯ್ಯ ಕವಿಯ ಭಕ್ತಿರಸಸೋನೆ

**ಡಾ. ಎಫ್.ಟಿ. ಹಳ್ಳಿಕೇರಿ**

ಕರ್ನಾಟಕ ಕಂಡ ಸಮಾಜಸುಧಾರಕರಲ್ಲಿ ಬಸವಣ್ಣ ಅಗ್ರಗಣ್ಯ. ಹನ್ನೆರಡನೆಯ ಶತಮಾನದಲ್ಲಿ ನಡೆದ ಸಮಾಜೋಧಾರ್ಮಿಕ ಚಳವಳಿಯ ನೇತಾರನಾಗಿ ಮಾಡಿದ ಸಾಧನೆ ಅತ್ಯಪೂರ್ವವಾದುದು. ಸಮಾಜದ ಎಲ್ಲ ಸ್ತರದ ಜನರಿಗೂ ಸಮಾನತೆಯನ್ನು ತಂದುಕೊಡಬೇಕೆನ್ನುವ ಈತನ ಹಂಬಲಕ್ಕೆ ಪ್ರಭುದೇವ, ಚನ್ನಬಸವಣ್ಣ, ಅಮುಗಿ ರಾಯಮ್ಮ, ಅಕ್ಕಮಹಾದೇವಿ, ನಾಗಲಾಂಬಿಕೆ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಗೊಲ್ಲಾಳೇಶ್ವರ, ಆಯ್ದಕ್ಕಿ ಮಾರಯ್ಯನವರಂಥ ಅನೇಕ ಶರಣರು ಹೆಗಲೆಣೆಯಾಗಿ ನಿಂತದ್ದು ಈಗ ಇತಿಹಾಸ. ಅಂತರಂಗ ಬಹಿರಂಗಗಳೆರಡರಲ್ಲಿಯೂ ಶುದ್ಧವಾದಾಗ ಮಾತ್ರ ಮನುಷ್ಯನಾದವನು ಶರಣನಾಗಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟವನು. ವ್ಯಕ್ತಿ ಸಮಾಜಗಳೆರಡರಲ್ಲಿ ಹೊಸ ವೈಚಾರಿಕ ಕ್ರಾಂತಿಯನ್ನು ಹುಟ್ಟುಹಾಕಿದ ಬಸವಣ್ಣನ ಬಗ್ಗೆ ಅನೇಕ ಕಾವ್ಯ, ಪುರಾಣಗಳು, ಕಥೆ, ಕಾದಂಬರಿ, ನಾಟಕ ಮೊದಲಾದ ಹತ್ತು ಹಲವು ರೂಪಗಳಲ್ಲಿ ಕೃತಿಗಳು ರಚನೆಗೊಂಡಿವೆ.

## 1. ಬಸವಣ್ಣನನ್ನು ಕುರಿತ ಕಾವ್ಯ ಪುರಾಣಗಳು

ಈತನನ್ನು ಕುರಿತಂತೆ ಕಾವ್ಯ ಪುರಾಣ ಶಾಸನಗಳು ರಚನೆಗೊಂಡಷ್ಟು ಮತ್ತಾವ ಶರಣನ ಬಗೆಗೂ ಹುಟ್ಟಿಕೊಂಡಿಲ್ಲ. ಹರಿಹರ, ಭೀಮಕವಿ, ಸಿಂಗಿರಾಜ, ಷಡಕ್ಷರದೇವ ಮೊದಲಾದ ಕವಿಗಳು ಬಸವಣ್ಣನ ಚರಿತ್ರೆಯನ್ನು ವೈವಿಧ್ಯಮಯವಾಗಿ ಚಿತ್ರಿಸಿರುವುದನ್ನು ಗಮನಿಸಬಹುದು. ಈ ಕಾವ್ಯ ಪುರಾಣಗಳು ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ ಇತ್ಯಾದಿ ಪ್ರಕಾರಗಳಲ್ಲಿ ರಚನೆಗೊಂಡಿವೆ. ಪೌರಾಣಿಕ ಕಥೆಗಳಿಂದಾವೃತ ವಾಗಿದ್ದರೂ ಬಸವಣ್ಣ ಹಾಗೂ ಆತನ ಸಮಕಾಲೀನ ಶರಣರ ಚರಿತ್ರೆಗೆ ಸಂಬಂಧಿಸಿದ ಅನೇಕ ಚಾರಿತ್ರಿಕ ಸಂಗತಿಗಳನ್ನು ತಿಳಿದುಕೊಳ್ಳುವಲ್ಲಿ ಇವು ಆಕರಗಳಾಗಿ ಸಹಾಯಕಾರಿ ಯಾಗುತ್ತವೆ. ಈ ಹಿನ್ನೆಲೆಯಲ್ಲಿ ಹರಿಹರನ ಬಸವರಾಜದೇವರ ರಗಳೆಯು ಬಸವಣ್ಣನ ಚರಿತ್ರೆಯನ್ನು ನಿರೂಪಿಸುವ ಮೊದಲ ಕೃತಿಯಾಗಿದೆ. ನಂತರದಲ್ಲಿ ಅನೇಕ ಕವಿಗಳು ಬಸವಣ್ಣನ ಜೀವನ ಮತ್ತು ಆತನ ಕಾರ್ಯಸಾಧನೆಗಳನ್ನು ವರ್ಣನಾತ್ಮಕವಾಗಿ ವಿವಿಧ ಛಂದಸ್ಸಿನ ಮೂಲಕ ಚಿತ್ರಿಸಿದ್ದಾರೆ. ಆ ಮೂಲಕ ಬಸವನ ವ್ಯಕ್ತಿತ್ವ ಮತ್ತು ಕರ್ತೃತ್ವಶಕ್ತಿಯನ್ನು ನಾಡಿನ ಜನತೆಗೆ ಪರಿಚಯಿಸುವ ಪ್ರಯತ್ನ ನಿಜಕ್ಕೂ

ಶ್ಲಾಘನೀಯವಾದುದು. ಇಂಥ ಪ್ರಯತ್ನದಲ್ಲಿ ಅನೇಕ ಕವಿಗಳು ಕೃತಿಗಳನ್ನು ರಚಿಸಿರುವುದರ ಮೂಲಕ ಕನ್ನಡ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನೂ ನೀಡಿದ್ದಾರೆ. ದೇಶೀ ಛಂದಸ್ಸಾದ ಸಾಂಗತ್ಯವೊಂದರಲ್ಲಿಯೇ ಬಸವಣ್ಣನನ್ನು ಕುರಿತಂತೆ ಏಳು ಕೃತಿಗಳು ಹುಟ್ಟಿಕೊಂಡಿವೆ. ಅವು ಹೀಗಿವೆ: 1. ಪಂಚಯ್ಯ ಕವಿಯ ಭಕ್ತಿರಸಸೋನೆ (1650), 2. ಗುರುಚನ್ನಬಸವ ಶಿಷ್ಯನ ಬಸವ ಪವಾಡ (1650), 3. ವಿಠಲನ ಬಸವ ಪವಾಡ ಪುರಾಣ (1704), 4. ಗುರುಸಿದ್ಧೇಶನ ಬಸವ ಸಂಪಾದನೆ (18ನೆಯ ಶತಮಾನ), 5. ಹಾರುವ ಕವಿಯ ಬಸವ ಸಾಂಗತ್ಯ (1700), 6. ಗರಣಿ ಬಸವಲಿಂಗ ಕವಿಯ ಬಸವೇಶ್ವರನ ಕಾವ್ಯ (1700), 7. ಕಾಡನ ಬಸವ ಶಿಖಾಮಣಿ (1700). ಇಂಥ ಕೃತಿಗಳಲ್ಲಿ ಪಂಚಯ್ಯನ ಭಕ್ತಿರಸಸೋನೆ ಕಾವ್ಯವು ಪ್ರಮುಖವಾಗಿದೆ.

## 2. ಕವಿಯ ಇತಿವೃತ್ತ ವಿಚಾರ

"ಭಕ್ತಿರಸದ ಸುಲಕ್ಷಣವೆಂತೆನೆ ಮೌಕ್ತಿಕ ಮಣಿಗಳನೊದವಿ ಯುಕ್ತಿಯಿಂದಲಿ ಸರಗೈದೊಲು ಪಂಚಯ್ಯ ಮುಕ್ತಿಯ ಕಥೆಯ ಪೇಳಿದೆನು" (1-28) ಎಂದು ಕವಿ ಆರಂಭದಲ್ಲಿಯೇ ಹೇಳಿದ್ದಾನೆ. ಇದರಿಂದ ಭಕ್ತಿರಸಸೋನೆಯ ಕರ್ತೃ ಪಂಚಯ್ಯನೆಂಬುದು ಸ್ಪಷ್ಟ. ಮತ್ತೊಂದು ಪದ್ಯ (25-50)ದಲ್ಲಿ ಸತಿ ವೀರಮ್ಮ ಪತಿ ಬಸವಾರ್ಯ ಅವರ ಮಗನೇ ಪಂಚಯ್ಯನೆಂದು ತನ್ನ ತಂದೆತಾಯಿಗಳ ಬಗೆಗೂ ಕವಿ ಹೇಳಿಕೊಂಡಿರುವುದನ್ನು ಕಾಣಬಹುದು. ಇನ್ನು "ಪರಮ ಸದ್ಗುರು ನಂಜೇಶ್ವರ ಪೇಮದ ಶಿಷ್ಯ ಕರುಣಿ ಪಂಚಾಕ್ಷರಯ್ಯಗಳ ಕರಕಂಜರದೊಳು ಮಂತ್ರವರದಿಂದ ಜನಿಸಿದ ವರನಾಮವೆಂತೆಂದೆನಲು" (25-49) ಎಂಬ ಪದ್ಯವು ಪಂಚಯ್ಯನ ಗುರುಪರಂಪರೆಯನ್ನು ತಿಳಿಸುತ್ತದೆ. ಇದರಿಂದ ನಂಜೇಶ್ವರನ ಶಿಷ್ಯನಾದ ಪಂಚಾಕ್ಷರಯ್ಯನು ಈತನ ಗುರು.

ಹೀಗೆ ತಂದೆತಾಯಿಗಳ ಬಗೆಗೆ ಹೇಳಿಕೊಂಡ ಪಂಚಯ್ಯ ತನ್ನ ಜೀವಿತಾವಧಿಯ ಬಗ್ಗೆಯಾಗಲಿ ಅಥವಾ ತನ್ನ ಊರಿನ ಬಗ್ಗೆಯಾಗಲಿ ಕಾವ್ಯದಲ್ಲಿ ಸ್ಪಷ್ಟವಾಗಿ ಎಲ್ಲಿಯೂ ಹೇಳಿಕೊಂಡಿಲ್ಲ. ಹೀಗಿದ್ದರೂ ಆರ್. ನರಸಿಂಹಾಚಾರ್, ಹಂಪ ನಾಗರಾಜಯ್ಯ, ವೀರಣ್ಣ ರಾಜೂರ ಮೊದಲಾದ ವಿದ್ವಾಂಸರು ಕವಿಯ ಪರಿಸರ, ಕೃತಿ ರಚನೆಯಾದ ಸಂದರ್ಭವನ್ನು ಅನುಲಕ್ಷಿಸಿ ಈತನ ಕಾಲ ಸುಮಾರು 1650 ಎಂದು ಅಭಿಪ್ರಾಯಪಟ್ಟಿದ್ದಾರೆ.[1] ಹದಿನೇಳನೆಯ ಶತಮಾನ ಸಾಂಗತ್ಯ ಸಾಹಿತ್ಯದ ಸುವರ್ಣಕಾಲವಾಗಿತ್ತು. ಭಕ್ತಿರಸಸೋನೆಯಲ್ಲಿ ವಿಜಯನಗರ ಕಾಲದ ದಿವಾಣ, ಪೌಜ, ಕೊತ್ತಳ ಫಿರಂಗಿ, ಮದ್ದು ಮಂಚಿಕೆ ಮೊದಲಾದ ಪದಗಳು ಬಳಕೆಯಾಗಿವೆ. ಆದ್ದರಿಂದ ಸದ್ಯಕ್ಕೆ ಈ ಅಭಿಪ್ರಾಯವನ್ನು ಒಪ್ಪಬಹುದಾಗಿದೆ ಎಂದು ಭಕ್ತಿರಸಸೋನೆ ಕೃತಿಯನ್ನು ಪರಿಷ್ಕರಿಸಿ ಸಂಪಾದಿಸಿದ ಬಿ.ವಿ. ಶಿರೂರ ಅವರು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ.[2] ಭಕ್ತಿರಸಸೋನೆಯ ತಾಳೆಪ್ರತಿ (ಕನ್ನಡ ಅಧ್ಯಯನ ಪೀಠದ 1219ನೆಯ ಕ್ರಮಾಂಕದ ತಾಳೆಪ್ರತಿ)ಯೊಂದರ ಕೊನೆಯಲ್ಲಿರುವ ಪ್ರಶಸ್ತಿಯ ಭಾಗ ಪಂಚಯ್ಯನ ಕಾಲವನ್ನು ನಿರ್ಣಯಿಸುವಲ್ಲಿ ಸಹಾಯಕವಾಗಬಹುದು. ಅದು ಹೀಗಿದೆ:



"ಶ್ರೀ ಗುರು ಬಸವಲಿಂಗಾಯ ನಮಃ|| ಪ್ರಮದೂತ ನಾಮ ಸಂವತ್ಸರದ ಶ್ರವಣ ಬ|| 15 ಶುಕ್ರವಾರ ಪ್ರಬತ್ಯೆ ಕಾಲದ ತಾಸು 3ರಲ್ಲು ಚಂದ್ರನ ಹೋರ್ಯದಲ್ಲಿ ರೋಹಿಣಿ ನಕ್ಷತ್ರದಲ್ಲಿ | ಬಿಲ್ಲಹಳ್ಳಿ ಓದಿಸುವ ಗುರುಬಸಪ್ಪದೇವರವರ ಗರ್ಭೋದಯವಾದ ಪರು... (ವತ)ಯನು ಭಕ್ತಿರಸಸೋನೆಯ ತಮ್ಮ ಅಮೃತ ಸುಹಸ್ತದಲಿ ಬರದ ಬರಹಕ್ಕೆ ಶುಭಮಸ್ತು|| ತಪ್ಪ ಬರದಾತ ಕಡಜಡುನಪ್ಪು ತಪ್ಪಕ್ಕುಸುದ್ದಮಕ್ಕುತಪ್ಪುಳ್ಳಡೆ ತಿದ್ದಿಕೊಂಬುದು ಉತ್ತಮ ||

ಶಾಲಿವಾಹನ ಶಕ ವರುಷ 1672ನೆಯ ಪ್ರಮಧೂತನಾಮ ಸಂವತ್ಸರದಲ್ಲಿ ಬರದ ಪುಸ್ತಕಕ್ಕೆ ಶುಭಮಸ್ತು || ಶ್ರೀಮತು ಸಚ್ಚಿದಾನಂದ ನಿತ್ಯ ಪರಿಪೂರ್ಣ ಅವಿರಳ ಪರಂಜ್ಯೋತಿ ಚಿಕ್ಕಜಂಬೂರ ಕಂಬಾಳಮಠದ ಚರಮೂರ್ತಿ ಕೊಟ್ಟೂರಸ್ವಾಮಿಗಳ ಪಾದಕರಕಂಜಕ್ಕೆ | ಶಿಷ್ಯನಾದ ಬಿಲ್ಲಹಳ್ಳಿ ಓದಿಸುವ ಪರುವತಯ್ಯನವರು ಕೊಡಲಂಘ್ರಿಗೆ | ಕರಜಬಿಳ ಶಿವಪ್ಪನ ಗರ್ಭೋತ್ಪತ್ಯವಾದ ಸಿರಗಪ್ಪನ ಮಗ ಬಾಲಚಂದ್ರನಾದ ಸಿದ್ಧಮಲ್ಲಗೆ ಧನಕನಕ ವಸ್ತ್ರವಾಹನ ಸಮೃದ್ಧಿಯಾಗಲೆಂದು | ಬಸವಣ್ಣನ ಭಕ್ತಿರಸದ ಸೋನೆ ಮುಗಿದ ಪ್ರಮಾಣ ಸನ್ನು 1296 ಫಸಲಿ ಮಿತಿ ಆಷಾಢ ಬಹುಳ 14 ಭೃಗುವಾಸರ ಪ್ರಥಮ ಅಮೃತಘಟಿಕಾ ಸಿದ್ಧಿಯೋಗದಲ್ಲಿ ಮುಗಿಯಿತ್ತು|| " (ಭಕ್ತಿರಸಸೋನೆ ಪು. 206)

ಅಂದರೆ ಶಾಲಿವಾಹನ ಶಕ 1672ನೆಯ ಪೂರ್ವದಲ್ಲಿಯೇ ಭಕ್ತಿರಸಸೋನೆ ರಚನೆಯಾಗಿರುವುದು ಈ ಪ್ರಶಸ್ತಿಯಿಂದ ಸ್ಪಷ್ಟವಾಗುತ್ತದೆ. ಹಾಗೆಯೇ ಭಕ್ತಿರಸಸೋನೆಯ ಇನ್ನೊಂದು ಕಾಗದ ಪ್ರತಿ (ಕನ್ನಡ ಅಧ್ಯಯನ ಪೀಠದ 2582ನೇ ಕ್ರಮಾಂಕದ ಕಾಗದ ಪ್ರತಿ)ಯನ್ನು ಹಂಡೆ ರಾಮಪ್ಪನಾಯಕರು ಬಳ್ಳಾರಿ ಮಹಾನಾಡಿನ ಶಾನಭೋಗ ಮಲ್ಲಪ್ಪನ ಸ್ವಹಸ್ತದಿಂದ ಬರೆಸಿ ತೋಂಟದ ಸಿದ್ಧೇಶ್ವರ ದೇವರ ಸಂಪ್ರದಾಯದವರಾದ ವಿರಕ್ತಮಠದ ನೀಲಕಂಠಸ್ವಾಮಿಗಳವರಿಗೆ ಕೊಟ್ಟಿದ್ದನ್ನು ಕನ್ನಡ ಅಧ್ಯಯನಪೀಠದ 2582ನೆಯ ಕ್ರಮಾಂಕದ ಕಾಗದ ಪ್ರತಿಯ ಅಂತ್ಯಭಾಗದ ಪ್ರಶಸ್ತಿ (ಭಕ್ತಿರಸಸೋನೆ ಪು. 204)ಯು ಹೇಳುತ್ತದೆ. ಹಂಡೆ ಅರಸುಮನೆತನದ ರಾಮಪ್ಪ ನಾಯಕನ ಕಾಲ ಕ್ರಿ.ಶ. 1735ರಿಂದ 1764.[3] ಕೃತಿಯ ಕೊನೆಯ ಭಾಗದಲ್ಲಿ ಕಂತೆಯ ಶಿವಲಿಂಗಸ್ವಾಮಿ, ಕರಿಬಸವರಾಜೇಂದ್ರ, ರಾಚವಟ್ಟಿಯನ್ನು ಸ್ಮರಣೆ ಮಾಡಿದ್ದಾನೆ. "ತರುಣನ ಬಿನ್ನಹ ಕರುಣದಿ ಲಾಲಿಸಿ ಬರಹದಲ್ಲು ಕುಂದುಕೊರತೆ ಯಿರಲಂತು ಪ್ರಭುಡರು ಒಲಿದು ತಿದ್ದುವ ಶಿವ ಶರಣರ ಭೃತ್ಯ ರಾಚವಟ್ಟಿ" (25-59) ಎಂದು ಸ್ತುತಿಸಿದ್ದಾನೆ. ರಾಚವಟ್ಟಿ ಭಕ್ತಿರಸಸೋನೆಯಲ್ಲಿರುವ ದೋಷಗಳನ್ನು ತಿದ್ದಿರುವುದು ಮೇಲಿನ ಪದ್ಯದಿಂದ ತಿಳಿಯುತ್ತದೆ. ಈ ರಾಚವಟ್ಟಿ ಯಾರು ಎಂಬ ಪ್ರಶ್ನೆ ಇಲ್ಲಿ

ಉದ್ಭವಿಸುತ್ತದೆ. ಹಸ್ತಪ್ರತಿ ಲಿಪಿಕಾರರಲ್ಲಿ ಗುರುಪಾದದೇವನ ಶಿಷ್ಯ ರಾಚವಟ್ಟಿದೇವ, ಬರಹದ ರಾಚವಟ್ಟಿದೇವ, ಸಾತಕಳಲಿ ರಾಚವಟ್ಟಿಸ್ವಾಮಿ (ಶ. 1627), ಬೆಳಕಟಿ ರಾಚವಟೀದೇವ (ಶ. 1778) ಎಂಬ ವ್ಯಕ್ತಿಗಳು ಆಗಿಹೋಗಿದ್ದಾರೆ.[4] ಇವರಲ್ಲಿ ಬಹುಶಃ 1778ರಲ್ಲಿದ್ದ ಬೆಳಕಟಿ ರಾಚವಟೀದೇವನೇ ಭಕ್ತಿರಸಸೋನೆ ಉಲ್ಲೇಖಿತ ರಾಚವಟ್ಟಿಯಾಗಿರಬಹುದು. ಇದಕ್ಕೆ ಇನ್ನೂ ಆಧಾರಗಳು ಬೇಕು. ಇಂಥ ಎಲ್ಲ ಉಲ್ಲೇಖಗಳನ್ನು ಅವಲೋಕಿಸಿ ಹೇಳುವುದಾದರೆ ಪಂಚಯ್ಯನು ಹದಿನೇಳನೆಯ ಶತಮಾನದಲ್ಲಿ ಬದುಕು ಬಾಳಿ ಭಕ್ತಿರಸಸೋನೆಯನ್ನು ರಚನೆ ಮಾಡಿರಬಹುದು.

ಇನ್ನು ಕವಿ ಯಾವ ಊರಿನವನು ಅಥವಾ ಯಾವ ಪ್ರದೇಶದವನು ಎಂಬುದನ್ನೂ ಕಾವ್ಯದಲ್ಲಿ ಸ್ಪಷ್ಟವಾಗಿ ಹೇಳಿಲ್ಲ. ಆದರೂ ಕೃತಿಯ ಕೆಲವೆಡೆ ಸೊಗಲ ಊರಿನ ಪ್ರಸ್ತಾಪವನ್ನು ಕವಿ ಮಾಡಿದ್ದಾನೆ. ಸೊಗಲದುನ್ನುತ ಗಿರಿತರುಗಳನತಿ ಹರುಷದಲಿ ನೋಡುತಲಿ (4-22), ಉನ್ನತ ಸೊಗಲದ ಚೆನ್ನಸೋಮೇಶನೆಂದೆನ್ನ ನಾಮವು (4-42), ಸೊಗಲದ ಸೋಮೇಶನೆಂಬ ನಾಮದಲಿ (4-167) ಇಂಥ ಉಲ್ಲೇಖಗಳನ್ನು ಗಮನಿಸಿದರೆ ಬಹುಶಃ ಕವಿ ಪಂಚಯ್ಯ ಸೊಗಲ ಪ್ರದೇಶದವನಾಗಿರಬೇಕು. ಸೊಗಲ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಒಂದು ಗ್ರಾಮ. ಈ ಕೃತಿಯಲ್ಲಿ ಉಕ್ತವಾಗಿರುವ ಕೆಲವು ಪದಗಳು ಉತ್ತರ ಕರ್ನಾಟಕದ ಜನಬಳಕೆಯ ಮಾದರಿಗಳಾಗಿವೆ. ಉದಾಹರಣೆಗೆ ಹಂದರ (15-27), ಬಾರುಕೋಲು (24-55), ಹಸಿಬಿ (15-75) ಇಂಥ ಪದಗಳ ಬಳಕೆ ಕಾರಣವಾಗಿ ಪಂಚಯ್ಯ ಸೊಗಲ ಗ್ರಾಮದವನೆಂದು ಹೇಳಲು ಸಾಧ್ಯವಿದೆ.

ಸುತ್ತೂರು ಬಸವೇಶನ ಪಾದವ ಅರ್ತಿಯಿಂದಲಿ ಬಲಗೊಂಬೆ (2-1) ಎಂಬ ಪದ್ಯದ ಸಾಲನ್ನು ಅನುಲಕ್ಷಿಸಿ ಬಿ.ವಿ. ಶಿರೂರ ಅವರು ಪಂಚಯ್ಯ ಮೈಸೂರು ಜಿಲ್ಲೆಯ ಸುತ್ತೂರು ಗ್ರಾಮದವನಾಗಿರಬಹುದೆಂದೂ ಊಹಿಸಿದ್ದಾರೆ.[5] ಆದರೆ ಈ ಪದ್ಯಕ್ಕೆ "ಸ್ತುತಿಸುವೆ ಗುರುವಿನ ಬಸವನ" ಎಂಬ ಪಾಠಾಂತರವನ್ನು ಶಿರೂರ ಅವರು ಅಡಿಯಲ್ಲಿ ಕೊಟ್ಟಿದ್ದಾರೆ. ಹೀಗಾಗಿ ಅಡಿಯಲ್ಲಿ ಕೊಟ್ಟಿರುವ ಪಾಠವೇ ಸರಿಯಾದುದು ಎಂಬುದು ನನ್ನ ಅಭಿಪ್ರಾಯವಾಗಿದೆ. ಅದೇನೇ ಇರಲಿ, ಪಂಚಯ್ಯನು ಸೊಗಲ ಪರಿಸರದಲ್ಲಿದ್ದುಕೊಂಡು ಭಕ್ತಿರಸಸೋನೆಯನ್ನು ರಚಿಸಿರಬಹುದೆಂದು ಸದ್ಯಕ್ಕೆ ತೀರ್ಮಾನಿಸಬಹುದು.

### 3. ಭಕ್ತಿರಸಸೋನೆ: ಕೃತಿಸ್ವರೂಪ

ಭಕ್ತಿರಸಸೋನೆ ಸಾಂಗತ್ಯ ಛಂದಸ್ಸಿನಲ್ಲಿ ರಚನೆಗೊಂಡ ಒಂದು ದೇಶೀ ಕಾವ್ಯ. ಭಕ್ತಿರಸ ಇದರ ಸ್ಥಾಯಿಗುಣ. 25 ಸಂಧಿ 2409 ಸಾಂಗತ್ಯ ಪದ್ಯಗಳನ್ನೊಳಗೊಂಡಿದೆ. ಕೆಲವೆಡೆ ಕಂದ ಷಟ್ಪದಿ ಛಂದಸ್ಸಿನಲ್ಲಿ ಪದ್ಯಗಳಿವೆ. ಕಾವ್ಯದ ಪ್ರತಿ ಸಂಧಿಯ ಆರಂಭದಲ್ಲಿ ರಾಗ ತಾಳಗಳು ಉಲ್ಲೇಖಗಳಿವೆ. ಕೃತಿಯ ಶೀರ್ಷಿಕೆ ಭಕ್ತಿರಸಸೋನೆ. ಸೋನೆ ಎಂದರೆ



ತುಂತುರು ಮಳೆ, ಅಂದರೆ ಭಕ್ತಿರಸವು ತುಂತುರು ಮಳೆಯಂತೆ ಈ ಕಾವ್ಯದಲ್ಲಿ ಸುರಿದಿದೆ ಎಂಬರ್ಥದಲ್ಲಿ ಕವಿ ತನ್ನ ಕೃತಿಗೆ ಭಕ್ತಿರಸಸೋನೆ ಎಂಬ ಶೀರ್ಷಿಕೆಯನ್ನು ಕೊಟ್ಟಿದ್ದಾನೆ. ಈ ಕೃತಿಗೆ ಬಸವರಾಜನ ಭಕ್ತಿರಸಸೋನೆ (25-48), ಬಸವ ಸಾಂಗತ್ಯ (20-122) ಎಂದೂ ಕರೆದಿದ್ದಾನೆ. ಇದನ್ನೇ ಕವಿ "ಮೌಕ್ತಿಕದ ಮಣಿಗಳೊದವಿ ಯುಕ್ತಿಯಿಂದಲಿ ಸರಗೈದೊಲು ಪಂಚಯ್ಯ ಮುಕ್ತಿಯ ಕಥೆಯ ಪೇಳಿದನು" (1-29) ಎಂದು ಪರ್ಯಾಯವಾಗಿ ಹೇಳಿರುವನು. ಈ ಕೃತಿ ರಚನೆಯ ಹಿಂದಿರುವ ಉದ್ದೇಶವನ್ನು ಕವಿ ತುಂಬ ಮಾರ್ಮಿಕವಾಗಿ ಪದ್ಯವೊಂದರಲ್ಲಿ ಹೀಗೆ ಹೇಳಿದ್ದಾನೆ:

> ಭಕ್ತಿರಸದ ಸೋನೆ ಚಿತ್ತಜರಿಪು ತನ್ನ
> ಶಕ್ತಿಗೊರದನವನಿಯಲಿ
> ಪುತ್ರನೆನ್ನಯ ಪಂಚ ವಿಸ್ತರಿಸೆನಲಾಗ
> ಬಿತ್ತಿದೆ ಸುಜನರ ಕಿವಿಗೆ (1-3)

ಇದನ್ನೇ ಕಾವ್ಯದ ಕೊನೆಯಲ್ಲಿ

> ಬಸವರಾಜನ ಭಕ್ತಿರಸಸೋನೆಯನು ಸಂ
> ತಸದಿ ಬಂದೆನ್ನ ಸ್ವಪ್ನದಲಿ
> ಉಸುರೆನಲುಸುರಿಟದೆ ಹುಸಿಯೆಂಬವರ ಬಾಯ
> ಕಿಸಿದು ಕೊಲ್ಲಿಸುವ ಶಂಕರನು (25-48)

ಶಿವನ ಆದೇಶದ ಮೇರೆಗೆ ತಾನು ಈ ಕೃತಿಯನ್ನು ರಚಿಸಿರುವೆನೆಂದು ಕವಿ ಇಲ್ಲಿ ಹೇಳಿಕೊಂಡಿದ್ದಾನೆ. ಹಾಗೆಯೇ "ಪರಶಿವಮೂರ್ತಿಯ ತನ್ನಯ ವರಸತಿ ಪಾರ್ವತಿಗೆ ಭಕ್ತಿರಸಸೋನೆಯೊಳು ವಿರಚಿಸಿ ಪೇಳಿದ ಕಥೆಗಳ ಹರಭಕ್ತರು ಅರಿಪಂತೆ ಪೇಳುವೆನಿದ ನಾಂ" (1-ಕಂದ) ಮತ್ತು "ಸಿತಕಂಠ ತನ್ನ ವರಸತಿ ಪಾರ್ವತಿಗೆ ಉನ್ನತ ಭಕ್ತಿರಸಸೋನೆಯನು ನುತಿಸಿ ಪೇಳಿದ ಚೆಲ್ವ ಕಥೆರಸವನು ಶಿವನತಿಶಯಭಕ್ತರು ಕೇಳಿ" (1-2) ಎಂದು ಭಕ್ತಿಭಾವದಿಂದ ಈ ಕೃತಿಯನ್ನು ರಚಿಸುತ್ತೇನೆಂದು ಕವಿ ಆರಂಭದಲ್ಲಿ ಹೇಳಿದ್ದಾನೆ. ಪೂರ್ವಕವಿಗಳಾದ ಬಾಣ, ಮಯೂರ, ಉದ್ಭಟ, ಕಾಳಿದಾಸ, ನಂಬಿಯಣ್ಣ, ಹರಿಹರ, ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು ಮೊದಲಾದ ಅಸಂಖ್ಯಾತ ಶರಣರಿಗೆ ಭಕ್ತಕವಿಗಳಿಗೆ ನಮಿಸುತ್ತ ಭಕ್ತಿರಸಸೋನೆಯನು ಉಸುರುತ್ತೇನೆ (1-24, 25, 27) ಎಂದು ಕವಿ ಭಾವತುಂಬಿ ನುಡಿದಿದ್ದಾನೆ.

### 4. ಭಕ್ತಿರಸಸೋನೆ: ಆಕರಗಳು

ಪ್ರಧಾನವಾಗಿ ಬಸವಣ್ಣನ ಚರಿತ್ರೆಯನ್ನು ನಿರೂಪಿಸುವ ಭಕ್ತಿರಸಸೋನೆ ಕೃತಿಗೆ ರಾಮಾಯಣ, ಮಹಾಭಾರತ, ಪ್ರಾಚೀನ ಕಾವ್ಯಪುರಾಣ, ಜಾನಪದ ಮೂಲಗಳಿಂದ ಅನೇಕ ಕಥೆ ಹಾಗೂ ಘಟನೆಗಳನ್ನು ಕವಿ ತನ್ನ ಕೃತಿಗೆ ಆಯ್ದುಕೊಂಡಿರುವನು. ಶಿವಶರಣರ

ವಚನಗಳು, ಹರಿಹರನ ಗಿರಿಜಾಕಲ್ಯಾಣ, ಲಕ್ಕಣ್ಣ ದಂಡೇಶನ ಶಿವತತ್ವ ಚಿಂತಾಮಣಿ, ಶಾಂತಲಿಂಗದೇಶಿಕನ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ, ವಿರೂಪಾಕ್ಷ ಪಂಡಿತನ ಚನ್ನಬಸವಪುರಾಣ, ಸಿಂಗಿರಾಜನ ಸಿಂಗಿರಾಜ ಪುರಾಣ ಮೊದಲಾದ ಕಾವ್ಯ ಪುರಾಣಗಳಲ್ಲಿ ನಿರೂಪಿತಗೊಂಡ ಕಥೆಗಳನ್ನು ತನ್ನ ಕಾವ್ಯಕ್ಕೆ ಪೂರಕವಾಗಿ ರೂಪಾಂತರ ಮಾಡಿಕೊಂಡಿದ್ದನ್ನು ಈ ಕೃತಿಯುದ್ದಕ್ಕೂ ಕಾಣಬಹುದು. ದಕ್ಷಬ್ರಹ್ಮನ ಪ್ರಸಂಗ, ಕಾಮದಹನ ಪ್ರಸಂಗ, ತಾರಕಾಸುರನ ಕಥೆ, ಹರಿಶ್ಚಂದ್ರನ ಕಥೆಯಂಥ ಅನೇಕ ಪ್ರಸಂಗಗಳನ್ನು ಸಂದರ್ಭೋಚಿತವಾಗಿ ಕಾವ್ಯದಲ್ಲಿ ತಂದಿರುವುದು ಕವಿಯ ಔಚಿತ್ಯಪ್ರಜ್ಞೆಗೆ ನಿದರ್ಶನವಾಗಿದೆ.

ಈ ಕಾವ್ಯವನ್ನು ಪೂರ್ಣವಾಗಿ ಓದಿದಾಗ ಸಿಂಗಿರಾಜನ ಸಿಂಗಿರಾಜ ಪುರಾಣದ ಪ್ರಭಾವ ಸ್ಪಷ್ಟವಾಗಿ ತೋರುತ್ತದೆ. ಅನಿಮಿಷಯ್ಯನ ಕಥೆ, ಕಿನ್ನರಿ ಬ್ರಹ್ಮಯ್ಯನ ಪ್ರಸಂಗ, ಬಸವೇಶನು ಬಾಗೇವಾಡಿಯಲ್ಲಿ ಹುಟ್ಟಿದ ಕಥೆ, ಕಲ್ಯಾಣಕ್ಕೆ ಬಂದ ಘಟನೆ, ಸಿದ್ಧರಾಮ, ಚನ್ನಬಸವ, ಪ್ರಭುದೇವ, ಮಧುವರಸರ ಕಥೆ, ಗೋರಾಂಟಕನ ಕಥೆ ಮುಂತಾದ ಅನೇಕ ಘಟನೆಗಳು ಸಿಂಗಿರಾಜ ಪುರಾಣದ ಪಡಿಯಚ್ಚಿನಂತಿವೆ. ಆದರೂ ಪಂಚಯ್ಯ ತನ್ನ ಸೃಜನಶೀಲ ಮನೋಧರ್ಮದಿಂದಾಗಿ ಹೇಳುವ ಪ್ರತಿಯೊಂದು ಸನ್ನಿವೇಶ ಸಂದರ್ಭಗಳು ಹೊಸತೆನಿಸುತ್ತವೆ. ಕಥೆಗಳು ಅಥವಾ ಪ್ರಸಂಗಗಳು ಪಾರಂಪರಿಕವಾಗಿದ್ದರೂ ಅವುಗಳಿಗೆ ಹೊಸ ಸ್ಪರ್ಶವನ್ನು ನೀಡುವುದರ ಮೂಲಕ ಬಸವಣ್ಣನ ಚರಿತ್ರೆಯನ್ನು ಹೊಸರೂಪದಲ್ಲಿ ಕಟ್ಟಿಕೊಡುವಲ್ಲಿ ಪಂಚಯ್ಯ ಯಶಸ್ವಿಯಾಗಿದ್ದಾನೆ.

### 5. ಭಕ್ತಿರಸಸೋನೆ: ಕಥಾವಸ್ತು

ಈಗಾಗಲೇ ಹೇಳಿದಂತೆ ಭಕ್ತಿರಸಸೋನೆ ಮುಖ್ಯವಾಗಿ ಬಸವಣ್ಣನ ಚರಿತ್ರೆಯನ್ನು ನಿರೂಪಿಸುವ ಕೃತಿ. ಇದರಲ್ಲಿ ಅನೇಕ ಪೌರಾಣಿಕ ಹಾಗೂ ಚಾರಿತ್ರಿಕ ವ್ಯಕ್ತಿ ಹಾಗೂ ಘಟನೆಗಳಿಗೆ ಸಂಬಂಧಿಸಿದ ಹಲವಾರು ಕಥೆ, ಉಪಕಥೆಗಳು ಹೆಣೆದುಕೊಂಡಿವೆ. ಈ ಎಲ್ಲ ಕಥೆಗಳು ಬಸವಣ್ಣನ ಚರಿತ್ರೆಗೆ ಪೂರಕವಾಗಿರುವುದು ಭಕ್ತಿರಸಸೋನೆಯ ವಿಶೇಷತೆ. ಈ ಕಾವ್ಯದ ಕಥಾವಸ್ತುವನ್ನು ಬಿ.ವಿ. ಶಿರೂರ ಅವರು 1. ಬಸವಣ್ಣನ ಪರಲೋಕದ ಬದುಕು 2. ಬಸವಣ್ಣನ ಇಹಲೋಕದ ಬದುಕು ಎಂದು ಎರಡು ರೀತಿಗಳಲ್ಲಿ ವಿಂಗಡಿಸಿ ವಿಶ್ಲೇಷಿಸಿದ್ದಾರೆ. ಈ ವಿಂಗಡಣೆಯನ್ನೇ ವೀರಣ್ಣ ರಾಜೂರ ಅವರು ಬಸವಣ್ಣನ ಪೂರ್ವ ಜೀವನ ಮತ್ತು ಭೂಲೋಕ ಜೀವನ ಎಂದು ವಿಂಗಡಿಸಿ ಅವಲೋಕನ ಮಾಡಿದ್ದಾರೆ. ಇವರಿಬ್ಬರ ವಿಂಗಡಣ ಕ್ರಮ ಒಂದೇ ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಈಗ ಕಥಾವಸ್ತುವನ್ನು ಗಮನಿಸಬಹುದು.



#### ಅ. ಬಸವಣ್ಣನ ಪರಲೋಕದ ಜೀವನ

ಒಂದನೆಯ ಸಂಧಿಯಿಂದ ಹನ್ನೊಂದನೆಯ ಸಂಧಿಯವರೆಗೆ ಬಸವಣ್ಣನ ಪರಲೋಕದ ಜೀವನವನ್ನು ಕವಿ ಪಂಚಯ್ಯನು ಚಿತ್ರಿಸಿದ್ದಾನೆ. ವೀರಶೈವ ಪುರಾಣ ಲಕ್ಷಣಗಳ ಹಿನ್ನೆಲೆಯಲ್ಲಿಯೇ ಕವಿ ಆರಂಭದಲ್ಲಿ ಸಮುದ್ರ, ಮೇರುಕೈಲಾಸದ ವರ್ಣನೆಯೊಂದಿಗೆ ಕಾವ್ಯವನ್ನು ಪ್ರಾರಂಭಿಸಿರುವನು. ಶಿವನ ಒಡ್ಡೋಲಗ, ದೇವಾನುದೇವತೆಗಳ ಸ್ತುತಿ, ಭೃಂಗೀಶನ ನೃತ್ಯ, ರಂಭೆ, ಊರ್ವಶಿಯರ ನೃತ್ಯ ಇತ್ಯಾದಿ ವರ್ಣನೆಗಳು ಇಲ್ಲಿವೆ.

"ಬಸವನ ಕಥೆಯನು ಒಸೆದು ಲಾಲಿಸಿದರ್ಗೆ ಮುಸುಕಿದ ಪಾಪ ಪರಿವುದು ಹೆಸರಿಟ್ಟು ಕರೆದರೆ ಎಸೆವ ಸಾಲೋಕ್ಯವು ಶಶಿಮುಖಿ ಕೇಳೆನ್ನ ಸಿರಿಯೆ" (2-6) "ಬಸವಯಂಬಿವು ಮೂರು ಎಸೆವ ಅಕ್ಷರವ ಉಸುರಿದವರಿಗೆ ಸಾಯುಜ್ಯ" (2-7) ಪದವಿ ದೊರಕುತ್ತದೆ ಎಂದು ಶಿವನು ಪಾರ್ವತಿಗೆ ಹೇಳುತ್ತಾನೆ. ಹೀಗೆ ಹೇಳುತ್ತಿರುವಾಗ ವೃಷಭನು ಮೂತ್ರಗರೆಯಿತು. ಆಗ ಇಂದ್ರ ದಕ್ಷರು ಕೋಪಗೊಂಡರು. ಆಗ ಶಿವ ಬಸವನ ಭಜಿಸಿ ಹೋದ ಸಿರಿ ಪಡೆ ಎಂದನು. ಆದರೆ ಇಂದ್ರ ಬಸವನ ಮೇಲೆ ಕೋಪೋದ್ರಿಕ್ತನಾದನು. ಆಗ ಬಸವನು ತನ್ನ ಕೋಡಿನಿಂದ ಇಂದ್ರನನ್ನು ಇರಿದು ಆಕಾಶಕ್ಕೆ ಹಾರಿಸಿದನು. ಇಂದ್ರನ ದೈನ್ಯತೆಯನ್ನು ಆಲಿಸಿದ ಶಿವನು ಬಸವನ ಬಳಿಗೆ ಬಂದು ಇಂದ್ರನ ಭಿಕ್ಷೆ ನೀಡಬೇಕೆಂದು ಕೇಳಿಕೊಂಡಾಗ ಆತನ ಸಿರಿಸಂಪತ್ತನ್ನು ಬಸವ ಮರಳಿ ಕೊಟ್ಟನು. ಹೀಗೆ ಬಸವಣ್ಣನ ವ್ಯಕ್ತಿತ್ವಕ್ಕೆ ಪೂರಕವಾಗಿ ದಕ್ಷನ ಕಥೆ, ಪಾರ್ವತಿ ಗಿರಿರಾಜನ ಮಗಳಾದ ಕಥೆ, ತಾರಕಾಸುರನ ಕಥೆ, ರಕ್ಕಸರ ದಿಕ್ಪಾಲಕರ ಕಥೆ, ಬಸವಣ್ಣ ರಾಕ್ಷಸರ ಮೇಲೆ ದಾಳಿ ಮಾಡಿದ ಕಥೆ, ತ್ರಿಪುರವನು ಸುಟ್ಟ ಕಥೆ, ಹನುಮ ಹುಟ್ಟಿದ ಕಥೆ, ಹರಿಶ್ಚಂದ್ರನ ಕಥೆ, ರಾಮಾಯಣ ಮಹಾಭಾರತದೊಳಗಿನ ಕಥೆಗಳು, ಕತ್ತಲೆರಾಯನ ಮಗ ಕಾಳಿಂಗನ ಕಥೆ, ಅನಿಮಿಷಯ್ಯನ ಕಥೆಗಳು ಎಡೆಪಡೆದಿವೆ. ಇಂಥ ಎಲ್ಲ ಕಥಾಪ್ರಸಂಗಗಳಲ್ಲಿ ಬಸವಣ್ಣನ ಇರುವಿಕೆಯನ್ನು ನೋಡಬಹುದು. ಉದಾಹರಣೆಗೆ ಹರಿಶ್ಚಂದ್ರನ ಪ್ರಸಂಗವನ್ನೇ ಇಲ್ಲಿ ಅವಲೋಕಿಸಬಹುದು. ಭೂಪತಿ ಹರಿಶ್ಚಂದ್ರನು ಸತಿ ಚಂದ್ರಮತಿಯನ್ನೂ ಸಹಿತ ಮಾರಿಕೊಂಡು ಕಾಶಿಯಲ್ಲಿ ಸುಡುಗಾಡು ಕಾಯುವ ಕಾಯಕದಲ್ಲಿ ನಿರತನಾಗಿರುತ್ತಾನೆ. ಆಗ ಬಸವಣ್ಣನು ಅಲ್ಲಿಗೆ ಆಗಮಿಸುತ್ತಾನೆ. ಆಗ ಹರಿಶ್ಚಂದ್ರನು ತ್ರಿಣಯವೋಹನನಾದ ಬಸವೇಶ ಬಂದನೆಂದು ಭೂವರನಾದ ಹರಿಶ್ಚಂದ್ರ ಶರಣೆನ್ನುತ್ತಾನೆ (9-6).

ರಾಮಾಯಣದಲ್ಲಿ ನಿರೂಪಿತಗೊಂಡ ಹನುಮನು ಸೀತೆಯನ್ನು ರಾಮನಿಗೆ ತಂದೊಪ್ಪಿಸಿದ ಘಟನೆ, ಮಹಾಭಾರತದಲ್ಲಿ ಬರುವ ಐರಾವತ ಪ್ರಸಂಗಗಳನ್ನೂ ಕವಿ ಇಲ್ಲಿ ಸಂದರ್ಭೋಚಿತವಾಗಿ ಚಿತ್ರಿಸಿದ್ದಾನೆ. ಮಹಾಭಾರತದ ಐರಾವತ ಪ್ರಸಂಗವಂತೂ ಮತ್ತಾವ ವೀರಶೈವ ಕಾವ್ಯ ಪುರಾಣಗಳಲ್ಲಿ ಉಕ್ತವಾಗಿಲ್ಲ. ಜಾನಪದ ಕಥೆಯಾದ

ಕತ್ತಲೆರಾಯನ ಮಗನಾದ ಕಾಳಿಂಗನ ಕಥೆ, ಲಿಂಗಮೋಹಿಯಾದ ಅನಿಮಿಷಯ್ಯನಿಗೆ ಬಸವಣ್ಣನು ಲಿಂಗವ ಕರುಣಿಸಿದ ಪ್ರಸಂಗ, ಹೀಗೆ ಈ ಕೃತಿಯಲ್ಲಿ ಅನೇಕ ಪೌರಾಣಿಕ ಕಥಾಪ್ರಸಂಗಗಳು ಬಸವಣ್ಣನ ವ್ಯಕ್ತಿತ್ವವನ್ನು ಉಜ್ವಲಗೊಳಿಸುವಂತೆ ಮಾಡಿವೆ.

**ಆ. ಬಸವಣ್ಣನ ಭೂಲೋಕದ ಜೀವನ**

ಹನ್ನೆರಡನೆಯ ಸಂಧಿಯಿಂದ ಇಪ್ಪತ್ತೈದನೆಯ ಸಂಧಿಯವರೆಗೆ ಬಸವಣ್ಣನ ಭೂಲೋಕದ ಬದುಕನ್ನು ವಿವರಿಸಲಾಗಿದೆ. ಬಸವಣ್ಣ ಅನಿಮಿಷಯ್ಯನಿಗೆ ಲಿಂಗವ ಕರುಣಿಸಿ ಕೈಲಾಸಕ್ಕೆ ಬಂದಾಗ ಕೊರಳಲ್ಲಿ ಲಿಂಗವಿರುವುದಿಲ್ಲ. ಇದನ್ನು ನೋಡಿದ ಬಾಗಿಲ ಕಾಯುವ ಮಹಾಕಾಳನು ಬಸವಣ್ಣನನ್ನು ಒಳಗೆ ಬಿಡುವುದಿಲ್ಲ. ಆಗ ಶಿವನು "ಮರ್ತ್ಯಕೆ ಪೋಗು ನೀ ಭಕ್ತರ ದೇವನೆ ತುತ್ತಿಡು ಗುರುಹಿರಿಯರಿಗೆ" (11-73), "ಧರೆಯೊಳು ಜಿನಪೂಜೆ ಹರಿಭಜನೆಯು ಬಹಳ ಮೆರೆವುತಲಿದೆ ಬಸವರಸ ಕರುಣದಿ ನೀ ಹೋಗಿ ಹರಭಕ್ತರನು ಮಾಡು ಪರಮಪಾವನ ಪುಣ್ಯಭರಿತ" (11-74)ನೆಂದು ಬಸವಣ್ಣನಿಗೆ ಹೇಳಿದನು. ಆಗ ಬಸವನು ಶಿವನಿಗೆ "ಧರೆಯೊಳಗೋರ್ವ ನಾನಿರಲಾರೆನು ದೇವ ಶರಣಸಂತತಿಯನು ಕೂಡಿ ಕರುಣಾಳು ಕಳುಪೆಂದು" (11-84) ಕೇಳಿಕೊಂಡನು. ಆತನ ಅಪೇಕ್ಷೆಯಂತೆ ಕೋಲಶಾಂತಯ್ಯ, ಹಡಪದಪ್ಪಣ್ಣ, ತಳವಾರ ರಾಮಯ್ಯ, ಕೊಂಡೆ ಮಂಚಣ್ಣ, ಮಡಿವಾಳ ಮಾಚಯ್ಯ ಮೊದಲಾದ ಶರಣಸಂಕುಲವನ್ನು ಕಳುಹಿಸಿಕೊಟ್ಟನು. ಬಾಗೇವಾಡಿಯಲ್ಲಿ ಬಸವಣ್ಣನು ಮಾದರಸ ಮಾದಮ್ಮರ ದಂಪತಿಗಳ ಮಗನಾಗಿ ಜನಿಸಿದ್ದು, ಶಿವ ಬಂದು ದೀಕ್ಷೆಯನ್ನು ಕೊಟ್ಟಿದ್ದು ಹುಡುಗರೊಂದಿಗೆ ಬಾಲಕ ಬಸವನು ಆಟವಾಡಿದ್ದು, ನಾಗಲಾಂಬಿಕೆಯೊಂದಿಗೆ ಕೂಡಲಸಂಗಮದ ಮೂಲಕ ಕಲ್ಯಾಣದತ್ತ ನಡೆದದ್ದು, ಅಲ್ಲಿ ಯಾರೂ ಓದದೇ ಇದ್ದ ಲಿಪಿಯನ್ನು ಓದಿ, ಸಿಂಹಾಸನದ ಕೆಳಗಿಟ್ಟಿದ್ದ ಅಪಾರ ನಿಧಿಯನ್ನು ತೋರಿಸಿ ಬಿಜ್ಜಳ ಬಲದೇವರ ಭಂಡಾರವನ್ನು ತುಂಬಿಸಿದ್ದು, ನಂತರ ಬಸವಣ್ಣನಿಗೆ ಪ್ರಧಾನಿ ಪಟ್ಟವನ್ನು ಕಟ್ಟಿದ (ಸಂಧಿ 12ರಿಂದ 14) ವಿವರಗಳಿವೆ.

ಬಸವಣ್ಣನಿಗೆ ಗಂಗಾಂಬಿಕೆ ಹಾಗೂ ನೀಲಾಂಬಿಕೆಯನ್ನು ಕೊಟ್ಟು ಮದುವೆ ಮಾಡುವ ಕಥೆ, ಕಲ್ಯಾಣದಲ್ಲಿ ಅನೇಕ ಪವಾಡಗಳನ್ನು ಮೆರೆದ ಪ್ರಸಂಗಗಳನ್ನು ಕವಿ ಅತ್ಯಂತ ವೈಭವಯುತವಾಗಿ ವರ್ಣಿಸಿದ್ದಾನೆ. ಬಿಜ್ಜಳನಿತ್ತ ಸುಣ್ಣ ಪ್ರಸಾದವೆಂದು ಸೇವಿಸಿದುದು, ಸತ್ತವನಿಗೆ ಪ್ರಾಣವಿತ್ತುದು, ಕಾಲಿಲ್ಲದವನಿಗೆ ಕಾಲನ್ನು ಕೊಟ್ಟದ್ದು, ಅರಸು ತನ್ನ ಬಟ್ಟೆಯನ್ನು ತೊಳೆಯಲು ಮಾಚಿದೇವನಿಗೆ ಕೊಟ್ಟಾಗ ಅವುಗಳನ್ನೆಲ್ಲ ಉರಿಗಣ್ಣಿನಿಂದ ಸುಟ್ಟುಹಾಕಿದ್ದು, ಮೇಲೇರಿ ಬಂದ ಅರಸನ ಆನೆಯನ್ನು ನೆಲಕ್ಕೆ ಅಪ್ಪಳಿಸಿದ್ದು, ಇವೆಲ್ಲ ಘಟನೆಗಳನ್ನು ಕಣ್ಣಾರೆ ಕಂಡ ಬಿಜ್ಜಳ ಬಸವನಲ್ಲಿಗೆ ಬಂದು ಪಾದಕ್ಕೆರಗುತ್ತಾನೆ. ಬಸವಣ್ಣನು ಮಡಿವಾಳ ಮಾಚಿದೇವನಿದ್ದಲ್ಲಿಗೆ ಬಂದು "ನರರು ನಿಮ್ಮಯ



ನೆಲೆಯರಿಯದೆ ಕೆಟ್ಟರು ವರ ವೀರಭದ್ರನೆಂಬುದನು ಕರುಣದಿಂದೀತನ ಹರಣವನುಳುಹೆಂದು" (16-107) ಆತನ ಚರಣಕ್ಕೆ ನಮಿಸಿದನು. ಲದ್ದೆಯ ಸೋಮ, ಅಗ್ಘವಣಿಯ ಹೊನ್ನ, ಚೆನ್ನಯ್ಯ, ಬ್ರಹ್ಮಯ್ಯ, ಕಕ್ಕಯ್ಯರ ಪ್ರಸ್ತಾಪ, ಅಲ್ಲಮ, ಸಿದ್ಧರಾಮರ ಭೇಟಿಯ ಪ್ರಸಂಗ, ಇಬ್ಬರೂ ಸೇರಿ ಕಲ್ಯಾಣಕ್ಕೆ ಆಗಮಿಸಿದ್ದು, ಸಿದ್ಧರಾಮನಿಗೆ ದೀಕ್ಷೆಯನ್ನು ನೀಡಿದ ವಿವರಗಳು ಇಲ್ಲಿವೆ.

ಬಸವಣ್ಣನ ಚರಿತ್ರೆಯೊಂದಿಗೆ ಮೇದಾರ ಕೇತಯ್ಯ, ಗೋರಾಂಟಕ, ಪ್ರಭುದೇವ, ಮೊಲ್ಲೆಬೊಮ್ಮಯ್ಯ, ಹರಳಯ್ಯ, ಮಧುವರಸರಂಥ ಅನೇಕ ಶಿವಶರಣರ ಜೀವನದಲ್ಲಿ ನಡೆದ ಸುಖದುಃಖದ ಪ್ರಸಂಗಗಳನ್ನು ಕವಿ ಸ್ಫುಟವಾಗಿ ಚಿತ್ರಿಸಿದ್ದಾನೆ. ಬಸವಣ್ಣ ಶರಣೆನ್ನಲು, ಹರಳಯ್ಯ ತನ್ನ ತೊಡೆಚರ್ಮದಿಂದ ಪಾದರಕ್ಷೆಗಳನ್ನು ಮಾಡಿಕೊಟ್ಟನು. ಬಸವಣ್ಣ ಅವುಗಳನ್ನು ಸ್ವೀಕರಿಸಿ ತಲೆಯ ಮೇಲಿಟ್ಟುಕೊಂಡು ಕುಣಿದು ಕುಪ್ಪಳಿಸಿದ. ಇದನ್ನು ಸಹಿಸದಾದ ಮಧುವರಸ ತಾನೇ ಆ ಪಾದರಕ್ಷೆಗಳನ್ನು ಮೆಟ್ಟಿದ. ಇದರಿಂದ ಆತನಿಗೆ ತೊನ್ನುರೋಗ ಹತ್ತಿತು. ಆ ರೋಗ ಹರಳಯ್ಯನ ಬಚ್ಚಲ ನೀರಿನಿಂದ ವಾಸಿಯಾಯಿತು. ಈ ವಿಷಯವನ್ನು ತಿಳಿದ ಮಧುವರಸ ತನ್ನ ಮಗಳಾದ ಚಂದವ್ವಳನ್ನು ಹರಳಯ್ಯನ ಮಗನಾದ ಸಂಗಯ್ಯನಿಗೆ ಕೊಟ್ಟು ಮದುವೆ ಮಾಡಿದನು. ಇದರಿಂದ ಬಿಜ್ಜಳ ಕೋಪಗೊಂಡು "ಕುಲಗೆಟ್ಟರಿಗೆ ಚೊಕ್ಕ ಕುಲದರು ಹೆಣ್ಣನು ಬಲುಹಿಂದಲಿತ್ತವರುಂಟೆ ಸಲುವಳಿಯಾದರೆ ಒಲಿದು ಪೇಳ್ಕೆ ನಂದಿ ಹೊಲಗಲಸುವರೆ ನಾಡೊಳಗೆ" (24-13) ಎಂದು ಬಸವಣ್ಣನನ್ನು ಜರಿದನು. ಇದರಿಂದ ನೊಂದ ಬಸವಣ್ಣ "ಶರಣರ ಬಾಧೆಯ ನೆರೆ ನೋಡಬಾರದು" (24-17) ಎಂದು ಕಪ್ಪಡಿಪುರದ ಸಂಗಮನಾಥನೆಡೆಗೆ ನಡೆದನು. "ಮೂಢನಲ್ಲವಗುಣ ನೋಡಬೇಡವು ದೇವ ರೂಢಿಯು ನಮಗಿನ್ನು ಸಾಕು ಕಾಡದೆ ನಿಮ್ಮಂಗಗೂಡಿನೊಳಗೆ ಬೇಗ ಕೂಡಿಕೊಂಬುದು ಸಂಗಮೇಶ" (24-37) ಎಂದು ಬಸವಣ್ಣ ಬೇಡಿಕೊಂಡ. ನಾಗವ್ವ ಚನ್ನಣ್ಣನ ಕರೆದು "ಮೂರೂವರೆ ತಿಂಗಳಿಗೆ ಬರುವುದು ಉಳುವಿಗೆ ಶರಣ ಸಂಪತ್ತಿಗೂಡಿಯಿರದೆ ಪೋಗೆಂದು"(24-40) ಹೇಳಿ ಬಸವಣ್ಣ ಸಂಗಮೇಶನಲ್ಲಿ ಐಕ್ಯನಾದನು. ಶರಣರು ಸಮಾಜಜೀವಿಯಾಗಿದ್ದ ಬಸವಣ್ಣನನ್ನು "ಹರನಿಂದೆ ಗುರುನಿಂದೆ ಪರನಿಂದೆಗೇಳದೆ ಧರೆಯೊಳು ಜಂಗಮಾರ್ಚನೆಯ ನೆರೆ ಮಾಡಿ ದಾಸೋಹ ಪರಮಭಕ್ತನೆ ಬಸವರಸ ಪಾವನ ಪುಣ್ಯಭರಿತ" (24-13) ಎಂದು ಕೊಂಡಾಡಿದರು. ಇತ್ತ ಬಿಜ್ಜಳ ಹರಳಯ್ಯ ಮಧುವರಸರ ಕಾಲುಗಳನ್ನು ಕಟ್ಟಿ ಬಾರುಕೋಲಿನಿಂದ ಹೊಡೆಯಲು ಆಗಸಕ್ಕೆ ಹೋಗಲು ಅಲ್ಲಿ ಶಿವನು "ಈತ ಹಳ್ಳಯ್ಯನು ಈತ ಮಧುವಯ್ಯನು ಈತನಿಂದಲಿ ಮುಕ್ತಿವಡದ ಸೂತಕವಳಿದು ಸುಜಾತಿವೆತ್ತಿತು" (24-57) ಎಂದು ಹರಸಿದನು.

ಬಸವಣ್ಣ ಸಂಗಮೇಶನಲ್ಲಿ ಲೀನವಾದ ಸಂಗತಿಯನ್ನು ಚನ್ನಣ್ಣ ಬಿಜ್ಜಳನಿಗೆ ಬಂದು ಅರುಹಿದನು. ಇದರಿಂದ ನೊಂದ ಬಿಜ್ಜಳ "ನಿನ್ನ ವಾಕ್ಯವ ಮೀರಿ ಉನ್ನಂತ ಶರಣರ

ಬನ್ನಬಡಿಸಿ ಕೊಲೆಗಳೆಸಿ ಅನ್ಯಾಯದವ ಬಲುಗನ್ನ ಘಾತಕ" (25-6) ನೆಂದು ಚನ್ನಣ್ಣನಿಗೆ ಮಂತ್ರಿ ಪಟ್ಟವ ಕಟ್ಟಿದನು. ಇತರ ಶರಣರೊಡಗೂಡಿ ಚನ್ನಬಸವಣ್ಣ ಉಳುವೆಯತ್ತ ನಡೆದನು. ಹೀಗೆ ಕವಿ ಪಂಚಯ್ಯನು ಬಸವರಾಜನ ಭಕ್ತಿರಸಸೋನೆಯನು ಸಂತಸದಿ ಮುಗಿಸಿದನು. ಇದು ಭಕ್ತಿರಸಸೋನೆಯ ಕಥಾವಸ್ತು.

## 6. ಭಕ್ತಿರಸಸೋನೆ: ವೈಶಿಷ್ಟ್ಯತೆ

ಬಸವಣ್ಣನ ಚರಿತ್ರೆಯನ್ನು ವರ್ಣನಾತ್ಮಕವಾಗಿ ತಿಳಿಸುವ ಉದ್ದೇಶಕ್ಕಾಗಿ ಪಂಚಯ್ಯನು ಭಕ್ತಿರಸಸೋನೆ ಕಾವ್ಯವನ್ನು ರಚನೆ ಮಾಡಿದ್ದಾನೆ. ಜೊತೆಗೆ ಸಾಂಸ್ಕೃತಿಕ ಮತ್ತು ಸಾಹಿತ್ಯಿಕವಾಗಿಯೂ ಈ ಕೃತಿ ಓದುಗರ ಗಮನವನ್ನು ಸೆಳೆಯುತ್ತದೆ.

**1. ಸಾಂಸ್ಕೃತಿಕ ಸಂಗತಿಗಳು:** ನಾಮಕರಣ, ಮದುವೆ ಮೊದಲಾದ ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳ ವಿಧಿವಿಧಾನಗಳನ್ನು ಕ್ರಮಬದ್ಧವಾಗಿ ಹೇಳುವಲ್ಲಿ ಕವಿಯ ಜಾಣ್ಮೆ ಎದ್ದು ಕಾಣುತ್ತದೆ. ನಿದರ್ಶನಕ್ಕೆ ಬಸವಣ್ಣನ ಮದುವೆಯ ಪ್ರಸಂಗವನ್ನು ನೋಡಬಹುದು. ಆನೆ, ಕುದುರೆ ರಥಗಳಿಂದೊಡಗೂಡಿದ ಮದುವೆಯ ಮೆರವಣಿಗೆ, ತಳಿರುತೋರಣಗಳಿಂದ ಅಲಂಕೃತವಾದ ಮನೆಯ ಮುಂದೆ ಹಾಕಿರುವ ಹಂದರ, ವಧುವರರು ಧರಿಸಿದ ಉಡುಪು, ಆಭರಣಗಳು, ನೂಲು, ಹೊಂಗಳಸ, ವಿಭೂತಿ, ಗಂಧ, ಅಕ್ಷತೆ, ಮಾಂಗಲ್ಯ, ಕಿರೀಟ, ಮುತ್ತಿನಹಾರ, ಕರಿಮಣಿ, ಬಾಸಿಂಗ ಮುಂತಾದ ಸಾಮಗ್ರಿಗಳ ವಿವರಗಳನ್ನು ನೋಡಿದರೆ ಕವಿ ಅಂದು ನಡೆಯುತ್ತಿದ್ದ ಮದುವೆಯ ಸಂಭ್ರಮವನ್ನು ಕಣ್ಣಾರೆ ನೋಡಿದ್ದನೆಂಬುದು ಸ್ಪಷ್ಟವಾಗುತ್ತದೆ. ಉದಾಹರಣೆಗಾಗಿ ಎರಡು ಪದ್ಯಗಳನ್ನು ನೋಡಬಹುದು.

ಹೊಂಗಳಸಕೆ ನೂಲಂಗನೆಯರು ಸುತ್ತಿ
ಮಾಂಗಲ್ಯ ಪಾಡಿ ಶೋಭನವ
ಹಿಂಗದೆ ಮೂವರಿಗಭ್ಯಂಗನಂ ಮಾಡಿಸಿ ದೇ
ವಾಂಗವ ಪೊದಸಿ ಉಡಿಸಿದರು (15-9)

ಹೊಂದಾವರೆ ಮೊಗ್ಗೆಗೊಂದಿದ ಕದದ್ವಾರ
ನಂದಿಯ ಸಿಂಧು ಮುಂದೆಸೆಯೆ
ಅಂದವಟ್ಟಿದು ಚೆಲ್ವ ಮಂದಿರ ಮುತ್ತಿನ
ಹಂದರ ತಳಿರು ತೋರಣವು (15-24)

ಮದುವೆ ಮನೆಯ ಮುಂದಿರುವ ಹಂದರ, ಹೆಣ್ಣುಮಕ್ಕಳು ಕಳಸಕ್ಕೆ ನೂಲನ್ನು ಸುತ್ತಿ ಸೋಬಾನೆ ಪದಗಳನ್ನು ಹಾಡುತ್ತಿದ್ದ ರೀತಿ, ವಧುವರರಿಗೆ ಅಭ್ಯಂಜನ ಸ್ನಾನ ಮಾಡಿಸಿ ಹೊಸ ಬಟ್ಟೆ ಧರಿಸುವ ಸಂಪ್ರದಾಯವನ್ನು ಕವಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ ರೀತಿ ಮನೋಜ್ಞಪೂರ್ಣವಾಗಿದೆ.



**2. ಚಾರಿತ್ರಿಕ ಅಂಶಗಳು:** ಯಾವುದೇ ಒಂದು ಕಾವ್ಯ ಅಥವಾ ಪುರಾಣದಲ್ಲಿ ಚರಿತ್ರೆ ಮತ್ತು ಪೌರಾಣಿಕ ಸಂಗತಿಗಳು ಜೊತೆಜೊತೆಯಾಗಿ ಸೇರಿಕೊಂಡಿರುತ್ತವೆ. "ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಪುರಾಣ ವಿಪುಲ, ಚರಿತ್ರೆ ವಿರಳ. ಈ ಚರಿತ್ರೆ ವಲಯದಲ್ಲಿಯೇ ಪುರಾಣದ ಚರಿತ್ರೀಕರಣ (ಪಂಪಭಾರತ, ಗದಾಯುದ್ಧ), ಚರಿತ್ರೆಯ ಪುರಾಣೀಕರಣ (ಸಿದ್ಧರಾಮ ಚರಿತ್ರೆ, ಪ್ರಭುಲಿಂಗಲೀಲೆ) ಎಂಬ ಇನ್ನೆರಡು ಪ್ರಕಾರಗಳು ನಮ್ಮಲ್ಲಿ ಹುಟ್ಟಿಕೊಂಡಿವೆ."[6] ಪ್ರಸ್ತುತ ಭಕ್ತಿರಸಸೋನೆಯು ಚರಿತ್ರೆಯ ಪುರಾಣೀಕರಣ ವರ್ಗಕ್ಕೆ ಸೇರುವ ಕೃತಿಯಾಗಿದೆ. ಬಸವಣ್ಣ ಬಾಗೇವಾಡಿಯಲ್ಲಿ ಜನಿಸಿದ್ದು, ಕಲ್ಯಾಣದಲ್ಲಿ ಶರಣ ಚಳವಳಿಯ ನೇತಾರನಾಗಿದ್ದು, ಕೂಡಲಸಂಗಮದಲ್ಲಿ ಐಕ್ಯನಾದದ್ದು, ಅಲ್ಲದೇ ಸಮಕಾಲೀನ ಶರಣರ ಬಗೆಗಿನ ಚಾರಿತ್ರಿಕವಾದ ಘಟನೆಗಳನ್ನು ಸಂಕ್ಷಿಪ್ತವಾಗಿ ಹೇಳಿದ್ದು, ಇಂಥ ಎಲ್ಲ ಚಾರಿತ್ರಿಕ ಸಂಗತಿಗಳನ್ನು ಈ ಕಾವ್ಯ ಹೇಳುತ್ತದೆ. ಇಲ್ಲಿ ಉಲ್ಲೇಖಿತಗೊಂಡ ಬಾಗೇವಾಡಿ, ಕಪ್ಪಡಿ ಸಂಗಮ, ಕಲ್ಯಾಣ, ಉಳವಿ, ಬಂಕಾಪುರ, ಸೊನ್ನಲಾಪುರ ಮೊದಲಾದ ಸ್ಥಳಗಳು ಶಿವಶರಣರ ನೆಲೆಗಳಾಗಿವೆ. ಕಲ್ಯಾಣ ಕ್ರಾಂತಿಯ ನಂತರದಲ್ಲಿ ಶರಣರು ಉಳವಿಯತ್ತ ಪ್ರಯಾಣಿಸುತ್ತಿರುವಾಗ ದಾರಿ ಮಧ್ಯದಲ್ಲಿ ನೆಲೆನಿಂತ ಕೆಲವು ಊರುಗಳನ್ನು ಈ ಕೃತಿ ಹೀಗೆ ದಾಖಲಿಸುತ್ತದೆ.

ಮಡದಿ ದಂಡಿಳಿದಲ್ಲಿ ವಡನೆ ದಂಡೇಶ್ವರ
ಕಡುಕೂಗೆ ಕೂಗಟೇಶ್ವರ
ಕಡಿದಲ್ಲಿ ಕಡಕೊಳ್ಳವಿದೆ ನಾಮವಾಯಿತು
ನಡದು ಪೊಕ್ಕರು ಉಳುವೆಯನು (25-38)

ಶರಣರು ನಡೆದುಬಂದ ದಾರಿಯನ್ನು ದಂಡಿನ ದಾರಿಯೆಂದು ಜನ ಈಗಲೂ ಹೇಳುತ್ತಾರೆ. ದಂಡೇಶ್ವರ, ಕೂಗಟೇಶ್ವರ, ಕಡಕೊಳ್ಳ ಗ್ರಾಮಗಳು ದಂಡಿನ ದಾರಿಯಲ್ಲಿ ಬರುವ ಊರುಗಳೆಂಬುದು ಪ್ರಸ್ತುತ ಪದ್ಯದಿಂದ ತಿಳಿದುಬರುತ್ತದೆ. ಅಂಥ ದಂಡಿನ ದಾರಿಯಲ್ಲಿ ಬರುವ ಊರುಗಳನ್ನು ಉಲ್ಲೇಖಿಸಿರುವುದು ಈ ಕೃತಿಯ ವಿಶೇಷತೆಯೆಂದೇ ಹೇಳಬೇಕು. ದಂಡೇಶ್ವರ ಕೂಗಟೇಶ್ವರ ಕಡಕೊಳ್ಳಗ್ರಾಮಗಳು ಬಹುಶಃ ಬೈಲಹೊಂಗಲ ತಾಲ್ಲೂಕಿನ ಪರಿಸರದಲ್ಲಿ ಬರುವ ಸಾಧ್ಯತೆಗಳಿವೆ. ಈ ಕುರಿತು ಸಂಶೋಧನೆ ಕೈಗೊಳ್ಳುವುದು ಅಗತ್ಯವಿದೆ.

**3. ವರ್ಣನೆಗಳು:** ಸಾಮಾನ್ಯವಾಗಿ ಒಂದು ಕಾವ್ಯ ಅಥವಾ ಪುರಾಣಗಳಲ್ಲಿ ಸಮುದ್ರ, ವನವಿಹಾರ, ಸೂರ್ಯೋದಯ, ಸೂರ್ಯಾಸ್ತ, ಚಂದ್ರೋದಯ, ವಿಹಾರ, ವೇಶ್ಯಾವಾಟಿಕೆ, ಮದುವೆ, ದಂಡಯಾತ್ರೆ, ಸ್ತ್ರೀವರ್ಣನೆ ಇತ್ಯಾದಿ ಅಷ್ಟಾದಶ ವರ್ಣನೆಗಳು ಬರುವುದು ಸಹಜ. ಇದಕ್ಕೆ ಭಕ್ತಿರಸಸೋನೆಯೂ ಹೊರತಾಗಿಲ್ಲ. ಅಷ್ಟಾದಶ ವರ್ಣನೆಗಳಲ್ಲಿ ಒಂದಾದ ಯುದ್ಧದ ಬಗೆಗೆ ಪಂಚಯ್ಯನು ಅನೇಕ ಸಂದರ್ಭಗಳಲ್ಲಿ ವಿಸ್ತಾರವಾಗಿ ವಿವರಿಸಿದ್ದಾನೆ. ವೃಷಭ-ಇಂದ್ರರ ಯುದ್ಧ (2-81 ರಿಂದ

113), ವೀರೇಶ-ದಕ್ಷಬ್ರಹ್ಮರ ಯುದ್ಧ (3-47 ರಿಂದ 71), ತಾರಕಾಸುರ, ಶಿಂಶುಮಾರರು ದೇವತೆಗಳೊಂದಿಗಿನ ಯುದ್ಧ (5-7 ರಿಂದ 45, 86 ರಿಂದ 90, 6-19 ರಿಂದ 70), ವೃಷಭನಾಥ ರಕ್ಕಸರ ಮೇಲೆ ಏರಿಹೋದ ಸನ್ನಿವೇಶ (7-27 ರಿಂದ 60), ತ್ರಿಪುರವನ್ನು ಸುಟ್ಟ ಪ್ರಸಂಗ (8-46 ರಿಂದ 117), ಮಹಾದೇವ ಭೂಪಾಲ ಕಲ್ಯಾಣದ ಮೇಲೆ ದಂಡೆತ್ತಿ ಬಂದ ಪ್ರಸಂಗ (15-77 ರಿಂದ 78) - ಹೀಗೆ ಐದು ಕಡೆಗಳಲ್ಲಿ ಯುದ್ಧದ ವರ್ಣನೆ ಸಮರ್ಥವಾಗಿ ಚಿತ್ರಿತಗೊಂಡಿದೆ. ಮಹಾದೇವನು ಕಲ್ಯಾಣದ ಮೇಲೆ ಏರಿಬಂದ ಪ್ರಸಂಗವು ಹೀಗೆ ವರ್ಣಿತಗೊಂಡಿದೆ.

> ದೆಸೆ ನಾಲ್ಕು ದಿಕ್ಕನು ಎಸಗಿ ನೋಡುತ ದಳ
> ಬಸವನ ಬೆಂಬತ್ತಲೊಡನೆ
> ಅಸಮಮಾರ್ಬಲ ಮುತ್ತಿಕುಸುರಿದರಿದು ಎನ್ನ
> ಅಸುಗೊಂಬರೆಂತೊ ಸಂಗಯ್ಯ (15-78)

ಶಿವನ ಒಡ್ಡೋಲಗದಲ್ಲಿ ನರ್ತನಗೈಯುತ್ತಿದ್ದ ನಳಿನಾಕ್ಷಿಯರ ವರ್ಣನೆಯನ್ನು ಕವಿ ಅತ್ಯಂತ ನಯನಾಜೂಕಿನಿಂದ ಕೆಳಗಿನಂತೆ ವರ್ಣಿಸಿದ್ದಾನೆ.

> ತಳಿರಡಿಯರು ಅರಗಿಳಿ ನುಡಿಯರು ಚೆಲ್ವ
> ಎಳೆಯ ಚೆಂದುಟಿಯ ನಾರಿಯರು
> ನಳಿನಾಕ್ಷಿಯರು ಪದತಳದಲಂದುಗೆ ಘುಮ್ಮ
> ಘುಳಿರೆಂದು ನರ್ತಿಸುತಿಹರು (1-96)

ಹೀಗೆ "ವರ್ಣನೆಗಳು ತುಂಬಾ ಸೊಗಸಾಗಿವೆ. ಖಂಡಪ್ರಾಸ ಬಳಕೆಯಿಂದಾಗಿ ಸಾಂಗತ್ಯದ ನಡೆ, ಲಯ ನಯವಾಗಿ ಚಿತ್ತಾಕರ್ಷತೆಯನ್ನುಂಟುಮಾಡಿದೆ. ರಾಗತಾಳ ನಿರ್ದೇಶನ ಮಾಡಿರುವುದರಿಂದ ಇದು ಬಹು ಜನಪ್ರಿಯವಾದ ಹಾಡುಗಬ್ಬವಾಗಿತ್ತು ಎಂಬುದು ವ್ಯಕ್ತವಾಗುತ್ತದೆ. ಸರಳ ಶೈಲಿ, ಮೋಹಕ ನಿರೂಪಣೆ, ಸುಂದರವಾದ ಕಥಾತಂತ್ರ, ಭಕ್ತಿರಸ ಪ್ರತಿಪಾದನೆ ಇವೆಲ್ಲವುಗಳಿಂದ ಕಾವ್ಯ ಉನ್ನತಮಟ್ಟದಲ್ಲಿ ನಿಲ್ಲುವ ಶಕ್ತಿಯನ್ನು ಪಡೆದಿದೆ. ಬಸವಣ್ಣನ ಚರಿತ್ರೆಯನ್ನೊಳಗೊಂಡು ರಚಿತವಾದ ಎಂಟು ಸಾಂಗತ್ಯ ಕೃತಿಗಳಲ್ಲಿ ಇದಕ್ಕೆ ಅಗ್ರಸ್ಥಾನ ಸಲ್ಲುತ್ತದೆ"[7] ಎಂದು ವೀರಣ್ಣ ರಾಜೂರ ಅವರು ಹೇಳಿರುವುದರಲ್ಲಿ ಅತಿಶಯೋಕ್ತಿಯೇನಿಲ್ಲ.

**4. ಭಾಷಾಶೈಲಿ:** ಕವಿ ತನ್ನ ಕಾವ್ಯದುದ್ದಕ್ಕೂ ಸರಳ ದೇಶೀ ಭಾಷೆಯನ್ನು ಬಳಸಿದ್ದಾನೆ. ಆಡುನುಡಿಗಳು, ಗಾದೆಮಾತುಗಳು ಕಾವ್ಯಕ್ಕೆ ಸೊಗಸುಗಾರಿಕೆಯನ್ನು ತಂದುಕೊಟ್ಟಿವೆ. ತಾಯನಗಲಿದ ಕರುವಿನೊಲು ಹೃದಯ ತಲ್ಲಣಿಸಿ (3-22), ಹುಲಿಯ ಬಾಯೊಳು ಸಿಲ್ಕಿದ ಹುಲ್ಕೆ (4-103), ಕಾದ ಕಬ್ಬಿಣ ಕುಡಿದಿಹ ನೀರ ಜಬ್ಬಲು ಕಾವುದೆ (20-75), ಕಲ್ಲ ಹಾಯಲು ತಲೆಯಲ್ಲೊಡೆಯದೆ ಉಳಿವುದೆ (23-14), ಕಳವಿಟ್ಟು ಗಂಡನ ಕೊಲಿಸಿ ಮಿಂಡಗೆ ಬಾಳ್ವ ಕುಲಟೆಯರು (1-6), ಉರಗ ಮುಂಗಲಿಯ ಕಂಡಂತೆ



(20-16), ತಪ್ಪಿದ ಶಿಶು ತಾಯ ತಪ್ಪಿಸಿಕೊಂಡಂತೆ (17-62), ಕೊಡುವುದು ಧರ್ಮವು, ಕೊಡದಿರೆ ಕರ್ಮವು (10-55) ಇಂಥ ಅನೇಕ ಉದಾಹರಣೆಗಳನ್ನು ಈ ಕೃತಿಯಲ್ಲಿ ನೋಡಬಹುದು. ಭಕ್ತಿಗಿಕ್ತಿ, ಶಕ್ತಿಗಿಕ್ತಿ, ಮುಕ್ತಿಗಿಕ್ತಿ (25-47) ಯಂಥ ಪ್ರತಿಧ್ವನಿ ಶಬ್ದ (Echo words) ಗಳು ಅಲ್ಲಲ್ಲಿ ಬಂದಿವೆ.

**5. ಪ್ರಭಾವ:** ಯಾವುದೇ ಒಂದು ಕಾವ್ಯ ಅಥವಾ ಒಬ್ಬ ಕವಿಯ ಮೇಲೆ ಪೂರ್ವದ ಪರಂಪರೆ ಹಾಗೂ ಸಮಕಾಲೀನ ಪರಿಸರಗಳ ಪ್ರಭಾವ ಸಹಜವಾಗಿ ಬೀರಿರುತ್ತದೆ. ಬಸವಾದಿ ಪ್ರಮಥರ ರಚನೆಗಳಾದ ವಚನಗಳು, ನಂತರದಲ್ಲಿ ಬಂದ ರಾಘವಾಂಕ, ಚಾಮರಸ, ಲಕ್ಕಣ್ಣ ದಂಡೇಶ, ಸಿಂಗಿರಾಜರಂಥ ಕವಿಗಳ ಪ್ರಭಾವವನ್ನು ಇಲ್ಲಿ ಕಾಣಬಹುದು. ಇಡೀ ಕೃತಿಯು ಸಿಂಗಿರಾಜ ಪುರಾಣದ ಮಾದರಿಯಲ್ಲಿದೆಯೆಂಬುದು ಸುಸ್ಪಷ್ಟ. ಹೀಗಾಗಿ ಕಥಾವಸ್ತು, ಸನ್ನಿವೇಶಗಳು, ವರ್ಣನೆಗಳು, ನಿರೂಪಣಾ ವಿಧಾನಗಳಲ್ಲಿ ಸಿಂಗಿರಾಜನ ಪ್ರಭಾವವನ್ನು ಕೃತಿಯುದ್ದಕ್ಕೂ ಕಾಣುತ್ತೇವೆ.

ಕೆಲವು ಸಂದರ್ಭಗಳಲ್ಲಿ ಶಿವಶರಣರ ವಚನಗಳನ್ನು ನೇರವಾಗಿಯೇ ಕವಿ ಬಳಸಿಕೊಂಡಿದ್ದಾನೆ. ಅಂಥ ಕೆಲವು ವಚನಗಳ ಸಾಲುಗಳು ಹೀಗಿವೆ.

> ಹೆಣ್ಣನೊಲಿಸುವರೆ ಹೊನ್ನ ಗಳಿಸುವರೆ
> ಮಣ್ಣ ಪಡದು ಬಾಳುವರೆ
> ಬಣ್ಣದ ನುಡಿಗೇಳ್ವ ಕುನ್ನಿಗಳನು ಒಪ್ಪ
> ರನ್ನಳೆ ಗುರುಗುಹೇಶ್ವರನು (23-5)

> ಅರುಹೆಂಬ ಸಸಿಗೀಗ ಮರಹೆಂಬ ಕಸ ಮುಚ್ಚಿ
> ಯಿರೆ ಬೆಳೆಯದೆ ನರುಟಿಸಲು
> ಹರಿದು ಕಳೆಯಜಲವೆರದು ರಕ್ಷಿಸುವ... (18-28)

> ಹರನೆ ನೀನೊಲಿದರೆ ಕೊರಡು ಕೊನರುವುದು
> ಬರಡು ಹಯನಾಗಿ ಕರವುದು... (17-10)

ಹಾಗೆಯೇ ರಾಘವಾಂಕ ಚಾಮರಸರ ಪ್ರಭಾವವನ್ನೂ ಇಲ್ಲಿ ಗುರುತಿಸಬಹುದು. "ನಡೆವರೆಡಹದೆ ಕುಳಿತವರೆಡಹುವರೆ" ಎಂಬ ರಾಘವಾಂಕನ ಪದ್ಯದ ಧಾಟಿಯಲ್ಲಿಯೇ ಕವಿ ಹೀಗೆ ಹೇಳುತ್ತಾನೆ.

> ನಡೆವವ ಎಡಹುವ ನುಡಿವವ ತೊದಲುವ
> ನಡೆನುಡಿಯಧಮರಿಗುಂಟೆ
> ನುಡಿಯೊಳು ತಪ್ಪುಳ್ಳರಿಡಿ ಪ್ರಹುಡರು ತಿದ್ದಿ
> ನಡಸುವುದೀಶನ ಕೃತಿಯ (1-4)

ಚಾಮರಸನ ಪದ್ಯದ ಪ್ರಭಾವ ಇಲ್ಲಿ ಹೀಗೆ ಮೂಡಿಬಂದಿದೆ.

ತಳಿಗೆಯ ಹಾಕಿ ತಲೆಯ ಹೊಯ್ಸಿ ಹೆಣ್ಣನು
ಸೆಳೆದೊಲಿಸುವ ಸೋನೆಯಲ್ಲ
ಕಳವಿಟ್ಟು ಗಂಡನ ಕೊಲಿಸಿ ಮಿಂಡಗೆ ಬಾಳ್ವ
ಕುಲಟೆಯರ ಕಥೆಯಲ್ಲ (1-6)

ಇನ್ನು ಕೆಲವು ಪ್ರಸಂಗಗಳನ್ನು ವಿವರಿಸುವಾಗ ಕವಿ ಇತರೆ ಕವಿಗಳ ಪ್ರಭಾವಕ್ಕೊಳಗಾಗಿ ಪದ್ಯಗಳನ್ನು ರಚಿಸಿದಂತೆ ತೋರುತ್ತದೆ. ಉದಾಹರಣೆಗೆ ಬಸವಣ್ಣನು ಮನನೊಂದು ಕಲ್ಯಾಣವನ್ನು ಬಿಟ್ಟು ಕಪ್ಪಡಿಸಂಗಮದತ್ತ ಹೋಗುತ್ತಾನೆ. ಆಗ ಪಶ್ಚಾತ್ತಾಪಗೊಂಡ ಬಿಜ್ಜಳನು ಪ್ರಲಾಪಿಸುವ ರೀತಿ ಹೀಗಿದೆ:

ಎನ್ನ ಬಂಧುವೆ ನೀನು ಎನ್ನ ಬಳಗ ನೀನೆ
ಎನ್ನ ಮಾತೆ ಪಿತ ನೀನು
ಮುನ್ನ ನೀನಗಲಲು ಇನ್ನೆಂತು ಜೀವಿಪೆ
ಎನ್ನ ಕರ್ತನೆ ಹಾಹಾಯೆನುತ (25-5)

ಮೇಲಿನ ಈ ಪದ್ಯ ಷಡಕ್ಷರ ಕವಿಯ ರಾಜಶೇಖರ ವಿಳಾಸದಲ್ಲಿ ಬರುವ ತಿರುಕೊಳವಿನಾಚಿಯ ಪ್ರಲಾಪವನ್ನು ನೆನಪಿಸುತ್ತದೆ. ಹಾಗೆಯೇ ಮುಂದುವರೆದು ನಿನ್ನೆಂದಿಗೆ ನೋಳ್ಪೆ ಬಸವ, ಬಸವಾ ನೀ ಪೋಗುವರೆ, ದಂಡನಾಯಕನೆ ಪೋಗುವರೆ, ಧರೆಯೊಳು ನಾನೋರ್ವನಿರಲಾರೆನು ಎಂದು ಬಿಜ್ಜಳ ರೋಧಿಸುತ್ತಿರುವ ರೀತಿ ಮನಕರಗುವಂತಿದೆ.

**6. ಪರಿಷ್ಕರಣೆ ಮತ್ತು ಅಧ್ಯಯನ:** ಭಕ್ತಿರಸಸೋನೆ ಕೃತಿಯ ಹಸ್ತಪ್ರತಿಯನ್ನು ಶೋಧಿಸಿದವರಲ್ಲಿ ದಾವಣಗೆರೆಯ ನಿಶಾನಿಮಠದ ಶ್ರೀ ಸ್ವಾಮಿ ಶಾಂತವೀರಾರ್ಯರು ಹಾಗೂ ಆರ್. ನರಸಿಂಹಾಚಾರ್ಯರು.[8] ಕೃತಿಯ ಸ್ವರೂಪ ಮತ್ತು ಮಹತ್ವವನ್ನು ಪರಿಚಯಿಸಿದವರಲ್ಲಿ ಎಸ್.ಆರ್. ಗುಂಜಾಳ (1967), ಹಂಪ ನಾಗರಾಜಯ್ಯ (1975) ಹಾಗೂ ವೀರಣ್ಣ ರಾಜೂರ (1977) ಪ್ರಮುಖರು. ಹಸ್ತಪ್ರತಿಯ ಒಡಲಿನಿಂದ ಹೊರತೆಗೆದು ಶಾಸ್ತ್ರೀಯ ನೆಲೆಯಲ್ಲಿ ಪರಿಷ್ಕರಿಸಿದವರಲ್ಲಿ ಬಿ.ವಿ. ಶಿರೂರ ಪ್ರಥಮರು. ಹೀಗಾಗಿ ಮುದ್ರಣಯಂತ್ರದ ಸೌಲಭ್ಯ ಹಾಗೂ ಗ್ರಂಥಸಂಪಾದನೆ ಶಾಸ್ತ್ರ ಶುದ್ಧವಾಗಿ ಬೆಳೆದು ಬಂದು ನೂರಾರು ವರ್ಷ ಕಳೆದರೂ ಈ ಕೃತಿ ಪರಿಷ್ಕಾರಗೊಂಡು ಪ್ರಕಟಗೊಳ್ಳಲು 2003ರವರೆಗೆ ಕಾಯಬೇಕಾಯಿತು. ಅದೇನೇ ಇರಲಿ, ಬಸವಣ್ಣನ ಚರಿತ್ರೆಯನ್ನು ನಿರೂಪಿಸುವ ಪ್ರಮುಖ ಕೃತಿಗಳಲ್ಲಿ ಒಂದಾದ ಭಕ್ತಿರಸಸೋನೆಯನ್ನು ಪರಿಷ್ಕರಿಸಿದ ಬಿ.ವಿ. ಶಿರೂರ, ಪ್ರಕಟಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಶ್ರೀ ಬಸವೇಶ್ವರ ಅಧ್ಯಯನ ಪೀಠದ ಸಂಯೋಜಕರಾದ ವೀರಣ್ಣ ರಾಜೂರ ಅವರು ಅಭಿನಂದನಾರ್ಹರು.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ನಾಲ್ಕು ಹಸ್ತಪ್ರತಿಗಳ ನೆರವಿನಿಂದ ಶಿರೂರ ಅವರು ಈ ಕೃತಿಯನ್ನು ಪರಿಷ್ಕರಿಸಿದ್ದಾರೆ. 



2582ನೆಯ ಕ್ರಮಾಂಕದ ಕಾಗದಪ್ರತಿ (ಅ)ಯನ್ನು ಮೂಲವನ್ನಾಗಿಟ್ಟುಕೊಳ್ಳಲಾಗಿ, ಪಾಠಾಂತರಕ್ಕಾಗಿ 1219ನೆಯ ಕ್ರಮಾಂಕದ ತಾಡೋಲೆ ಪ್ರತಿ (ಬ), 1220ನೆಯ ಕ್ರಮಾಂಕದ ಕಾಗದ ಪ್ರತಿ (ಡ) ಹಾಗೂ 4407ನೆಯ ಕ್ರಮಾಂಕದ ಕಾಗದ ಪ್ರತಿ (ಕ)ಗಳನ್ನು ಬಳಸಿಕೊಳ್ಳಲಾಗಿದೆ. ಪ್ರಸ್ತಾವನೆಯಲ್ಲಿ ಕವಿಕಾವ್ಯ ಪರಿಚಯ, ಕಥಾವಸ್ತು, ಕಥೆಗಳ ಆಕರ ರೂಪಾಂತರ, ವೃಷಭ ಬಸವನ ಪಾತ್ರ, ವಿಮರ್ಶೆ, ವ್ಯಕ್ತಿಚಿತ್ರಣ, ಆಡುನುಡಿ, ಗಾದೆಮಾತು, ವಚನಸಾಹಿತ್ಯದ ಪ್ರಭಾವ ಇತ್ಯಾದಿ ಅಂಶಗಳನ್ನು ಚರ್ಚಿಸಿದ್ದಾರೆ. ಅನುಬಂಧದಲ್ಲಿ ಹಸ್ತಪ್ರತಿ ಪ್ರಶಸ್ತಿಗಳ ಮಾಹಿತಿ, ವ್ಯಕ್ತಿನಾಮಸೂಚಿ ಹಾಗೂ ಸ್ಥಳನಾಮಸೂಚಿಗಳನ್ನು ಕೊಡಲಾಗಿದೆ. ಹೀಗೆ ಈ ಕೃತಿಯ ಸಮಗ್ರ ಅಧ್ಯಯನಕ್ಕೆ ಬೇಕಾದ ಅನೇಕ ವಿವರಗಳನ್ನು ಶಿರೂರ ಅವರು ಒದಗಿಸಿಕೊಟ್ಟಿದ್ದಾರೆ. ಒಟ್ಟಿನಲ್ಲಿ ಬಸವಣ್ಣನನ್ನು ಕುರಿತು ಬಂದ ಕಾವ್ಯಪುರಾಣಗಳಲ್ಲಿ ಭಕ್ತಿರಸಸೋನೆ ಹೇಗೆ ಭಿನ್ನವಾಗಿ ನಿಲ್ಲುತ್ತದೆ. ಚಾರಿತ್ರಿಕವಾದ ಸಂಗತಿಗಳನ್ನು ತಿಳಿಸುವಲ್ಲಿ ಮತ್ತು ಸಮಕಾಲೀನ ಪರಿಸರವನ್ನು ಚಿತ್ರಿಸುವಲ್ಲಿ ಎಷ್ಟರಮಟ್ಟಿಗೆ ಈ ಕೃತಿ ಯಶಸ್ವಿಯಾಗಿದೆ ಎಂಬುದನ್ನು ಈ ಮೇಲಿನ ಅವಲೋಕನದಿಂದ ಅರಿಯಬಹುದಾಗಿದೆ. ಇನ್ನೂ ಈ ಕೃತಿಯನ್ನು ತೌಲನಿಕವಾಗಿ ಹಾಗೂ ತಲಸ್ಪರ್ಶಿಯಾಗಿ ಅಧ್ಯಯನಕ್ಕೊಳಪಡಿಸುವ ಅವಶ್ಯಕತೆಯಿದೆ. ಅಂದಾಗ ಮಾತ್ರ ಹೊಸ ಹೊಸ ಸಂಗತಿಗಳು ತಿಳಿದುಬರುವ ಸಾಧ್ಯತೆಗಳಿವೆ.

(ದಿನಾಂಕ 27.12.2009ರಂದು ನಡೆದ ವಿಚಾರಸಂಕಿರಣದಲ್ಲಿ ಭಾಗವಹಿಸಿ ಪಂಚಯ್ಯ ಕವಿಯ ಭಕ್ತಿರಸಸೋನೆಯ ಕುರಿತು ಪ್ರಬಂಧ ಮಂಡಿಸಲು ಅವಕಾಶ ಮಾಡಿಕೊಟ್ಟ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರಿಗೆ ಹಾಗೂ ವಿಚಾರಸಂಕಿರಣದ ಸಂಯೋಜಕರಾದ ಡಾ. ಬಿ. ನಂಜುಂಡಸ್ವಾಮಿ ಅವರಿಗೆ ನಾನು ಕೃತಜ್ಞನಾಗಿದ್ದೇನೆ)

**ಕೊನೆ ಟಿಪ್ಪಣಿಗಳು**

1. ಆರ್. ನರಸಿಂಹಾಚಾರ್, ಕರ್ನಾಟಕ ಕವಿಚರಿತೆ, ಸಂ. 2, ಪುಟ. 399
2. ಬಿ.ವಿ. ಶಿರೂರ (ಸಂ) ಭಕ್ತಿರಸಸೋನೆ, ಪ್ರಸ್ತಾವನೆ, ಪು. 14
3. ಎಸ್.ಸಿ. ಪಾಟೀಲ ಅವರು ಸಂಪಾದಿಸಿದ ಹಂಡೆ ಅರಸು ಮನೆತನದ ವಂಶಾವಳಿಯ ಅನುಬಂಧ ನೋಡಿರಿ. 2004
4. ಎಸ್. ಶಿವಣ್ಣ (ಸಂ) ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು, ಪು. 313
5. ಬಿ.ವಿ. ಶಿರೂರ (ಸಂ) ಭಕ್ತಿರಸಸೋನೆ, ಪು. 10
6. ಎಂ.ಎಂ. ಕಲಬುರ್ಗಿ, ಸಿ.ಕೆ. ಪರಶುರಾಮಯ್ಯ, ಎಫ್.ಟಿ. ಹಳ್ಳಿಕೇರಿ (ಸಂ) ತಗರ ಪವಾಡ ಪ್ರಸ್ತಾವನೆ, ಪು. 1
7. ವೀರಣ್ಣ ರಾಜೂರ, ಕನ್ನಡ ಸಾಂಗತ್ಯ ಸಾಹಿತ್ಯ, ಪು. 534
8. ಬಿ. ನಂಜುಂಡಸ್ವಾಮಿ, ಹಸ್ತಪ್ರತಿ ಸಂಶೋಧಕ ನಿಶಾನಿಮಠದ ಶ್ರೀ ಸ್ವಾಮಿ ಶಾಂತವೀರಾರ್ಯ, ಹಸ್ತಪ್ರತಿ ಅಧ್ಯಯನ ಸಂ. 3-4, ಜುಲೈ-ಡಿಸೆಂಬರ್ 2005

ಹಿಂದಣ ಅನಂತ

# ಅಕ್ಕಮಹಾದೇವಿಯ ವಚನಗಳ ಪ್ರತಿಮಾವಿಧಾನ

ಎಚ್.ಎಂ. ಚನ್ನಯ್ಯ

ಅಕ್ಕಮಹಾದೇವಿ, ಬಸವಾದಿ ಶಿವಶರಣ ವಚನಕಾರರ ಮಧ್ಯೆ ವಿಶಿಷ್ಟವಾಗಿ ಬೇರೆ ನಿಲ್ಲುವಂತಹವಳು: ಅಂದರೆ, ಹೆಣ್ಣಾದದ್ದಕ್ಕಷ್ಟೆ ಕಾರಣವಾಗಿ ಅಲ್ಲದೆ, ಉಳಿದ 'ಹೆಣ್ಣು'ಗಳಿಂದ ಬೇರೆ ವ್ಯಕ್ತಿತ್ವವುಳ್ಳವಳಾಗಿ, ತನ್ನ ಹೆಣ್ಣುತನ, ತನ್ನ ಸಾಧನೆಗೆ ಆತಂಕವಲ್ಲ ಎನ್ನುವುದನ್ನು ದೃಢವಾಗಿ ಸ್ಥಾಪಿಸಿದ ಕಾರಣಕ್ಕಾಗಿ ಗಂಡಿನ ಅಸ್ತಿತ್ವದ ಎಲ್ಲ ಅಂಶಗಳನ್ನೂ ತನ್ನ ಹೆಣ್ಣುತನದ ಅಸ್ತಿತ್ವದಲ್ಲೆ ಸಾಧ್ಯ ಮಾಡಿ ತೋರಿಸಿದವಳು, ಎನ್ನುವುದಕ್ಕಾಗಿ.

ಅಕ್ಕ ಹೆಣ್ಣು; ಆದರೆ, ಜೀವನದ ಆಗಿನ ಮೌಲ್ಯಗಳನ್ನು ಒಪ್ಪಿಕೊಂಡು ಪದ್ಧತಿಯಲ್ಲಿ ಬದುಕಿದ ಹೆಣ್ಣಲ್ಲ. 'ಅನುಭಾವ'ವನ್ನು ಬಯಸಿ, ಎಲ್ಲದಕ್ಕೂ ಅತೀತನಾದ ಚೆನ್ನಮಲ್ಲಿಕಾರ್ಜುನನೆ ತನ್ನ ಗಂಡನೆಂದು ನಿಶ್ಚಯಿಸಿ, ಅವನೊಡಗಿನ ಸಮಾಗಮವೆ ಐಕ್ಯವೆ ಪರಮ ಗುರಿಯೆಂದು, ಅದನ್ನು ಪಡೆಯಲು ನಡೆಸಿದ ಹೋರಾಟವೆ ಅಕ್ಕಮಹಾದೇವಿಯ ಅಂತರಂಗದ ಚರಿತ್ರೆಯಾಗಿದೆ; ಅದಕ್ಕಾಗಿ ಆಕೆ ಹೊರಗಿನ ಪರಿಸರವನ್ನು ಎಷ್ಟು ರೀತಿಯಿಂದ ಎದುರಿಸಬೇಕಾಗಿ ಬಂತು ಎನ್ನುವುದು ಅವರ 'ಬಾಹ್ಯ ಚರಿತ್ರೆ'ಯಾಗಿದೆ. ಅವಳ ಅಂತರಂಗದ ಮತ್ತು ಬಹಿರಂಗದ ಚರಿತ್ರೆ ವಿಸ್ಮಯಕರವಾದದ್ದಾಗಿದೆ.

ಪ್ರೇಮ ಹೆಣ್ಣಿನ ವಿಶಿಷ್ಟ ಗುಣ: ಆಕೆ ಅದು ಒಬ್ಬ ಗಂಡಿನ ಕಡೆ ತಿರುಗಿದಾಗ ಯಾವ ಉತ್ಕಟತೆಯನ್ನು ತೋರುತ್ತಾಳೊ, ಅದೇ ಉತ್ಕಟತೆಯನ್ನು, ಆ ಪ್ರೇಮ 'ದೈವತ್ವ'ದ ಕಡೆ ತಿರುಗಿದಾಗಲೂ ತೋರುತ್ತಾಳೆ. ಹೀಗೆ 'ದೈವತ್ವ'ದ ಪ್ರೀತಿಗಾಗಿ ಹಾರೈಸುವ ಹೆಣ್ಣು ಹಾಗೆ ಹಾರೈಸುವ ಗಂಡಿಗಿಂತ, ಬಹುಶಃ, ಹೆಚ್ಚು ಭಾವೋನ್ಮಾದಕ್ಕೆ ಉತ್ಕಟತೆಗೆ ಒಳಗಾಗುತ್ತಾಳೆ. ಮಾನವ-ಪ್ರೇಮ ದೈವಿಕ-ಪ್ರೇಮಗಳು ಒಂದಾಗುತ್ತವೆ; ಅಂದರೆ, ಮಾನವ-ಪ್ರೇಮವೆ ಅತೀತವಾದ ಪರತತ್ವದ ಕಡೆಗೆ ಕೈಚಾಚುವುದಾಗಿದೆ. ಈ ಎರಡು ರೀತಿಯ ಪ್ರೇಮಗಳೂ ಪ್ರೀತಿಸುವ ಹೆಣ್ಣಿನ ಸೋಪಾದಿಕ ಅಸ್ತಿತ್ವದ ಸ್ಥಿತಿಯಿಂದ ಅವಳನ್ನು ಉಳಿಸಿ ಆ 'ವ್ಯಕ್ತಿ'ಯಲ್ಲಿನ 'ಪೂರ್ಣ'ದಲ್ಲಿ ಲೀನವಾಗುವ ಸಾಧನೆಗಳೆ ಆಗಿವೆ. ಈ ದ್ವಂದ್ವ ಸ್ಥಿತಿಯನ್ನು, ಅಸ್ವಸ್ಥ ಸ್ಥಿತಿಯ ಅಥವಾ ಆರೋಗ್ಯ ಸ್ಥಿತಿಯಲ್ಲಿರುವ ವ್ಯಕ್ತಿಗಳಿಬ್ಬರಲ್ಲಿಯೂ ಕಾಣಬಹುದಾಗಿದೆ. 'ಗುರು' ಅನೇಕ ಸಂದರ್ಭಗಳಲ್ಲಿ ಸಾಧಕಗಳಿಗೆ



ಆ ದೈವತ್ವದ ಸಂದೇಶವನ್ನು ತಲುಪಿಸುವ, ಆ ಕಡೆಗಿನ ಅವಳ ಯಾತ್ರೆಗೆ ಸಹಾಯಕನಾಗುವ ಶಕ್ತಿಯಾಗುತ್ತಾನೆ.[1] ಸಾಧಕಳ ಗುರಿ ಆ ಪರತತ್ವದೊಡನೆ ಬೆರೆಯುವುದೆ ಆಗಿದೆ; ಅವಳ 'ಅವನ' ಬಗ್ಗೆ ಇರುವ ಪ್ರೀತಿಯ ಅನಿಸಿಕೆಗಳು ಲೋಕದ ಪ್ರೇಮಿಗಳ ಅನಿಸಿಕೆಗಳ ತಳಹದಿಯ ಮೇಲೇ ನಿಂತಿವೆ.

ಸಾಮಾನ್ಯವಾಗಿ, ಅನುಭಾವವನ್ನು ಅಭಿವ್ಯಕ್ತಿಸಲು ಸಾಧ್ಯವಿಲ್ಲದ ಭಾಷಾ ದಾರಿದ್ರ್ಯದಿಂದ, ಅಂದರೆ ಆ ಅನುಭವ ಭಾಷೆಗೆ ಅತೀತವಾದ್ದರಿಂದ, ಅನುಭಾವಿ ಲೌಕಿಕ 'ಲೈಂಗಿಕ-ಪ್ರತಿಮೆ'ಗಳನ್ನು ಉಪಯೋಗಿಸಬೇಕಾಗುತ್ತದೆ ಎಂದು ಹೇಳುವುದುಂಟು; ಆದರೆ, ಈ ಬಗ್ಗೆ ಇಷ್ಟು ಸುಲಭವಾಗಿ ಹೇಳಿ ಜಾರಿಕೊಳ್ಳುವಂತಿಲ್ಲ; ಇಲ್ಲಿ ಮಾನಸಿಕ, ದೈಹಿಕ ಧೋರಣೆಗಳು ಸೇರಿಕೊಳ್ಳುವುದರಿಂದ ಅದು ಜಟಿಲವಾದ ಮನಶ್ಶಾಸ್ತ್ರದ ಸಮಸ್ಯೆಯೂ ಆಗುತ್ತದೆ.

ಏಕೆಂದರೆ ಅನುಭಾವಿಗಿರುವುದೂ - ಉಳಿದ ಮನುಷ್ಯರಂತೆ - ಒಂದು ದೇಹ; ಆ ದೇಹದ ಪಂಚೇಂದ್ರಿಯಗಳ ಮೂಲಕವೇ ಆಕೆ ಪ್ರತಿಕ್ರಿಯೆ ತೋರಬೇಕು. ಇಂದ್ರಿಯಾತೀತವಾದದ್ದು ಎಂದು ಹೇಳುವ ಅನುಭವವೂ ಪಂಚೇಂದ್ರಿಯಗಳನ್ನುಳ್ಳ ದೇಹದ ಅನುಭವದ ಪರಿಧಿಯೊಳಗೇ ಬರುವಂಥದು. ಆದ್ದರಿಂದ ಆಕೆ ಅನಿವಾರ್ಯವಾಗಿ ಲೌಕಿಕವಾದ ಪ್ರಣಯದ ಪದಪುಂಜಗಳ, ಲೌಕಿಕವಾದ ಪ್ರಣಯಗಳ ಧೋರಣೆಗಳ ಮೊರೆಹೋಗಬೇಕು. ಆದ್ದರಿಂದ ಒಬ್ಬ ಹೆಣ್ಣು ಲೌಕಿಕವಾಗಿ ತನ್ನ ಪ್ರಿಯನಿಗೆ ಏನನ್ನು ಅರ್ಪಿಸುತ್ತಾಳೊ, ಆಕೆಯೂ, ಅದನ್ನೇ 'ದೈವ'ಕ್ಕೆ ಅರ್ಪಿಸುತ್ತಾಳೆ; ಆಕೆ 'ದೈವ'ದಲ್ಲಿ ಎಷ್ಟು ನಿಮಗ್ನಳು ಎಂದರೆ, ಅದೇ ಅವಳಿಗೆ ಸತ್ಯ. ಆ 'ಆನಂದಾನುಭವ'ಕ್ಕೆ ಲೈಂಗಿಕ ಸತ್ತ್ವವನ್ನು ಆರೋಪಿಸುವುದರಿಂದ ಆಕೆಯನ್ನು ಹಿಸ್ಟರಿಕ್ ಗುಂಪಿಗೆ ಸೇರಿಸಿದಂತಾಗುತ್ತದೆ ಎಂದು ಹೇಳಬಹುದು. ಆದರೆ ಇಲ್ಲಿ, ಅನುಭಾವಿ ತನ್ನ ದೇಹದ ಮೇಲೆ ತನ್ನ ಇಂದ್ರಿಯಗಳ ಮೇಲೆ ಪಡೆದಿರುವ ಹಿಡಿತ ಆಕೆಯನ್ನು ಅದರ ದಾಸಿಯನ್ನಾಗಿ ಮಾಡದೆ, ಅಲ್ಲಿಂದ ಬೇರೆ ಸ್ತರಕ್ಕೆ ಒಯ್ಯುತ್ತದೆ. ಆದ್ದರಿಂದ

---

1. ಅಕ್ಕಮಹಾದೇವಿಯ ಈ ವಚನಗಳನ್ನು ಗಮನಿಸಿ: "ಗುರುವಿನ ಕರುಣದಿಂದ ಲಿಂಗ ಜಂಗಮವ ಕಂಡೆ/ಗುರುವಿನ ಕರುಣದಿಂದ ಪಾದೋದಕ-ಪ್ರಸಾದವ ಕಂಡೆ/ ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಗೋಷ್ಠಿಯ ಕಂಡೆ."

   "ಗುರುವೆ ತೆತ್ತಿಗನಾದ/ಲಿಂಗವೆ ಮದವಳಿಗನಾದ/ ನಾನು ಮದುವಳಿಗೆಯಾದೆನು/ಈ ಭುವನವೆಲ್ಲರಿಯಲು/ ಅಸಂಖ್ಯಾತರೆನಗೆ ತಾಯಿ-ತಂದೆಗಳು/ಕೊಟ್ಟರು ಪ್ರಭುವಿನ ಮನೆಗೆ/ ಸಾದೃಶ್ಯವಪ್ಪ ವರನ ನೋಡಿ/ ಇದುಕಾರಣ ಚೆನ್ನಮಲ್ಲಿಕಾರ್ಜುನ ಗಂಡನಾದ ಬಳಿಕ/ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ"

ಇದೂ ಲೈಂಗಿಕ ಸತ್ತ್ವದ ತಳಹದಿಯ ಮೇಲೆ ನಿಂತಿದ್ದು ಅಂದಮಾತ್ರಕ್ಕೆ ಇದಕ್ಕೂ ಲೌಕಿಕ ವ್ಯಕ್ತಿಯ ಅನುಭವಕ್ಕೂ ಇರುವ ವ್ಯತ್ಯಾಸವನ್ನು ಮರೆಯಲಾಗದು. ಇದು ಕೇವಲ Sublimation of sex ಅಲ್ಲ; ಏಕೆಂದರೆ, ಬಹುಶಃ ಮೊದಲೊಂದು ಲೌಕಿಕ ವಸ್ತು ಪ್ರೀತಿಗೆ ಕಾರಣವಾಗಿ, ಅಲ್ಲಿ ನಿರಾಶೆಹೊಂದಿ, ಕೊನೆಗೆ ದೈವಿಕ ಪ್ರೀತಿಯ ಕಡೆ ತಿರುಗಿದ ರೀತಿ ಅಲ್ಲ ಇದು. ಸತ್ಯವಾಗಿ, ವಾಸ್ತವಿಕವಾಗಿ ಒಬ್ಬ ಪ್ರೇಮಿಯ ಸಮ್ಮುಖದಲ್ಲಿ ಇನ್ನೊಬ್ಬ ಪ್ರೇಮಿಗೆ ಆಗಬಹುದಾದ ಅನುಭವದ ರೀತಿ ಇದು.

ಅಂದರೆ ಆ 'ದೈವ'ವೆ ಇಲ್ಲಿ ಮೊದಲ ಪ್ರೇಮಿ. ಆದ್ದರಿಂದ ಆಕೆ ಒಟ್ಟಿಗೇ ಆ ಪರಮಾತ್ಮನಲ್ಲಿ ಸಮರತಿಯಲ್ಲಿ ಬೆರೆತು, ಮಾನಸಿಕವಾಗಿ ದೈಹಿಕವಾಗಿ ಆ ಅನುಭವದ ತೀವ್ರತೆಯನ್ನು ನಿಜವಾಗಿಯೂ ಅನುಭವಿಸುವ ರೀತಿ ಇದು; ಈ ಅನುಭವ ಅವಳ ಗುಹ್ಯಾತ್ ಗುಹ್ಯತರ ಅಂತರಂಗದಾಳವನ್ನೂ ಮುಟ್ಟುವಂಥದು. ಅಂದಮೇಲೆ, ಆಕೆ 'ಲೈಂಗಿಕ ಪ್ರತಿಮೆ'ಗಳ ಮೊರೆಹೋಗುವುದಕ್ಕೆ, ಆ ಅನುಭವವನ್ನು ಹೇಳಲು ಸಾಧ್ಯವಿಲ್ಲದ ಭಾಷೆಯ ಅಸಾಮರ್ಥ್ಯ ಅಷ್ಟೇ ಕಾರಣ ಅಲ್ಲ. ಆ 'ಅನುಭವ' ಲೌಕಿಕವಾದ 'ಲೈಂಗಿಕಾನುಭವ' ಎರಡೂ ಒಂದೇ ಆಗಿರುವುದು ಕಾರಣ. ಇಲ್ಲಿ ದೇಹ ಇದ್ದೂ ಇಲ್ಲವಾಗುತ್ತದೆ; ಅನುಭವ ಎಲ್ಲವನ್ನೂ ಆಕ್ರಮಿಸಿ ತಾನೇ ತಾನಾಗುತ್ತದೆ. ಆದರೆ, ಈ ಅನುಭವವೂ ದೇಹದ ಮೂಲಕವೇ ಬರುವಂಥಾದ್ದರಿಂದ, ಆ ಮಾಧ್ಯಮವನ್ನೆ ಮೊರೆಹೋಗಬೇಕು. ಆ ಅನುಭವವನ್ನು ಹೇಳಬೇಕಾದರೆ, ಆದ್ದರಿಂದ ಅಕ್ಕ, ಉಳಿದ ಅನುಭಾವಿಗಳಂತೆಯೇ ಆ 'ಮಾಧ್ಯಮ'ವನ್ನೇ ಬಳಸುತ್ತಾಳೆ. ಆದರೆ, ಇಲ್ಲಿರುವ ವೈಶಿಷ್ಟ್ಯ ಅಕ್ಕ ಸ್ವತಃ ಹೆಣ್ಣಾಗಿರುವುದು. ಭಕ್ತನಾದವನು ತನ್ನ ಮೇಲೆ ಹೆಣ್ಣುತನವನ್ನು ಆರೋಪಿಸಿಕೊಂಡು ಪರಮಾತ್ಮನನ್ನು 'ಪ್ರಿಯ', 'ಪತಿ' ಎಂದು ಬಯಸುವ ರೀತಿಗಿಂತ ಇದು ಭಿನ್ನವಾದದ್ದು.[1] ಆದ್ದರಿಂದ, ಅಕ್ಕನ ವಚನಗಳಲ್ಲಿ ಸತಿ-ಪತಿ ಭಾವದ ವಚನಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ. ಆ ಸಂಬಂಧದ, ಆ ಅನುಭವದ ಎಲ್ಲ ಮೆಟ್ಟಿಲುಗಳನ್ನೂ, ಅಕ್ಕ, ಲೌಕಿಕಪ್ರಣಯದ ಎಲ್ಲ ಮೆಟ್ಟಿಲುಗಳ ಸಮಾನ ಪ್ರತಿಮೆಗಳ ಮೂಲಕ ಚಿತ್ರಿಸುತ್ತಾಳೆ, ಯಾವ ಪ್ರತಿರೋಧವೂ ಇಲ್ಲದೆ.

ಈಗ ಅವಳ ಕೆಲವು ವಚನಗಳನ್ನು ವಿಶ್ಲೇಷಿಸಿ ನೋಡೋಣ:

ಮಚ್ಚು ಅಚ್ಚುಗವಾಗಿ
ಒಪ್ಪಿದ ಪರಿ ನೋಡಾ

1. ಎಲ್ಲೂ ಭಕ್ತ ಪರಮಾತ್ಮನಿಗೆ ಹೆಣ್ಣುತನವನ್ನಾರೋಪಿಸಿ 'ಪ್ರಿಯೆ', 'ಪತ್ನಿ' ಎಂದು ಆರಾಧಿಸದೇ ಇರುವಂಥದು, ಕುತೂಹಲಕಾರಕವಾದ ವಿಷಯವಾಗಿದೆ.



ಎಚ್ಚರೆ ಗರಿ-
ದೋರದಂತೆ ನಡಬೇಕು
ಅಪ್ಪಿದರೆ ಅಸ್ಥಿಗಳು
ನುಗ್ಗು ನುರಿಯಾಗಬೇಕು
ಬೆಚ್ಚರ ಬೆಸುಗೆ-
ಯರಿಯದಂತಿರಬೇಕು
ಮಚ್ಚು ಒಪ್ಪಿತ್ತು
ಚೆನ್ನಮಲ್ಲಿಕಾರ್ಜುನಯ್ಯನ
ಸ್ನೇಹ.

ಈ ವಚನದಲ್ಲಿ ಬಳಕೆಯಾಗಿರುವುದು ಲೈಂಗಿಕ-ಪ್ರತಿಮೆ ಎಂದು ಮತ್ತೆ ಹೇಳಬೇಕಾಗಿಲ್ಲ. ಮಲ್ಲಿಕಾರ್ಜುನನ ಜೊತೆಗಿನ ಅವಳು ಬಯಸಿದ ಸಮಾಗಮದ ತೀಕ್ಷ್ಣತೆಯನ್ನು ಈ ಪ್ರತಿಮೆ ಜೀವಂತಗೊಳಿಸುತ್ತದೆ. 'ಮಚ್ಚು ಅಚ್ಚುಗವಾಗಿ ಒಪ್ಪಿದ ಪರಿ' ಎಂಥದು? 'ಎಚ್ಚರೆ ಗರಿದೋರದಂತೆ ನಡಬೇಕು'. ('ಮಚ್ಚು' ಎಂಬ ಪದಕ್ಕೆ, 'ಮೆಚ್ಚು', 'ಆನಂದ', 'ಮಾಯೆ' ಎಂಬ ಅರ್ಥಗಳಿವೆ; 'ಅಚ್ಚುಗ' ಎಂಬ ಪದಕ್ಕೆ 'ಪ್ರೀತಿ' ಮತ್ತು 'ಮನಸ್ಸಿನ ತುಮುಲ' ಎಂಬ ಅರ್ಥಗಳಿವೆ. ಈ ಎಲ್ಲ ಅರ್ಥಗಳು ಈ ಸಂದರ್ಭದಲ್ಲಿ ಅನ್ವಯವಾಗುತ್ತವೆ.) ಬಾಣ ನಡುವೆ ಕ್ರಿಯೆ ಇಲ್ಲಿ ವರ್ಣಿತವಾಗಿದೆ. ಅದರ ಗರಿಗಳೂ ಕಾಣದಂತೆ ಅದು ನಡೆಯಬೇಕು. ಇಲ್ಲಿರುವಂಥದು ಲೈಂಗಿಕ ಸತ್ವವೇ ಆಗಿದೆ. 'ಬಾಣ' ಎಂಬ ಮಾತು ಬರದೇ ಇರುವಂಥದು ಅರ್ಥಪೂರ್ಣವಾಗಿದೆ. 'ಅಪ್ಪಿದರೆ ಅಸ್ಥಿಗಳು ನುಗ್ಗು ನುರಿಯಾಗಬೇಕು' ಎನ್ನುವುದು 'ನಡಬೇಕು' ಆದಮೇಲೆ ಬಂದು ಆಲಿಂಗನದ ತೀಕ್ಷ್ಣತೆ ಎಂಥದು ಎನ್ನುವುದನ್ನು ವ್ಯಂಜಿಸುತ್ತದೆ. 'ಬೆಚ್ಚರೆ ಬೆಸುಗೆಯರಿಯ ದಂತಿರಬೇಕು'- (ಬೆಚ್ಚ-ಬಿಸು; ಬೆಚ್ಚರ-ಅವಸರ; ಬೆಚ್ಚು-ಬೆಸುಗೆ ಮತ್ತು ಬೆಚ್ಚನೆಯ: ಈ ಅರ್ಥಗಳು ಇಲ್ಲಿ ಅನ್ವಯವಾಗುತ್ತವೆ) ಹೀಗೆ ಇಡೀ ವಚನ ಸಂಭೋಗದ ತುರೀಯಾವಸ್ಥೆಯ ವರ್ಣನೆಯೇ ಆಗಿದೆ. ನೇರವಾಗಿ ಸಂಭೋಗದ ಚಿತ್ರಣ ಕೊಡುವ ಈ ವಚನ 'ಆಕೆ'ಗೆ 'ಆತ' ಎಷ್ಟರಮಟ್ಟಿಗೆ 'ವಾಸ್ತವಿಕ', 'ಸತ್ಯ' ಎನ್ನುವುದನ್ನು ತಿಳಿಸುತ್ತದೆ. 'ಅಚ್ಚು', 'ಮಚ್ಚು', 'ಬೆಚ್ಚು' ಈ ಪದಗಳ ನಾದ ವಚನದ ಧೋರಣೆಗೆ ತಕ್ಕುದಾಗಿದೆ.

ಗುರುವೆಂಬ ತೆತ್ತಿಗನೆನಗೆ ಲಿಂಗ
ವೆಂಬಲಗನು ಮನನಿಷ್ಠೆಯೆಂಬ ಕೈಯ್ಯಲಿ
ಕೊಡಲು, ಕಾದುವೆನು ಗೆಲುವೆನು
ಕಾಮನೆಂಬುವನ
ಕ್ರೋಧಾದಿಗಳು ಕೆಟ್ಟು ವಿಷಯಂಗಳೋಡಿದವು
ಅಲಗು ಎನ್ನೊಳಗೆ ನಟ್ಟು
ಆನಳಿದ ಕಾರಣ
ಚೆನ್ನಮಲ್ಲಿಕಾರ್ಜುನ ಲಿಂಗವ
ಕರದಲ್ಲಿ ಹಿಡಿದೆ

'ಗುರುವೆಂಬ ತೆತ್ತಿಗನು' ಕೊಟ್ಟ 'ಲಿಂಗವೆಂಬಲಗ'ನ್ನು 'ಮನನಿಷ್ಠೆಯೆಂಬ ಕೈಯಲಿ' ಹಿಡಿದು ಕಾದಿ, 'ಕಾಮನೆಂಬುವನ' ಗೆದ್ದಾಗ 'ಕ್ರೋಧಾದಿಗಳು ಕೆಟ್ಟು, ವಿಷಯಂಗಳೋಡಿದವು' - ಇದು ಒಂದು ಹೋರಾಟದ ಸಂದರ್ಭವನ್ನು ಚಿತ್ರಿಸುತ್ತದೆ. ಆ ಹೋರಾಟದಲ್ಲಿ ಕಾಮ ಸೋತ, ಕ್ರೋಧಾದಿ ಅರಿಷಡ್ವರ್ಗಗಳು ಕೆಟ್ಟವು, ವಿಷಯಗಳು ಪಲಾಯನ ಮಾಡಿದವು. ಆದರೆ, ಅವು ತನ್ನೊಳಗೇ ಇದ್ದಂಥವು: ಆದ್ದರಿಂದ ಅವು ಓಡಿದ್ದು, ಅಲಗು ಎನ್ನೊಳಗೆ 'ನಟ್ಟದ್ದ'ರಿಂದ; 'ಆನಳಿದ'ರಿಂದ. ಹಾಗೆ ಗುರು ಕೊಟ್ಟ ಲಿಂಗ 'ಆನಳಿ'ಯಲು ಕಾರಣವಾಗಿ, ಕೊನೆಗೆ 'ಚೆನ್ನಮಲ್ಲಿಕಾರ್ಜುನ ಲಿಂಗ' ನನ್ನ ಕರಕ್ಕೆ ಬಂತು. ಅಂದರೆ, ಇಲ್ಲಿ ಗುರು, 'ಅವನ'ನ್ನು ಕಾಣಲು ಮೂಲ ಕಾರಣನಾಗುತ್ತಾನೆ.

ಆದರೆ ಈ ಎಲ್ಲ ಆಧ್ಯಾತ್ಮಿಕ ಅರ್ಥಕ್ಕೆ, ತೀವ್ರತೆಯನ್ನು ತಂದುಕೊಡುವಂಥದು, ಹೋರಾಟದ ಪ್ರತಿಮೆ ಮತ್ತು ಆ ಪ್ರತಿಮೆಯಲ್ಲಿಯೇ ಅಂತರ್ಗತವಾಗಿ - 'ಲಿಂಗ', 'ಅಲಗು', 'ಎನ್ನೊಳಗೆ ನಟ್ಟು', 'ಆನಳಿದ ಕಾರಣ'- ಬರುವ ಲೈಂಗಿಕ ಪ್ರತಿಮೆ. 'ಆನಳಿದ್ದ'ದ್ದು'ಅಲಗು' ಅಂದರೆ 'ಲಿಂಗ' ಎನ್ನೊಳಗೆ 'ನಟ್ಟ'ದ್ದರಿಂದ; ಅದರಿಂದ ಅಂಗತ್ವ ಲಯವಾಯಿತು.[1] ಒಬ್ಬಳು ವ್ಯಕ್ತಿ ಸಂಪೂರ್ಣವಾಗಿ ಇನ್ನೊಬ್ಬ 'ವ್ಯಕ್ತಿ'ಯಲ್ಲಿ ತೊಡಗಿದ ಕ್ರಿಯೆಯೂ ಆಗಿದೆ.

ಬಂಜೆ ಬೇನೆಯನರಿವಳೇ
ಬಲತಾಯಿ ಮುದ್ದ ಬಲ್ಲಳೇ
ನೊಂದ ನೋವ ನೋಯದವರೆತ್ತ ಬಲ್ಲರು
ಚೆನ್ನಮಲ್ಲಿಕಾರ್ಜುನನಿರಿದಲಗು
ಒಡಲಲ್ಲಿ ಮುರಿದು
ಹೊರಳುವೆನ್ನಳಲನು
ನೀವೆತ್ತ ಬಲ್ಲಿರೇ ಎಲೆ ತಾಯಿಗಳಿರಾ

ಈ ವಚನ ವ್ಯಂಜಿಸುವ ಅನುಭವದ ತೀಕ್ಷ್ಣತೆ ಇಲ್ಲಿ ಬರುವ ಲೈಂಗಿಕ ಸತ್ವದಿಂದ ಕೂಡಿದ ನೋವಿನ ಪ್ರತಿಮೆಯಿಂದ ಬರುವಂಥಾದ್ದಾಗಿದೆ: 'ಚೆನ್ನಮಲ್ಲಿಕಾರ್ಜುನ ನಿರಿದಲಗು ಒಡಲಲ್ಲಿ ಮುರಿದು ಹೊರಳುವೆನ್ನಳಲು' - ಚೆನ್ನಮಲ್ಲಿಕಾರ್ಜುನನಿರಿದ 'ಅಲಗು' ಎಂಬ ಮಾತು, ಲೈಂಗಿಕ ಸತ್ವಕ್ಕೆ ಆಧ್ಯಾತ್ಮಿಕ ಸತ್ವವನ್ನು ತಂದು, ಎರಡೂ

---

1. 'ನಡು' ಎಂಬ ಪದ 'ನಾಟು' ಎಂಬರ್ಥದಲ್ಲಿ ಮತ್ತೆ ಮತ್ತೆ ಅಕ್ಕಮಹಾದೇವಿಯ ವಚನಗಳಲ್ಲಿ ಬರುತ್ತದೆ. ಉಳಿದ ವಚನಕಾರರಲ್ಲಿಯೂ ಸತಿ-ಪತಿ ಭಾವದ ವಚನಗಳು ಬಂದರೂ ಅಕ್ಕನ ವಚನಗಳಲ್ಲಿರುವ ತೀವ್ರತೆಯಾಗಲೀ ಲೈಂಗಿಕಸತ್ವದಿಂದ ಬರುವ ತೀಕ್ಷ್ಣತೆಯಾಗಲೀ ಇಲ್ಲ ಎಂಬ ಅಂಶ ಮುಖ್ಯವಾಗಿ ಗಮನಿಸಬೇಕಾದದ್ದು. 'ನಡು' ಎಂಬ ಪದ ಅಕ್ಕ ಬಳಸುವಂತೆ ಅಲ್ಲೆಲ್ಲೂ ಪ್ರಯೋಗವಾಗುವುದಿಲ್ಲ.



ಒಂದೇ ಆಗಿಬಿಡಲು ಕಾರಣವಾಗುತ್ತದೆ. 'ಅಲಗು ಒಡಲಲ್ಲಿ ಮುರಿದು ಹೊರಳುವ' ಕ್ರಿಯೆ ಭಾಷೆಯಲ್ಲಿ ಅಭಿನಯವಾಗಿಬಿಡುತ್ತದೆ: ಅದಕ್ಕೆ ಗಂಡು ಸತ್ವದಿಂದ ಕೂಡಿದ 'ಅಲಗು', 'ಇರಿದು', 'ಮುರಿದು', 'ಒಡಲು', 'ಹೊರಳು', 'ಅಳಲು; - ಈ ಪದಗಳು ಆ ಭಾವಾಭಿನಯಕ್ಕೆ ಕಾರಣಗಳಾಗುತ್ತವೆ.

ಅಕ್ಕ ಕೇಳಕ್ಕ
ಆನೊಂದು ಕನಸ ಕಂಡೆ
ಚಿಕ್ಕ ಚಿಕ್ಕ ಜಡೆಯ ಸುಲಿಪಲ್ಲ ಗೊರವನು
ಬಂದೆನ್ನ ನೆರೆದ ನೋಡವ್ವ
ಆತನನಪ್ಪಿಕೊಂಡು ತಳವೆಳಗಾದೆನೆಲಗೆ
ಚೆನ್ನಮಲ್ಲಿಕಾರ್ಜುನನ ಕೂಡಿ
ಕಣ್ತೆರೆದು ತಳವೆಳಗಾದೆನೆಲಗೇ.

'ಅಕ್ಕ ಕೇಳಕ್ಕ' ಎಂಬ ಆತ್ಮೀಯ ಧಾಟಿಯಲ್ಲಿ ಪ್ರಾರಂಭವಾಗುತ್ತದೆ. ಈ ವಚನ ಅಂಥ ಕನಸನ್ನು ಹೇಳಿಕೊಳ್ಳಬೇಕಾದರೆ, ಕೇಳುವ ವ್ಯಕ್ತಿ ಆತ್ಮೀಯಳಾಗಿದ್ದರೆ ಮಾತ್ರ ಸಾಧ್ಯ. ಅಂಥ ಆತ್ಮೀಯತೆಯನ್ನು ಆ ಮೊದಲು ಪಾದ ಮತ್ತು 'ಎಲಗೇ' ಸಿದ್ಧಮಾಡಿ ಬಿಡುತ್ತದೆ. ಮೊದಲಿಗೆ ಹಾಗೆ ಕನಸಲ್ಲಿ 'ನೆರೆದ'ವನಾರು ಎಂದು ಹೇಳದೆ, ಅವನ ರೂಪದ ವರ್ಣನೆಯಿದೆ: 'ಚಿಕ್ಕ ಚಿಕ್ಕ ಜಡೆಯ ಸುಲಿಪಲ್ಲ ಗೊರವ', 'ಆತನನಪ್ಪಿಕೊಂಡು ತಳವೆಳಗಾದೆನೆಲಗೆ'. ಆಕೆಗೆ ಅವನ ರೂಪದಿಂದಲೇ ಅವನಾರು ಎಂದು ಗೊತ್ತು; ಇಲ್ಲಿ, 'ತಳವೆಳಗಾದೆ' ಎಂಬ ಪದಕ್ಕೆ 'ಆನಂದಭರಿತಳಾದೆ' ಎಂಬ ಅರ್ಥ ಸರಿ ಆಗುತ್ತದೆ. ಅದೇ 'ಚೆನ್ನಮಲ್ಲಿಕಾರ್ಜುನನ ಕೂಡಿ' -ಇಲ್ಲಿ 'ಅವನ' ಹೆಸರು ಬರುತ್ತದೆ. 'ಕಣ್ತೆರೆದು' ನೋಡಿದರೆ, ಅವನಿಲ್ಲ. ಆಗ, 'ತಳವೆಳಗಾದೆ' ಎನ್ನುವುದಕ್ಕೆ 'ತಲ್ಲಣಿಸಿದೆ' ಎಂಬ ಅರ್ಥ ಸರಿಯಾಗುತ್ತದೆ. ಹಾಗೆ ಆ ಪದಕ್ಕಿರುವ ಎರಡು ಅರ್ಥಗಳೂ ಸಾರ್ಥಕವಾಗುತ್ತದೆ. ಈ ವಚನ ಲೈಂಗಿಕ ಸತ್ವವುಳ್ಳದ್ದು ಎಂದು ಮತ್ತೆ ಹೇಳಬೇಕಾಗಿಲ್ಲ.

ಇಂದ್ರನೀಲಗಿರಿಯನೇರಿಕೊಂಡು
ಚಂದ್ರಕಾಂತ ಶಿಲೆಯ ಮೆಟ್ಟಿಕೊಂಡು
ಕೊಂಬ ಬಾರಿಸುತ, ಹರನೇ
ಎನ್ನ ಕುಂಭ ಕುಚದ ಮೇಲೆ ನಿಮ್ಮನೆಂದಪ್ಪಿಕೊಂಬೆನಯ್ಯ
ಅಂಗ ಭಂಗ ಮನಭಂಗವಳಿದು
ನಿಮ್ಮನೆಂದಿಗೊಮ್ಮೆ ನೆರೆವೆನೋ
ಚೆನ್ನಮಲ್ಲಿಕಾರ್ಜುನ.

ಕೂಡಿಕೊಡುವ ಸುಖದಿಂದ
ಒಪ್ಪತ್ತು ಅಗಲಿ ಕೊಡವ ಸುಖ
ಲೇಸು ಕೆಳದಿ.

ಕಿಚ್ಚಿಲ್ಲದ ಬೇಗೆಯಲಿ
ಬೆಂದೆನವ್ವ
ಏರಿಲ್ಲದ ಘಾಯದಲಿ
ನೊಂದೆನವ್ವ

ಒಣಗಣ ಗಂಡನವ್ವ ಹೊರಗಣ ಮಿಂಡನವ್ವ
ಎರಡನೂ ನಡೆಸಲು ಬಾರದವ್ವ !
ಲೌಕಿಕ ಪಾರಮಾರ್ಥವೆಂಬೆರಡನೂ
ನಡೆಸಲು ಬಾರದವ್ವ

ಸಂಗದಿಂದಲ್ಲದೆ ಅಗ್ನಿ ಹುಟ್ಟದು
ಸಂಗದಿಂದಲ್ಲದೆ ಬೀಜ ಮೊಳೆದೋರದು
ಸಂಗದಿಂದಲ್ಲದೆ ದೇಹವಾಗದು
ಸಂಗದಿಂದಲ್ಲದೆ ಸರ್ವಸುಖದೋರದು
ಚೆನ್ನಮಲ್ಲಿಕಾರ್ಜುನಯ್ಯ

ನಿಮ್ಮ ಶರಣರ ಅನುಭಾವಸುಖದಿಂದಾನು
ಪರಮ ಸುಖಿಯಯ್ಯ.[1]
ಎನ್ನ ಕಾಯದ ಸುಖವ ಲಿಂಗ ಭೋಗಿಸುವವನಾಗಿ
ಶರಣಸತಿ-ಲಿಂಗಪತಿಯಾದೆನು.

ಇವೆಲ್ಲಾ ಅಕ್ಕನಿಗೆ 'ಅನುಭಾವ', ಬೇರೊಬ್ಬ ವ್ಯಕ್ತಿಗೆ ಲೌಕಿಕವಾದ ಅನುಭವ ಎಷ್ಟು ಸತ್ಯವೋ, ಅಷ್ಟೇ ಸತ್ಯವಾದದ್ದು ಎನ್ನುವುದನ್ನು ತಿಳಿಸುತ್ತವೆ. ಅಷ್ಟೇ ಅಲ್ಲದೆ ಇಲ್ಲಿರುವ ರೂಪಕಗಳೆಲ್ಲವೂ ಲೈಂಗಿಕ-ಸತ್ವವುಳ್ಳವು. ಈ ಲೈಂಗಿಕ -ಸತ್ವವೇ ಆಧ್ಯಾತ್ಮಿಕ ಸತ್ವಕ್ಕೆ ತೀಕ್ಷ್ಣತೆಯನ್ನು ತಂದುಕೊಡುವುದಷ್ಟೇ ಅಲ್ಲದೆ, ಅವೆರಡೂ ಈ ಸಂದರ್ಭದಲ್ಲಿ ಒಂದೇ ಆಗಿಬಿಡುತ್ತದೆ.

ವಚನ ರಚನೆ, ಭಾಷೆಯ ಬಳಕೆಯ ರೀತಿ ಮತ್ತು ನಂಬಿಕೆಯ ದೃಷ್ಟಿಯಿಂದ ಅಕ್ಕಮಹಾದೇವಿ ಶಿವಶರಣರ ಜೀವನದೃಷ್ಟಿ ಮತ್ತು ರೀತಿಗಳನ್ನು ಒಪ್ಪಿಕೊಂಡವಳು. ಆ ದೃಷ್ಟಿಯ ಮೌಲ್ಯಗಳನ್ನು ಒಪ್ಪಿ ಅವುಗಳಿಗಾಗಿ, ಅವುಗಳನ್ನು ತನ್ನ ಜೀವನದಲ್ಲಿ ಆಗಿಸುವುದಕ್ಕಾಗಿ ಹೋರಾಡಿದವಳು.

ಆಗಲೂ ಸಾಮಾಜಿಕವಾಗಿ ಹೆಣ್ಣಿಗೆ ಇದ್ದ ಸ್ಥಾನ ಉತ್ತಮವಾದದ್ದೇನೂ ಅಲ್ಲ. ಗಂಡಿಗಧೀನಳಾಗಿ, ಸಾಂಪ್ರದಾಯಿಕ ಮೌಲ್ಯಗಳನ್ನು ಒಪ್ಪಿ ಚಾಚೂತಪ್ಪದೆ ನಡೆಸಿಕೊಂಡು ಹೋಗುವುದೇ ಹೆಣ್ಣಿನ ಆದರ್ಶ ಎಂಬ ಭಾವನೆ- ಬಹುಶಃ ಈಗಲೂ ಸಾಮಾನ್ಯವಾಗಿ

1. ಡಾ. ಎಂ.ಜಿ. ಕೃಷ್ಣಮೂರ್ತಿಯವರು ಈ ವಚನವನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ಮಾಡಿದ್ದಾರೆ. ನೋಡಿ: ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು. ಪು. 64



ಹೆಣ್ಣಿನ ಬಗ್ಗೆ ಇರುವ ಧೋರಣೆ ಅದೇ ಆಗಿದೆ; ಇತ್ತು. ಅಂತಹ ಸಾಮಾಜಿಕ ಸಂಪ್ರದಾಯದ ವಿರುದ್ಧ, ಮದುವೆ ಆದ ಗಂಡನನ್ನೂ ಧಿಕ್ಕರಿಸಿ, ತಾನು ಕಂಡುಕೊಂಡ ವಿಶಿಷ್ಟವಾದ ಜೀವನಮಾರ್ಗಕ್ಕೆ ಅಡ್ಡಿ ಬಂದದ್ದೆಲ್ಲವನ್ನೂ ಪಕ್ಕಕ್ಕೆ ತಳ್ಳಿ, ಬೆತ್ತಲೆಯಾಗಿ ಹೊರಟ ಮಹಾದೇವಿ ವ್ಯಕ್ತಿಸ್ವಾತಂತ್ರ್ಯದಂಥ ಮೌಲ್ಯಗಳನ್ನು ಬಾಳಿ ತೋರಿಸಿದವಳು.

ಅಕ್ಕ, ತಾನು ಆರಿಸಿಕೊಂಡ ಜೀವನದ ಸಂದರ್ಭದಲ್ಲಿ ತಾನು ಅನುಭವಿಸಿದ ಅನುಭವಗಳು, ಎದುರಿಸಿದ ಸಮಸ್ಯೆಗಳು-ಇವೆಲ್ಲಕ್ಕೂ ವಚನಗಳಲ್ಲಿ ರೂಪಕೊಟ್ಟಳು. ಮನಸ್ಸಿನ ಅತಿ ಗೂಢತರ ಸ್ತರಗಳನ್ನು ಹುಡುಕುವ, ಅದನ್ನು ಭಾಷೆಯಲ್ಲಿ ಆಗಿಸುವ ಅವಳ ಪ್ರಯತ್ನದಿಂದ ಹುಟ್ಟಿದ ವಚನಗಳು ಉತ್ತಮ ಕಾವ್ಯಕ್ಕೆ ಮಾನದಂಡಗಳಾಗಿವೆ. □

ಅರ್ಥಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೆ ? ಅಲ್ಲ.
ಆದಿರುದ್ರನ ಮಗಳು ಆದಿಶಕ್ತಿ ;
ಆದಿಶಕ್ತಿಯ ಮಗ ವಿಷ್ಣು ;
ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ.
ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೆ ? ಅಲ್ಲ.
ಎನ್ನ ಮನದೊಡೆಯ ಮಹಾದೇವಾ,
ನಿಮ್ಮ ಮನವ ನಿಮಗೊಪ್ಪಿಸಿ ನಾನು ಶುದ್ಧ ಕಾಣಾ,
ಕೂಡಲಸಂಗಮದೇವಾ.

**- ಬಸವಣ್ಣ**

# ತಮಿಳುನಾಡಿನಲ್ಲಿ ವೀರಶೈವ ಧರ್ಮ, ಪರಂಪರೆ

**ಸು. ಬಸವರಾಜದೊಡ್ಡಟ್ಟಿ**

ಪ್ರಪಂಚದ ನಾಗರಿಕತೆಯ ತೊಟ್ಟಿಲುಗಳನ್ನು ಕಟ್ಟಿದ್ದು, ಈಜಿಪ್ಟ್ ದೇಶದ ನೈಲ್ ನದಿ ಬಯಲು, ಭಾರತದ ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳ ಬಯಲು. ಮೆಸಪಟೋಮಿಯಾದ ಯುಫ್ರೆಟೀಸ್ ಮತ್ತು ಟೈಗ್ರೀಸ್ ನದಿಬಯಲು. ಚೀನಾ ದೇಶದ ಸಿಕಿಯಾಂಗ್ ಮತ್ತು ಯಾಂಗ್‌ಸಿಕಿಯಾಂಗ್ ನದಿಗಳ ಬಯಲು. ಭಾರತದ ಸಿಂಧೂನದಿಯು ಇಂದು ಪಾಕಿಸ್ತಾನಕ್ಕೆ ಸೇರಿದೆ.

ಸಿಂಧೂ ನದಿಯ ತೀರದಲ್ಲಿ ಹರಪ್ಪ ಮತ್ತು ಮಹೆಂಜೆದಾರೋ ಸ್ಥಳಗಳಲ್ಲಿ ಪುರಾತನ ನಾಗರಿಕತೆಯ ಪಳೆಯುಳಿಕೆಗಳನ್ನು ಕಾಣಬಹುದು. ಇವುಗಳ ಆಧಾರಗಳಿಂದ ಈ ಪ್ರದೇಶಗಳಲ್ಲಿ ಹಿಂದಿನಿಂದಲೂ ಶೈವಪಂಥವು ಆಚರಣೆಯಲ್ಲಿತ್ತೆಂದು ತಿಳಿಯುತ್ತದೆ. (ಸರ್‌ಜಾನ್ ಮಾರ್ಷೆಲ್ ಎಂಬ ಹಿರಿಯ ಸಂಶೋಧಕರ ಹೇಳಿಕೆ). ಇಲ್ಲಿಂದಲೇ ಶಿವಾಗಮಗಳ ರಚನೆಯಾಗಿರಬೇಕೆಂಬ ನಂಬಿಕೆ. ವೀರಶೈವ ದಾರ್ಶನಿಕರೂ ತಮ್ಮ ಆಚಾರ ವಿಚಾರಗಳ ನೆಲೆಯಲ್ಲಿ ಇವಲ್ಲಿನ ಆಧಾರಗಳಿಂದಲೇ ಪರಿಗ್ರಹಿಸಿರುತ್ತಾರೆ. ಈ ಸಾಹಿತ್ಯವು ವೇದಸಾಹಿತ್ಯಕ್ಕಿಂತಲೂ ಬೃಹತ್ತಾಗಿದೆ. ಆದರೆ ಈ ಸಾಹಿತ್ಯವು ತನ್ನ ಮೂಲರಚನೆಗಳನ್ನು ಹೊರಜಗತ್ತಿಗೆ ಪ್ರಚಾರಗೊಳಿಸುತ್ತಿರುವುದಂತೂ ಬಹಳ ತಡವಾಗಿಯೇ.

ಭಾರತೀಯ ದರ್ಶನದಲ್ಲಿ ವಿವಿಧ ಶೈವ ದರ್ಶನದ ಶಕ್ತಿ ತತ್ವವು ಬ್ರಾಹ್ಮಣ ಮತ್ತು ಉಪನಿಷತ್ತುಗಳಾಗಿ ವಿಕಾಸಹೊಂದುತ್ತಾ, ಪ್ರಾರಂಭದಲ್ಲಿ ಕಾಶ್ಮೀರಿ ಶೈವದರ್ಶನದಲ್ಲಿ ತಾತ್ವಿಕವಾಗಿ ಚರ್ಚಿತವಾಗಿ, ಆನಂತರದಲ್ಲಿ ದಕ್ಷಿಣ ಭಾರತದ ಲಿಂಗಾಯತ ದರ್ಶನದಲ್ಲಿ ಪೂರ್ಣರೂಪವಾಗಿ ಹೊರಹೊಮ್ಮಿರುವುದಾಗಿ, ಶ್ರೀ ಸುಧೇಂದ್ರಕುಮಾರ ದಾಸ್ ಎಂಬ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಶ್ರೀಯುತರು ಸಂಸ್ಕೃತ ಮತ್ತು ಬಂಗಾಳಿಯ ಭಾಷೆಗಳಲ್ಲಿ ಅದ್ವಿತೀಯ ಪಾಂಡಿತ್ಯ ಹೊಂದಿರುವವರು ಹಾಗೂ ತತ್ವಜ್ಞಾನಿಗಳು.

ವೀರಶೈವ ಪುರಾಣಗಳಿಗೆ ಮಾತೃಕೆಗಳು ಶೈವಪುರಾಣಗಳು. ಅದರಲ್ಲಿಯೂ ತಮಿಳು ನಾಡಿನಲ್ಲಿ ಪ್ರಖ್ಯಾತಿಹೊಂದಿರುವ ೬೩ ಪುರಾತನರೇ (ಕರ್ನಾಟಕ ವೀರಶೈವ ಪುರಾಣಕ್ಕೆ ಮುಖ್ಯ ನೆಲೆ. ಆದರೆ ಅಷ್ಟೇ ಸತ್ಯ! ಕರ್ನಾಟಕ ಒಂದೇ ವೀರಶೈವಕ್ಕೆ ನೆಲೆಯಾಗಿಲ್ಲಾ!) ಇದರ ಜತೆಗೆ ಬೃಹತ್ ಸಾಹಿತ್ಯವನ್ನು ಹೊಂದಿರುವ ೨೮ ಶಿವಾಗಮಗಳಲ್ಲಿ ವೀರಶೈವ ತತ್ವ ಮತ್ತು ಆಚಾರಗಳ ವಿಪುಲವಾದ ನಿದರ್ಶನಗಳಿವೆ. ಕೆಲವು ಆಗಮಗಳಲ್ಲಿ



ಸಾಂಕೇತಿಕವಾಗಿ, ಮತ್ತೆ ಕೆಲವಲ್ಲಿ ವಿಶಿಷ್ಟವಾಗಿಯೂ ಇದ್ದು ವೀರಶೈವ ಧರ್ಮದ ಆಧ್ಯಾತ್ಮದರ್ಶನದ ಸಾಧನಾ ಮಾರ್ಗಗಳ ವಿವರಣೆಗಳನ್ನು ತಿಳಿಸುತ್ತವೆ. ಶೈವವು ಎಲ್ಲಾ ದರ್ಶನಗಳಿಗಿಂತಲೂ ಅತ್ಯಂತ ಪುರಾತನ ಎಂಬುದಕ್ಕೆ ಹರಪ್ಪ ಮಹೇಂಜೋದಾರೋಗಳಲ್ಲಿ ದೊರೆತಿರುವ ಪಳೆಯುಳಿಕೆಗಳ ಸಾಕ್ಷಿ ಆಧಾರಗಳಿಂದ ಹೇಳಬಹುದಾಗಿದೆ. ಒಟ್ಟಾರೆ ಶೈವದ ಉಗಮದಲ್ಲಿಯೇ ವೀರಶೈವ ಎಂಬುದು ನಿಜವಾಯಿತು.

ವೀರಶೈವರು ಶಿವಾಗಮಗಳನ್ನು ತಮ್ಮ ಅಧಿಕೃತ ಗ್ರಂಥಗಳಾಗಿ ಪರಿಗ್ರಹಿಸಿರುತ್ತಾರೆ. ಅವರ ಮುಖ್ಯ ಸಿದ್ಧಾಂತಗಳು (೧) ಅಷ್ಟಾವರಣ (೨) ಷಟ್‌ಸ್ಥಲ. ಈ ಪದವು ದಕ್ಷಿಣ ಭಾರತದಲ್ಲಿ ಜೀವಂತ ಪಂಥವಾಗಿದೆ. ಈ ಧರ್ಮಾವಲಂಬಿಗಳು ದೇಹದ ಮೇಲೆ ಲಿಂಗವನ್ನು ಧರಿಸುವುದರಿಂದ ಲಿಂಗಾಯತರೆಂದೂ ಕರೆಯಲ್ಪಡುತ್ತಾರೆ. ಈ ಧರ್ಮವು ಶಿವನಲ್ಲಿ ಅಚಲವಾದ ಭಕ್ತಿಯಿಡುವುದನ್ನು ಪ್ರತಿಪಾದಿಸುತ್ತದೆ.

ವೀರಶೈವಕ್ಕೆ ಪೋಷಕವಾಗಿರುವ ಶೈವಾಗಮದ ಮೊದಲ ಭಾಗವು ಪೂಜೆ-ಶಿವ ಯೋಗದೀಕ್ಷೆ-ಆಚರಣೆಯನ್ನು ಪ್ರತಿಪಾದಿಸುತ್ತದೆ, ಹಾಗೂ ವೀರಶೈವದ ನೆಲೆಯನ್ನು ಅನಾವರಣ ಮಾಡುತ್ತದೆ. ಆದುದರಿಂದಲೇ ಅನೇಕ ವಿದ್ವಾಂಸರು ವೀರಶೈವದ ಅಧ್ಯಯನಕ್ಕಾಗಿ ಶೈವ ಆಗಮಗಳ ಅವಲೋಕನ ಕ್ರಿಯೆಗೆ ತೊಡಗುವುದು. ಇವುಗಳ ಬಗ್ಗೆ ಸಂಶೋಧನೆ ನಡೆಸಿದ ವಿದ್ವಾಂಸರ ಆಧಾರ ಸಹಿತ ಗಣನೆಯಂತೆ ಇವುಗಳ ಕಾಲ ಕ್ರಿ.ಪೂ. ಮೂರನೆಯ ಶತಮಾನ ಎಂದಾಯಿತು. ಇಂತಹ ಆಧಾರಗಳಿಂದಲೇ ಅನೇಕ ಮಹನೀಯರು ವೀರಶೈವ ಅನಾದಿ ಎಂದು ಹೇಳುವುದರಲ್ಲಿ ಅರ್ಥವಿದೆ. ಆದುದರಿಂದ ಇದು ಹನ್ನೆರಡನೆಯ ಶತಮಾನಕ್ಕಿಂತಲೂ ಹಿಂದಿನದೆಂದು ತಿಳಿಯಿತು. ಅಂದರೆ 'ಸಿದ್ಧಾಂತ ಶಿಖಾಮಣಿ' ಗ್ರಂಥದಲ್ಲಿ ಹೇಳಿರುವಂತೆ ಶ್ರೀ ರೇಣುಕಾಚಾರ್ಯ ಋಷಿಗಳು ಅಗಸ್ತ್ಯ ಮುನಿಗಳಿಗೆ ವೀರಶೈವ ಧರ್ಮದ ರಹಸ್ಯ ಸೂತ್ರಗಳನ್ನು ಬೋಧಿಸಿದರು ಎಂಬುದನ್ನು ಕಾಲಗಣನೆಯಿಂದ ಒಪ್ಪಲೇಬೇಕಾಗುತ್ತದೆ.

ಆರಂಭದಲ್ಲಿ ವೀರಶೈವವೆಂದರೇನು ಎಂಬುದರ ಬಗ್ಗೆ ಸೂಕ್ಷ್ಮಾವಲೋಕನ ಮಾಡಲು, ಈ ದರ್ಶನದ ಮೂಲ ಮತ್ತು ಸಿದ್ಧಾಂತಗಳ ಬಗ್ಗೆ ತಿಳಿಯುವುದು ಉತ್ತಮ. ದೇಹದ ಮೇಲೆ ಸದಾಶಿವನ ಪ್ರತೀಕವಾಗಿರುವ ಲಿಂಗವನ್ನು ಧರಿಸಿದವನು, ಆದುದರಿಂದ ಇವರನ್ನು ಲಿಂಗಾಯತರೆಂದು ಕರೆಯುತ್ತಾರೆ. ಕಲ್ಯಾಣದ ಕ್ರಾಂತಿಯಲ್ಲಿ ಬಿಜ್ಜಳನ ಮೇಲೆ ಪ್ರತೀಕಾರವನ್ನು ತೀರಿಸಲಿಕ್ಕಾಗಿ ಶರಣಸಂಕುಲದವರು 'ವೀರಾವೇಶದಿಂದ ಕತ್ತಿ ಹಿಡಿದು ಹಿರಿದು' ಹೋರಾಡಿದ ಪ್ರಯುಕ್ತವಾಗಿ 'ವೀರಶೈವರು' ಎನ್ನಿಸಿಕೊಂಡರೆಂಬ ಪ್ರತೀತಿಯೂ ಇದೆ. ಆದರೆ, ವೀರಶೈವ ದರ್ಶನದ ಅಧಿಕೃತ ಗ್ರಂಥವಾದ 'ಸಿದ್ಧಾಂತ ಶಿಖಾಮಣಿ'ಯಲ್ಲಿ ವರ್ಣಿಸಿರುವಂತೆ, ವೀರಶೈವ ಎಂದರೆ ಶಿವ ಮತ್ತು ಜೀವರ ಸಾಮರಸ್ಯವನ್ನು ಬೋಧಿಸುವ ಮತ್ತು ದಿವ್ಯ ಜ್ಞಾನಾನಂದವನ್ನು ಅನುಭವಿಸುವ ಶಿವತತ್ವಾನುಯಾಯಿಗಳೆಂದು ವಿವರಣೆ ನೀಡಿದೆ.

ಶ್ರೀಪತಿ ಪಂಡಿತಾರಾಧ್ಯರು ಬ್ರಹ್ಮಸೂತ್ರ ಭಾಷ್ಯದ ವ್ಯಾಖ್ಯಾನದಲ್ಲಿ ಜೀವಮುಖ್ಯ ಪ್ರಾಣ ಲಿಂಗಾಯತ್ (ಶ್ರೀ.ಭಾ.ವಾ. II ೯೧) ಎಂಬ ಸೂತ್ರಕ್ಕೆ ವ್ಯಾಖ್ಯಾನ ಮಾಡುತ್ತ ಲಿಂಗವು ವೀರಶೈವರಿಗೆ ಪ್ರಾಣದಷ್ಟೇ ಪ್ರಾಮುಖ್ಯತೆ ಎಂದು ಹೇಳುತ್ತಾರೆ. ಪ್ರಾಣ ಮತ್ತು ಲಿಂಗ ಸಮನ್ವಯದ ತತ್ವಾನುಸಂಧಾನದ ಸಂಸ್ಕಾರ ವಿಶೇಷವನ್ನು ಪ್ರತಿಪಾದಿಸುತ್ತಾ ಗುರುವು ಶಿಷ್ಯರಿಗೆ ಈ ಗುರಿಯನ್ನು ಮುಟ್ಟುವ ಮಾರ್ಗವನ್ನು ತಿಳಿಸುತ್ತಾರೆ. ಶಿವಲಿಂಗವನ್ನು ಪ್ರಾಣದೋಪಾದಿಯಲ್ಲಿ ಕಾಣಬೇಕೆಂದೂ ಜೀವವಿರುವವರೆಗೆ ಅದನ್ನು ದೇಹದಲ್ಲಿ ಧರಿಸಿರಬೇಕೆಂದೂ ನಿಷ್ಠೆಯಿಂದಿರಬೇಕೆಂದೂ ಹೇಳುತ್ತಾರೆ.

ಈ ಸಂಪ್ರದಾಯದಲ್ಲಿ ಮೂರು ವಿಧ. (೧) ಸಾಮಾನ್ಯ (೨) ಮಿಶ್ರ (೩) ಶುದ್ಧ. ಸಾಮಾನ್ಯರು ಶಿವನನ್ನು ಮನಸೋ ಇಚ್ಛೆ ಬೇಕೆಂದೆನಿಸಿದಾಗ ಆರಾಧಿಸುವವರು. ಮಿಶ್ರರರು ಶಿವ ಮತ್ತು ವಿಷ್ಣುವಿನ ಆರಾಧಕರು. ಶುದ್ಧಶೈವರು ಶಿವನನ್ನು ಮಾತ್ರವೇ ಆರಾಧಿಸುವವರು. ಆದರೆ ವೀರಶೈವರು ಮಾತ್ರವೇ ತಮ್ಮ ಸದ್ಧರ್ಮ ಸಂಕೇತವಾಗಿ ದೇಹದ ಮೇಲೆ ಅಥವಾ ತಲೆಯಲ್ಲಿ (ಲಿಂಗಧೀರರ ವೀರಭದ್ರನ ವೇಷದಂತೆ) ಶಿವಲಿಂಗವನ್ನು ಧರಿಸುವುದರಿಂದ ಶುದ್ಧ ಶೈವರಿಗಿಂತ ಭಿನ್ನ ತತ್ವಾನುಯಾಯಿಗಳಾಗಿದ್ದಾರೆ. ವೀರಶೈವದ ಸಿದ್ಧಾಂತ ಸಂಪ್ರದಾಯ ಮತ್ತು ಆಚಾರದ ವಿಪುಲ ನಿದರ್ಶನಗಳಿಂದ ಪ್ರತಿಪಾದಿತವಾಗಿರುವ ಈ ಧರ್ಮವು ದಕ್ಷಿಣಭಾರತದಲ್ಲಿ ಮಾತ್ರ ಪ್ರಚಾರ ಕಂಡು ಆನಂತರ ಅಲ್ಲಿಯೇ ಸಂಕಷ್ಟಗಳಿಗೆ ಗುರಿಯಾದಂತೆ, ತನ್ನ ನೆರೆಹೊರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರಪ್ರದೇಶ, ಮಹಾರಾಷ್ಟ್ರ ಇತರಕಡೆಗಳಲ್ಲೂ ನೆಲೆ ಕಂಡು ಕ್ಷೀಣಿಸಿತು.

ಆದರೆ ವೀರಶೈವ ಪರಂಪರೆಗೆ ವಿಶ್ವದಲ್ಲಿಯೇ ಸರ್ವೋನ್ನತವಾದ ಹೆಗ್ಗಳಿಕೆಯನ್ನು ನೀಡಿದ್ದು, ಈ ಸಂಪ್ರದಾಯದ ಶರಣರ ವಚನ ಸಾಹಿತ್ಯ. ಈ ಪರಂಪರೆಯ ನಿಜ ಜೀವನ ಮಾರ್ಗದ, ಆಡು-ನುಡಿಗೆ ಪೂರಕವಾದ ಬದುಕಿನಿಂದ ಹದಗಟ್ಟಿಬಂದಂತ ಈ ಸಾಹಿತ್ಯರಾಶಿ ಪ್ರಪಂಚದಲ್ಲಿಯೇ ಸರ್ವಶ್ರೇಷ್ಠದಾದ ಪ್ರಾಕಾರವಾಗಿ ಬಂದಿತು. ಆದರೂ ಸಾಹಿತ್ಯ ಚರಿತ್ರೆಯ ಕಾಲದ ಗಣನೆಯಿಂದ ವಿವೇಚಿಸಿದಾಗ ದ್ರಾವಿಡ ಭಾಷೆಗಳಾದ ಕನ್ನಡ, ತೆಲುಗು, ಮಲೆಯಾಳಗಳಿಗಿಂತ ತಮಿಳು ಭಾಷೆಯೇ ಪ್ರಪ್ರಥಮ ವಾದ ಭಾಷೆಯಾಗಿದೆ. ಈ ಭಾಷೆಗೆ ಕ್ರಿ.ಪೂ. ೩ನೆಯ ಶತಮಾನದ ಚರಿತ್ರೆಯಿದೆ. ಉದಾಹರಣೆಗೆ ತಮಿಳಿನ ಪ್ರಸಿದ್ಧ ವ್ಯಾಕರಣ ಗ್ರಂಥವಾದ 'ತೊಲ್‌ಕ್ಕಾಪ್ಪಿಯಂ' (ಕ್ರಿ.ಪೂ. ೩-೫) 'ಶಿಲಪ್ಪದಿಗಾರಮ್ ಹಾಗೂ 'ಮಣಿಮೇಗಲೈ' ಎಂಬ ಮಹಾಕಾವ್ಯಗಳ ರಚನೆಯಾಗಿದ್ದು ಈ ಕಾಲದಲ್ಲಿಯೇ. ಈ ಗ್ರಂಥಗಳಲ್ಲಿ ದೇವರ ಬಗ್ಗೆ (ಶಿವ)ಯಿರುವ ಅಸ್ತಿತ್ವವನ್ನು ಉಲ್ಲೇಖಿಸಲಾಗಿದೆ. ಅಲ್ಲದೆ ಶಿವನ ಪಂಚಾಕ್ಷರದ (ನಮಃ ಶಿವಾಯ) ಹೆಸರಿದೆ. ಅಲ್ಲದೆ ತಮಿಳಿನ ಪ್ರಾಚೀನಕಾಲದ ಸಾಹಿತ್ಯ ಚರಿತ್ರೆಯಾದ ಸಂಗಕಾಲದಲ್ಲಿ ಶಿವನು ಹಲವಾರು ವಿಶೇಷಣಗಳಿಂದ ಕರೆಸಿಕೊಂಡಿರುವುದಕ್ಕೆ ಉದಾಹರಣೆಗಳಿವೆ. ಇಜ್ರೈವನ್ (ಚರವಿಶ್ವವ್ಯಾಪಿ) ಮುದಮುದಲವನ್ (ದೇವರಲ್ಲಿ ತುಂಬಾ ಹಳಬ) ಎಂದೂ,



ತಮಿಳಿನಲ್ಲಿ ೨೦೦೦ ವರ್ಷಗಳ ಹಿಂದೆ ರಚಿತವಾದ ತಮಿಳಿನ ವೇದ ಗ್ರಂಥ ಎಂದು ಹೇಳುವ 'ತಿರುಕ್ಕುಱಳ್' (ತಿರುವಳ್ಳುವರ್ ಕವಿ) ಗ್ರಂಥದಲ್ಲಿಯೂ ಸಾಂಕೇತಿಕವಾಗಿ 'ಅರತ್ತುಪಾಲ್' (ಧರ್ಮದ ಸಂಧಿ)ಯ ಹತ್ತು ಪದ್ಯಗಳಲ್ಲಿ. ಮೊತ್ತಮೊದಲ ಪದ್ಯದಲ್ಲಿಯೇ ಲೋಕಕ್ಕೆಲ್ಲಾ ಮೊತ್ತಮೊದಲಾದವನು "ಅಕರಂಮುದಲ್ ಎಳುತ್ತುಕ್ಕು, ಎಲ್ಲಾಂ ಆದಿ ಪಕ(ಗ)ವನ್ ಮುಟ್ರೋಉಲಕು" ಅಂದರೆ ಬರವಣಿಗೆಯ ಆರಂಭಕ್ಕೆ ಅಕ್ಷರಗಳು ಮೊದಲು ಹಾಗೆಯೇ ಲೋಕಕ್ಕೆಲ್ಲಾ ಮೊದಲಾದವನು (ಶಿವ) ಭಗವಂತ ಎಂಬುದಾಗಿ ಹೇಳಿದೆ. (ಸಾಂಕೇತಿಕವಾಗಿ)

ತಮಿಳುನಾಡಿನಲ್ಲಿ ೪, ೫ ಮತ್ತು ೬ನೇ ಶತಮಾನವನ್ನು ಕತ್ತಲೆಯ ಯುಗವೆಂದು ಕರೆಯುತ್ತಾರೆ. ಕಾರಣ ಈ ಅವಧಿಯಲ್ಲಿ ಹೇಳಿಕೊಳ್ಳುವಂತಹ ಸಾಹಿತ್ಯದ ರಚನೆಯಾಗಲಿಲ್ಲ. ಆದರೂ ೫ನೇ ಶತಮಾನದ ಆದಿಯಲ್ಲಿ ಪಲ್ಲವ ರಾಜರ ಆಡಳಿತದಲ್ಲಿ 'ತಿರುಮೂಲರು' ಎಂಬ ಕವಿಗಳಿಂದ 'ತಿರುಮಂದಿರಮ್' ಎಂಬ ಕೃತಿಯ ರಚನೆಯಾಯ್ತು. ಈ ಕೃತಿಯ ೫ನೇ ಪರಿಚ್ಛೇದದಲ್ಲಿ ಶೈವತತ್ವದ ಭೇದಗಳನ್ನು ಪ್ರಸ್ತಾಪಿಸಿರುತ್ತಾರೆ.

ಕ್ರಿ.ಶ. ೬೪೨ರಲ್ಲಿನ ಹಿಂದೆ ತಮಿಳುನಾಡಿನಲ್ಲಿ ಜೈನ ಧರ್ಮವು ಪ್ರಾಬಲ್ಯವನ್ನು ಪಡೆದಿತ್ತು. ಪಲ್ಲವ ದೊರೆಯಾದ ಮಹೇಂದ್ರವರ್ಮನು ಬಹಳ ಕಾಲ ಇದರ ಅನುಯಾಯಿಯಾಗಿದ್ದವನು ಭಕ್ತಶ್ರೇಷ್ಠರಾಗಿದ್ದ "ಶ್ರೀತಿರುನಾವುಕ್ಕರಸು" ಎಂಬುವರ ಪ್ರಭಾವಕ್ಕೆ ಒಳಗಾಗಿ ಶೈವಧರ್ಮವನ್ನು ಸ್ವೀಕಾರ ಮಾಡಿದನು. ಇವರ ಸಮಕಾಲೀನರು "ತಿರುಜ್ಞಾನ ಸಂಬಂಧರ್" ಹಾಗೂ "ಶ್ರೀ ಮಾಣಿಕ್ಯವಾಚಗರ್" ಎನ್ನುವವರು. ಮಾಣಿಕ್ಯವಾಚಕರ್ ರಚಿಸಿರುವ "ತಿರುವಾಚಗಂ" (ಭಗವಂತನ ದಿವ್ಯವಾಣಿ) ಎಂಬ ಕೃತಿಯಲ್ಲಿ ಶಿವನ ಅನಂತ ಲೀಲಾವಿನೋದಗಳ ವರ್ಣನೆಯನ್ನು ಮಾಡಲಾಗಿದೆ. ತಮಿಳುನಾಡಿನ ಶೈವಭಕ್ತರಿಗೆ ಇದೊಂದು ಭಕ್ತಿಪೂರ್ಣವಾದ 'ಮಹಾಕಾವ್ಯ'.

ಕ್ರಿ.ಶ. ೧೧೩೦-೧೧೫೦ರಲ್ಲಿ 'ಶೇಕ್ಕೀಱಾರ' ಎಂಬ ಕವಿಗಳು, 'ಪೆರಿಯಪುರಾಣ'ವೆಂಬ ಕೃತಿಯನ್ನು ರಚಿಸಿದರು. ಈ ಕೃತಿಯು ಕನ್ನಡ ವೀರಶೈವ ಪುರಾಣಗಳಿಗೆ ಆಕರವಾಯ್ತು. ಈತನು ಚೋಳರಾಜನಾಗಿದ್ದ 'ಕುಲೋತ್ತುಂಗ ಅನಪಾಯ'ನ ಮಂತ್ರಿಮಂಡಲದ ಸದಸ್ಯನೂ ಹೌದು. ಈತನು ತನ್ನ ಕೃತಿಯಲ್ಲಿ ೬೩ ಪುರಾತನರನ್ನು ವರ್ಣಿಸುವಲ್ಲಿ, 'ಶಿವನ ಲೀಲಾ ವಿನೋದ'ವನ್ನೂ ಚಿತ್ರಿಸಿರುತ್ತಾನೆ. ಈ ೬೩ ಪುರಾತನರೇ 'ಹರಿಹರ' ಮಹಾಕವಿಯ 'ರಗಳೆ' ಸಾಹಿತ್ಯಕ್ಕೆ ಸಂದುಬಂದವರುಗಳು.

ಕ್ರಿ.ಶ. ೧೧೨೦-೧೧೩೬ರ ಮಧ್ಯೆ ಇದ್ದ 'ವಿಕ್ರಮ ಚೋಳನ' ಕಾಲದಲ್ಲಿ ಆಸ್ಥಾನ ಕವಿಗಳಾಗಿದ್ದ "ಒಟ್ಟಕ್ಕೂತ್ತರ್" ಎಂಬುವವರು ರಚಿಸಿರುವ 'ತಕ್ಕಯಾಗಪ್ಪರಣಿ' ಎಂಬ ಕೃತಿಯಲ್ಲಿ ದಕ್ಷನ ಯಾಗದ ವರ್ಣನೆ ಹಾಗೂ ಶಿವನ ಅನಂತ ಲೀಲೆಗಳನ್ನು ವರ್ಣಿಸಿರುತ್ತಾರೆ. ಇದರ ಜತೆಗೆ ವೀರಭದ್ರದೇವರನ್ನು ಕುರಿತು ರಚಿಸಿರುವ 'ವೀರಸಿಂಗಾದವನ ಪುರಾಣಂ' ಎಂಬ ಕೃತಿಯಲ್ಲಿ ವೀರಭದ್ರದೇವರ ಅನಂತಲೀಲೆಗಳನ್ನು

ವಿಶೇಷವಾಗಿ ವರ್ಣ ಮಾಡಲಾಗಿದೆ. ಇಂದಿಗೂ ತಮಿಳುನಾಡಿನಲ್ಲಿರುವ 'ವೀರಶೈವ'ರಿಗೆ, ವೀರಭದ್ರದೇವರಲ್ಲಿ ಅನನ್ಯವಾದ ಭಕ್ತಿ ವಿಶೇಷವಾಗಿರುವುದನ್ನು ಕಾಣಬಹುದಾಗಿದೆ. ಹಾಗೂ ಈ ನಾಡಿನಲ್ಲಿರುವ ವೀರಶೈವರ ಆಚಾರವಿಚಾರಗಳ ಬಗ್ಗೆ ಈ ಕೃತಿಯು ಬೆಳಕು ಚೆಲ್ಲಿದೆ. ಕ್ರಿ.ಶ. ೧೨೧೫ರಲ್ಲಿ 'ಭಕ್ತ ಮೈಕಂಡದೇವ' ಎಂಬುವರು ರಚಿಸಿರುವ 'ಶಿವಜ್ಞಾನಬೋಧಂ' ಎಂಬ ಕೃತಿಯಲ್ಲಿ ಶಿವಭಕ್ತಿಯ ವಿಶೇಷತೆಯನ್ನು ಸವಿವರವಾಗಿ ವಿವರಿಸಿರುತ್ತಾರೆ. ಈತನ ಮತ್ತೊಂದು ಕೃತಿ 'ಸಂಕಪ ನಿರಾಕರಣಂ' ಎಂಬ ಸಿದ್ಧಾಂತ ಗ್ರಂಥ. ಇದರಲ್ಲಿ ಮಾಯೆಯ ಪ್ರಭಾವಕ್ಕೆ ಒಳಗಾದವರು ಅನುಭವಿಸುವ ಕಂದರಗಳನ್ನು ವಿಮರ್ಶಿಸಿದ್ದಾರೆ. ಹೀಗಾಗಿ ೧೪ನೆಯ ಶತಮಾನದಲ್ಲಿ ವೀರಶೈವ ಧರ್ಮ ತಮಿಳುನಾಡಿನಲ್ಲಿ ಸಾಕಷ್ಟು ಪ್ರಚಾರದಲ್ಲಿತ್ತೆಂದು ತಿಳಿಯಬಹುದಾಗಿದೆ.

ತಮಿಳುನಾಡಿನಲ್ಲಿ ಪ್ರಪ್ರಥಮವಾಗಿ 'ವೀರಶೈವ' ಎಂಬ ಪದದ ಬಳಕೆಯನ್ನು 'ತಿರುವಾವೂಡುದುರೈ' ಎಂಬ ಮಠದ ಇತಿಹಾಸದಲ್ಲಿ ಹೇಳಲಾಗಿದೆ. ಇದರಲ್ಲಿ 'ಲಿಂಗಭಕ್ತನೆಂಬ' ವೀರಶೈವನ ಹೆಸರಿನ ಪ್ರಸ್ತಾಪವಿದೆ. ಇದರಿಂದ ೧೪ನೇ ಶತಮಾನಕ್ಕೂ ಮುಂಚೆ, ವೀರಶೈವ ಮತ ಬೆಳೆದು ಬಂದಿದೆ ಎಂದು ತಿಳಿಯುತ್ತದೆ. ಈ ಮಠವನ್ನು 'ನಮಃಶಿವಾಯದೇಶಿಕರು' ಎಂಬುವರು ಕ್ರಿ.ಶ. ಸರಿಸುಮಾರು ೩೫೦ರಲ್ಲಿ ಸ್ಥಾಪಿಸಿದ್ದು.

೧೭ನೇ ಶತಮಾನದಲ್ಲಿದ್ದ 'ತುರೈಮಂಗಲ ಶಿವಪ್ರಕಾಶಸ್ವಾಮಿಗಳು', 'ಶಿವಜ್ಞಾನಪಾಲಯಸ್ವಾಮಿಗಳ ತಾಲಾಟ್ಟು' ಮತ್ತು 'ಪಿಳ್ಳೈ ತಮಿಳ್' ಎಂಬ ತಮ್ಮ ಕೃತಿಗಳಲ್ಲಿ ವೀರಶೈವ ಧರ್ಮದ ಅಧ್ಯಯನಕ್ಕೆ ಸಂಬಂಧಿಸಿದ ಅತಿ ಮುಖ್ಯ ವಿವರಗಳನ್ನು ನೀಡಿರುತ್ತಾರೆ. ತಮಿಳು ಭಾಷೆಯಲ್ಲಿರುವ ೯೬ ಬಗೆಯ ಕಾವ್ಯಪ್ರಾಕಾರಗಳಲ್ಲಿ 'ಪಿಳ್ಳೈತಮಿಳ್' ಕೃತಿಯೂ ಒಂದಾಗಿದೆ. ಈ ಗ್ರಂಥದಲ್ಲಿ ವೀರಶೈವ ವಿಧಿವಿಧಾನಗಳಾದ 'ಷಟ್‌ಸ್ಥಲ', 'ಪಂಚಾಚಾರ', 'ಅಷ್ಟಾವರಣ', 'ವಿಭೂತಿ', 'ಪಂಚಾಕ್ಷರ'ಗಳ ವರ್ಣನೆಗಳಿವೆ.

'ಶ್ರೀ ರತ್ನಸಭಾಪತಿ' ಎಂಬುವವರು ತಮ್ಮ 'ವೀರಶೈವಮ್' ಎಂಬ ನಿಬಂಧದಲ್ಲಿ "ಲಿಂಗ" ಎಂಬ ಪಾರಿಭಾಷಿಕ ಪದದ ವಿವರಣೆಗಿರುವ ಧಾರ್ಮಿಕ ಮತ್ತು ವೈಜ್ಞಾನಿಕ ಮಹತ್ತ್ವವನ್ನು ಹಾಗೂ ಶೈವತತ್ವದ ಆಧಾರವನ್ನು ವಿವರಿಸುತ್ತ, ವೀರಶೈವರ ಪಂಚಾಚಾರವನ್ನು - 'ಐವಗೆಯೊಟುಕ್ಕಮ್' ಎಂದೂ, ಷಟ್‌ಸ್ಥಲ ವರ್ಣನೆಯನ್ನು - 'ಆರುವಗೈಯಿಣೈಪ್ಪು' ಎಂದೂ, ಅಷ್ಟಾವರಣ ಕ್ರಿಯೆಗಳನ್ನು 'ಎಣ್‌ವಗೈಕ್ಕಾಪ್ಪು' ಎಂದೂ ಕರೆದು ಪ್ರತಿಯೊಂದಕ್ಕೂ ವಿವರಣೆ ನೀಡಿರುತ್ತಾರೆ. ಈ 'ಷಟ್‌ಸ್ಥಲಗಳ ಆಚರಣೆಗಳಿಂದ ಮೋಕ್ಷ ಹೊಂದುವವರನ್ನು 'ಚಾಡುತ್ತಲಪಿರಮ್ಮಾನ್' ಎಂಬುದಾಗಿ ಕರೆದಿರುತ್ತಾರೆ. "ಲಿಂಗ"ವನ್ನು 'ಕಂದು' ಎಂದು ಕರೆದು ಅದಕ್ಕೆ ಸೊಗಸಾದ ವಿವರಣೆ ನೀಡುತ್ತಾರೆ. ಮೊದಲು ಇದು ಕಡಿದ ಮರದ ತುಂಡಾಗಿದ್ದು, ಈ ತುಂಡಿನ ಜಾಗದಲ್ಲಿ ದೇವರನ್ನು ಪ್ರತಿಷ್ಠಾಪಿಸಿ, ದೇವರಿದ್ದಾನೆಂದೂ ತಿಳಿಯುತ್ತಿದ್ದರು. ಮತ್ತೆ ಕೆಲವರು ಈ ತುಂಡಿನ ಮೇಲೆ ಪ್ರಾಣಿಗಳನ್ನು ಬಲಿಕೊಡುವ "ಬಲಿಪೀಠವನ್ನಾಗಿ" ಪರಿವರ್ತಿಸಿದರಂತೆ. ಇದೇ ಸಂಕೇತದಲ್ಲಿ ಇಂದು ಅನೇಕ ದೇವಾಲಯಗಳ ಗರ್ಭಗುಡಿಯ ಮುಂದಿನ ಹೊರ



ಪ್ರಾಕಾರಗಳಲ್ಲಿ ಬಲಿಪೀಠಗಳನ್ನು ನಿರ್ಮಿಸಿರಲೂಬಹುದಾಗಿದೆ. ಈ ಸಂಪ್ರದಾಯವು 'ದಯವೇ ಸಕಲ ಪ್ರಾಣಿಗಳೆಲ್ಲರಲ್ಲಿ' ಎಂಬ ಶರಣತತ್ವಕ್ಕೆ ವಿರೋಧವಾದುದು. ಈ ರೀತಿ ಹೂಳಿದ ಕಂಭಕ್ಕೆ ದೇವರಂತೆ ಅಲಂಕಾರ ಮಾಡಿ ಪೂಜಿಸುತ್ತಲೂ ಇದ್ದರು. (ಈಗಲೂ ಗ್ರಾಮಾಂತರ ಪ್ರದೇಶಗಳಲ್ಲಿ ಪೂಜಿಸುವ ಶಕ್ತಿದೇವತೆಯಾಗಿರುವ ಮಾರಮ್ಮ ಗ್ರಾಮದೇವತೆ) ಹಬ್ಬದಲ್ಲಿ ಎತ್ತರದ ಆಲದ ಮರದ ಮೂರು ಕವಡಿನ ತುಂಡಿಗೆ ಪೂಜೆ ಸಲ್ಲಿಸುತ್ತ ಅದರ ಮೇಲೆ ಅಗ್ನಿಕುಂಡವನ್ನಿರಿಸಿ ನಿತ್ಯವೂ ಅದನ್ನು ಶೈವ ಪದ್ಧತಿಯಲ್ಲಿಯೇ ಪೂಜಿಸಿ-ಹಬ್ಬದ ಕೊನೆಯ ಮುಕ್ತಾಯದ ದಿನದಂದು, ಪೌರೋಹಿತರು ಭಕ್ತಿಭಾವದಿಂದ ಆ ಅಗ್ನಿಕುಂಡವನ್ನು ಹೊತ್ತು ಮೆರೆಯುವ ಪದ್ಧತಿಯೂ ಇದೆ). ಈ ರೀತಿಯಲ್ಲಿ ಬಲಿಪೀಠವಾದ ಮರವು ಸಂಪೂರ್ಣವಾಗಿ ನಾಶವಾದ ಮೇಲೆ, ಆ ಮರ ಹೂಳಿದ್ದ ಜಾಗದಲ್ಲಿ ದುಂಡಗಿನ ಕಲ್ಲನ್ನು ನೆಟ್ಟು ಪೂಜಿಸುತ್ತಾ ಅದನ್ನೆ ದೇವರೆಂದು ಪೂಜಿಸುವ ಪದ್ಧತಿಯು ಇತ್ತೆಂದು (ಈಗಲೂ ಕೆಲವು ಕಡೆಗಳಲ್ಲಿವೆ) ನಿರಾಕಾರವಾಗಿದ್ದ ಈ ಗುರುತನ್ನೆ 'ಲಿಂಗ' ಎಂದು ಭಾವಿಸಿದ್ದರೆಂದೂ, ಇದಕ್ಕೆ 'ಕಂದರಿ' (Kandari) ಎಂಬುದಾಗಿ ಕರೆಯಲಾಗಿದೆ ಎಂದು ತಮಿಳು ವ್ಯಾಕರಣ ಗ್ರಂಥವಾದ 'ತೊಲ್‌ಕ್ಕಾಪ್ಪಿಯಮ್'ನಲ್ಲಿರುವ ವಿವರಣೆಯನ್ನು ನೀಡಿರುತ್ತಾರೆ. ಆದರೆ ಈ ವಿವರಣೆಯು ಅನಾದಿಕಾಲಕ್ಕೆ ಸಲ್ಲಬೇಕಾಗಿದೆ ಎಂದೇ ನನ್ನ ಭಾವನೆ.

ಆದರೆ ಈ 'ಲಿಂಗ' ಎಂಬುದನ್ನು 'ಶೂನ್ಯ ಸಂಪಾದನೆ'ಯಲ್ಲಿ ವಿಶೇಷವಾದ ಅರ್ಥದಲ್ಲಿ ವರ್ಣಿಸಲಾಗಿದೆ. ಅಂತೆಯೇ ಶೈವಾಗಮಗಳಲ್ಲಿಯೂ "ಲೀಯತೆ ಗಮ್ಯತೆ ಯತ್ರಯೇನ ಚರಾಚರಂ, ತದೇತಲ್ಲಿಂಗಮಿತ್ಯುಕ್ತಂ ಲಿಂಗ ತತ್ವ ಪರಾಯಣ್ಯೆಃ" ಅಂದರೆ ಯಾವುದರಲ್ಲಿ ಎಲ್ಲವೂ ಲೀನವಾಗಿದೆಯೋ - ಯಾವುದರಿಂದ ಚರಾಚರವೆಲ್ಲಾ ಉದ್ಭವಿಸಿದೆಯೋ ಅದೇ 'ಲಿಂಗ' ಅದೇ ಶೂನ್ಯ ತತ್ವ. "ಶೂನ್ಯೆ ಚಿದಂಬರೆ ಸಚ್ಚಿದಾನಂದ ಲಕ್ಷಣಂ" ಎಂಬುದಾಗಿ, ಪರಶಿವ-ಪರತತ್ವ-ಅಥವಾ 'ಲಿಂಗ'ವೆಂದು ಕರೆದು, "ಲಿಂಗ ಮಧ್ಯೆ ಜಗತ್ಸರ್ವಂ" ಎಂದು ಹೇಳುವುದರಲ್ಲಿ ವೈಜ್ಞಾನಿಕವಾದ ಸತ್ಯವನ್ನೂ ಕಾಣಬಹುದು. ಪ್ರಸಿದ್ಧ ಭೌತವಿಜ್ಞಾನಿಯಾದ ಫ್ರಿ ಟ್ಜಾಫ್ ಕಾಪ್ರಾ ಎಂಬುವವರು, "ಬಯಲು", ಶೂನ್ಯ ಅಥವಾ 'ಲಿಂಗ' ಆಕಾರವನ್ನು ಅನಂತಶಕ್ತಿಯ ಆಗರದ 'ಸಂಕೇತ' ಎಂದು, ಇದರಲ್ಲಿಯೇ ಈ ವಿಶ್ವ ಹೊರಹೊಮ್ಮಿ ಮತ್ತು ಅದರಲ್ಲಿಯೇ ಲೀನವಾಗುತ್ತದೆ" ಎಂಬ ಮಾತು ಅತ್ಯಂತ ನಿದರ್ಶನಾತ್ಮಕವಾದ ಕ್ರಿಯಾ ಸಂವೇದನೆ.

Physical Vaccum as it is called in field theory is not merely a state of nothingness, but contains potentiality for all forms of particle world. These forms in turn are not independent physical entities, but merely transcent manifestations of underlying 'void'. The vaccum is truely a living void, pulsating in endless rythms creation

and destruction ಎಂಬುದಾಗಿ ನಿರೂಪಿಸಿರುವುದರಿಂದ ತಮಿಳಿನ ತೊಲ್‌ಕ್ಕಾಪ್ಪಿಯಮ್' ಕೃತಿಯಲ್ಲಿ ವರ್ಣಿಸಿರುವ ವಿವರಣೆಯನ್ನು ಮೌಢ್ಯತೆಯದೆ ಎಂದು ತಿಳಿಯಬೇಕಾಗುತ್ತದೆ. ಆಗಮಗಳಲ್ಲಿ ನೀಡಿರುವ ವಿವರಣೆಯೂ ವಿಜ್ಞಾನಿಯ ಹತ್ತಿರದ ಸತ್ಯವಾಗುತ್ತದೆ. ಅಷ್ಟಾವರಣಗಳ ನಿರೂಪಣೆಯಲ್ಲಿ 'ಲಿಂಗ'ದ ಬಗ್ಗೆ ಹೇಳಿರುವಂತೆ, 'ಅವ್ಯಕ್ತಪರಮಾತ್ಮನ ವ್ಯಕ್ತರೂಪವೇ ಲಿಂಗ' - 'ಇದೇ ಶಿವ ಚೈತನ್ಯದ ಪ್ರತೀಕ', ಈ ತತ್ವಗಳೆ ವೀರಶೈವದ ಪ್ರಾಥಮಿಕ ಸೋಪಾನಗಳು.

ತಮಿಳುನಾಡಿನ ಇಂದಿನ ಸಾಮಾಜಿಕ ಜೀವನದಲ್ಲಿ 'ಜಂಗಮ' ಹಾಗೂ 'ಶರಣ' ಎಂಬೀ ಎರಡು ತಾತ್ವಿಕ ಪದಗಳು ಸಾಮಾನ್ಯರ ಅರ್ಥದಲ್ಲಿ ಒಂದೇ ಆಗಿವೆ. ಕಾರಣ ಧಾರ್ಮಿಕ ವಿವೇಚನೆ ಇಲ್ಲದಿರುವುದು. 'ಜಂಗಮರು' ಶಿವಲೀಲೆಯನ್ನು ಜಗತ್ತಿಗೆ ತಿಳಿಸಲು ಬಂದವರು. ಇವರು ಜೀವನ್ಮುಕ್ತರು. ಇವರಿಗೆ ಸಂಸಾರವಿಲ್ಲ ಎಂಬ ನಂಬಿಕೆ. ಇದಕ್ಕೆ ಕೆಲವು ಉದಾಹರಣೆಗಳು ೬೩ ಪುರಾತನರ ಚರಿತ್ರೆಯಲ್ಲಿ ಸಿಗುತ್ತದೆ. ಆದರೆ 'ಶರಣರು' ಸಂಸಾರಿಗಳು, ಇವರೂ ಜೀವನ್ಮುಕ್ತರೇ. ಇಂದು ತಮಿಳುನಾಡಿನಲ್ಲಿ ಜೀವಿಸಿ ರುವ ವೀರಶೈವರು ಯಾವುದೇ ತಾತ್ವಿಕತೆಯ ನೆಲೆಗಟ್ಟಿಗೂ ಒಡಂಬಡಿಕೆ ಯಾಗಿರದೆ, ಕೇವಲ ಜನಗಣತಿಯ ಲೆಕ್ಕಾಚಾರದಲ್ಲಿ ಮಾತ್ರ 'ಜಂಗಮ'ರಾಗಿ ಉಳಿದುಕೊಂಡಿ ರುತ್ತಾರೆ. ಇಂದು 'ಜಂಗಮ' ಎಂಬ ಪದವು ಈ ನಾಡಿನಲ್ಲಿರುವವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಹಿಂದುಳಿದಿರುವವರು ಎಂಬುದಾಗಿ ಭಾವಿಸಲಾಗಿದೆ.

ಇಂದಿನ ವೈಜ್ಞಾನಿಕ ಯುಗದಲ್ಲಿ 'ವೀರಶೈವ ಧರ್ಮವು' ತಮಿಳುನಾಡಿನಲ್ಲಿ ಅನಾಥ ಪ್ರಜ್ಞೆಯಲ್ಲಿರಬಹುದು! ಆದರೆ! ಇದೇ ನಾಡಿನಲ್ಲಿ ೧೫ನೇ ಶತಮಾನಕ್ಕೆ ಸೇರಿದ ಹಸ್ತಪ್ರತಿಯೊಂದನ್ನು ಅನೇಕ ವೀರಶೈವ ಮಠಗಳು ಪ್ರಾಬಲ್ಯಮಾನವಾಗಿದ್ದು, ವೀರಶೈವ ಧರ್ಮದ ಕೇಂದ್ರಗಳಾಗಿದ್ದವೆಂದೂ, ಇಲ್ಲಿನ ಅನೇಕ ಮಠದ ಸ್ವಾಮಿಗಳು, ಹೆಸರಾಂತ ವಿದ್ವಾಂಸರಾಗಿ, ಧಾರ್ಮಿಕ ಪ್ರಚಾರಕರಾಗಿ ಹೆಸರು ಗಳಿಸಿದ್ದರೆಂದೂ ತಿಳಿಯಬಹುದಾಗಿದೆ. ಇದಕ್ಕೆ ಉದಾಹರಣೆ 'ಕುಂಭಕೋಣದಲ್ಲಿರುವ' ಸಾರಂಗ (ಪೆರಿಯ) ಮಠ, ಪಾಂಡಿಚೇರಿಯ 'ಮೈಲಿಮ್' ಎಂಬಲ್ಲಿರುವ 'ಬೊಮ್ಮಯಪಾಲಯಪುರ' ಮಠದ ಸ್ವಾಮಿಗಳಾಗಿದ್ದ ಶ್ರೀ ಶಿವಪ್ರಕಾಶ ಸ್ವಾಮಿಗಳು 'ಪ್ರಭುಲಿಂಗಲೀಲೆ', 'ಸಿದ್ಧಾಂತ ಶಿಖಾಮಣಿ' ಕೃತಿಗಳನ್ನು ರಚಿಸಿರುವವರು.

ತಮಿಳುನಾಡು ಶೈವ ಧರ್ಮದ ಪೋಷಣಾವಲಯವಾಗಿದ್ದರೂ 'ವೀರಶೈವಕ್ಕೆ ತೊಂದರೆಯಾಗಿರಲಿಲ್ಲ. ಕಾರಣ ಶೈವದ ಮತ್ತೊಂದು ಭಾಗವೇ 'ವೀರಶೈವ ಧರ್ಮ' ಎಂಬ ಭಾವನೆ ಇಲ್ಲಿ ವ್ಯಾಪಕವಾಗಿದ್ದುದು. 'ತಿರುಪ್ಪಾಪುಲಿಯೂರ್' ವೀರಶೈವ ಮಠದ ಸ್ವಾಮಿಗಳಾಗಿದ್ದ 'ಶ್ರೀ ಆರುಮುಗಂಸ್ವಾಮಿ' ಎಂಬುವರು ತಮ್ಮ "ನಿಷ್ಠಾನುಭೂತಿ" ಎಂಬ ಕೃತಿಯಲ್ಲಿ ಹಾಗೂ ತುರೈಮಂಗಲಂ ಶಿವಪ್ರಕಾಶ ಸ್ವಾಮಿಗಳ ಭಾವಮೈದುನನಾದ ಶ್ರೀ ಶಾಂತಲಿಂಗಸ್ವಾಮಿ ಎಂಬುವರು ತಮ್ಮ 'ಅವಿರೋಧ ಉಂದಿಯಾರ್' ಎಂಬ ಕೃತಿಗಳಲ್ಲಿ ಶೈವ ಹಾಗೂ ಅದ್ವೈತ ಸಿದ್ಧಾಂತಗಳಿಗೆ ಯಾವುದೇ ಹೊಡೆದಾಟವೂ ಇರಲಿಲ್ಲ



ಎಂಬುದಾಗಿ ಉಲ್ಲೇಖಿಸಿರುತ್ತಾರೆ. ಇವರು 'ಚೆಂಗಲ್‌ಪೇಟೆಯ' 'ತೆರುಪ್ಪೋರೂರ್' ಎಂಬಲ್ಲಿ ವೀರಶೈವ ಮಠವನ್ನು ಸ್ಥಾಪಿಸಿದವರು. ಇವರಲ್ಲದೆ 'ತಿರುವಾವುಡುಥುರೈ'ನ, ನಮಃ ಶಿವಾಯ ದೇಶಿಕರೆಂಬುವರು ತಮ್ಮ ಅಧೀನದಲ್ಲಿ ತಮಿಳುನಾಡಿನ ಅನೇಕ ಕಡೆಗಳಲ್ಲಿ 'ವೀರಶೈವ ಮಠ'ಗಳನ್ನು ಸ್ಥಾಪಿಸಿದ್ದರೆಂದು ತಿಳಿಯುವುದರಿಂದ, ಇವರ ಕಾಲದಲ್ಲಿ ಈ ನಾಡಿನಲ್ಲಿ ಅನೇಕ ಕಡೆ ವೀರಶೈವರು ಗಳಿದ್ದರೆಂದು ತಿಳಿಯುತ್ತದೆ. ಅದರಂತೆಯೇ ಆ ಕಾಲದಲ್ಲಿ ಮುಖ್ಯವಾಗಿದ್ದ ಅನೇಕ ಮಠಗಳ ಹೆಸರುಗಳು ಈ ಕೆಳಗಿನಂತಿವೆ.

(೧) ಜ್ಞಾನಕೂತ್ತಶಿವಪ್ರಕಾಶಮಡಂ, (೨) ಮೂವಲಿಂಗಮಡಂ, (೩) ಚಿದಂಬರಮಡಂ, (೪) ಕುಮಾರದೇವಮಡಂ, (೫) ನಮಃಶಿವಾಯಮಡಂ, (೬) ನನ್ನೂಜ್‌ಮಡಂ, (೭) ಅರುಣ್ಯೈಮಡಂ, (೮) ಪರಂಜ್ಯೋತಿಮಡಂ, (೯) ನಲ್ಲನಾಯಕಿಮಡಂ, (೧೦) ಚಿಟ್ಟಂಬಲಮಡಂ, (೧೧) ಪೊನ್ನಾಂಬಲಮಡಂ, (೧೨) ನಂಜುಂಡಮಡಂ, (೧೩) ಕುಳಂದೈವೇಲುಮಡಂ, (೧೪) ವೈದ್ಯಲಿಂಗಮಡಂ, (೧೫) ಕೂಮಾರದೇಶಿಕಮಡಂ, (೧೬) ಚೊಕ್ಕಲಿಂಗಮಡಂ.

ಇವುಗಳಲ್ಲದೆ ಈ ಮೇಲಿನ ಕುಮಾರದೇವರ ಮಠದ ಸ್ವಾಮಿಗಳಾಗಿದ್ದ 'ತುರೈಯೂರು ಶಿವಪ್ರಕಾಶ' ಸ್ವಾಮಿಗಳು, ತಾವೇ ತಮ್ಮ ಅಧೀನದಲ್ಲಿ ಅನೇಕ ಮಠಗಳನ್ನು ಸ್ಥಾಪಿಸಿದ್ದರೆಂಬುದಾಗಿಯು ತಿಳಿಯುವುದರಲ್ಲಿ, ಆಗಿನ ಕಾಲಕ್ಕೆ ಕುಮಾರದೇವರ ಮಠದ ಪೀಠಾಧಿಪತಿಗಳು - 'ಜಗದ್ಗುರು'ಗಳ ಸ್ಥಾನವನ್ನೂ ಗಳಿಸಿದ್ದಿರಲೂಬಹುದೆಂಬುದಾಗಿ ಊಹಿಸಬಹುದಾಗಿದೆ. ಅವರ ಶಾಖಾ ಮಠಗಳೆಂದರೆ, (೧) ಪೇರೆಯೂರ್ ಶಾಂತಲಿಂಗಸ್ವಾಮಿಮಡಂ, (೨) ರಟ್ಟೈ ಚಿದಂಬರಸ್ವಾಮಿಮಡಂ, (೩) ಪಳನಿಸ್ವಾಮಿಮಡಂ, (೪) ಕೂವಾಲತ್ತುಮಡಂ, (೫) ಪುಲಿಯೂರುಮಡಂ, (೬) ಮುಕ್ತಯ್ಯಮಡಂ, (೭) ಕುಂಭಕೋಣದ ಸಾರಂಗ (ಪೆರಿಯ) ಮಡಂ, (೮) ಪಚ್ಚೈಬಾಲಿಯರ್‌ಮಡಂ, (೯) ಬೊಮ್ಮಯ ಪಾಳೆಯಮಡಂ. ಹೀಗೆ ನಾನಾ ಕಡೆಗಳಲ್ಲಿದ್ದ ಶಾಖಾಮಠಗಳಲ್ಲಿ ಅತ್ಯಂತ ಶ್ರೀಮಂತ ಮಠವಾಗಿ, ನೂರಾರು ಎಕ್ರೆ ಜಮೀನು ಹಾಗೂ ಆಸ್ತಿಯನ್ನು ಹೊಂದಿದ್ದ ಮಠ ಎಂದು ಕುಂಭಕೋಣಂನ ಸಾರಂಗ ಮಠವು ಅಲ್ಲಿನ ವೀರಶೈವ ಇತಿಹಾಸದಲ್ಲಿ ದಾಖಲಾಗಿದೆ. ಈ ಮಠಕ್ಕೆ ತಂಜಾವೂರಿನ ಚೋಳರಾಜರು ಅನನ್ಯ ಭಕ್ತಿಭಾವದಿಂದ ನಡೆದುಕೊಳ್ಳುತ್ತಿದ್ದರೆಂದೂ ತಿಳಿಯುತ್ತದೆ. 'ಪಾಂಡಿಚೇರಿ'ಯ ಹತ್ತಿರದ 'ಮೈಲಿಮ್' ಎಂಬ ಮಠದಲ್ಲಿದ್ದ 'ಶಿವಪ್ರಭುಸ್ವಾಮಿ'ಗಳು ಆಗಿನ ಕಾಲಕ್ಕೆ ಪ್ರಸಿದ್ಧರಾದ ವಿದ್ವಾಂಸರಾಗಿದ್ದವರು.

ತಮಿಳುನಾಡಿನಲ್ಲಿರುವ ವೀರಶೈವ ವಿದ್ವಾಂಸರಲ್ಲಿ ಹೆಸರಾದವರು 'ಶ್ರೀ ರತ್ನಸಭಾಪತಿ' ಎಂಬುವರು. ಇವರು 'ಸಿದ್ಧಾಂತ ಶಿಖಾಮಣಿ' ಗ್ರಂಥ'ದಲ್ಲಿ ವರ್ಣಿಸಿರುವಂತೆ, ತಮಿಳು ಭಾಷೆಯಲ್ಲಿ ಷಟ್‌ಸ್ಥಲ, ಅಷ್ಟಾವರಣಗಳ ಬಗೆಗೆ ತಮ್ಮ 'ವೀರಶೈವ' ನಿಬಂಧದಲ್ಲಿ ವಿವರವಾಗಿ ವ್ಯಾಖ್ಯಾನಿಸಿದ್ದ 'ಭಕ್ತ-ಪಕ್‌ತನ್', 'ಮಹೇಶ್ವರ-

ಮಹೇಶನ್', 'ಪ್ರಸಾದಿ-ಪಿರಸಾದಿ', 'ಪ್ರಾಣಲಿಂಗಿ-ಪಿರಾಣಲಿಂಗಿ', 'ಶರಣ-ಚರಣನ್', 'ಐಕ್ಯ-ಐಕ್ಕಿಯಮ್' ಎಂಬ ಆರು ಸ್ಥಲಗಳಿಂದ ತನ್ನ ಆಚಾರ-ವಿಚಾರಗಳನ್ನು ನಿರ್ಮಲೀಕರಿಸಿ ಆಚರಿಸಿದಾಗ ಮೋಕ್ಷ ಪ್ರಾಪ್ತವಾಗುತ್ತದೆ ಎಂದೂ, ಇವನನ್ನೇ 'ಚಾಡುತಲ ಪಿರಮ್ಮಾನ್' ಎಂಬುದಾಗಿ ಕರೆಯಬಹುದೆನ್ನುತ್ತಾರೆ. ಈ ಒಂದೊಂದು ಸ್ಥಲಗಳಲ್ಲಿಯೂ ಅನೇಕ ಪ್ರಭೇದಗಳಿವೆ. ಇವೆಲ್ಲವೂ ನಮ್ಮೀ ಕರ್ನಾಟಕದ ವೀರಶೈವ ಸಿದ್ಧಾಂತದಲ್ಲಿ ವರ್ಣಿಸಿದಂತೆಯೇ ನಿಯಮಬದ್ಧವಾಗಿವೆ. ನಮ್ಮಲ್ಲಿನ ಹಿರಿಯ ಆಚಾರ-ವಿಚಾರವಂತರು ಅನುಸರಿಸುವ ಪದ್ಧತಿಯಂತೆ, ತಮಿಳುನಾಡಿನಲ್ಲಿಯೂ ಆಚಾರವಂತರಿದ್ದು 'ಲಿಂಗ' - 'ಜಂಗಮ' - 'ಪ್ರಸಾದ'ಗಳ ಬಗ್ಗೆ ಅನನ್ಯ ಭಕ್ತಿಭಾವವನ್ನು ಹೊಂದಿರುತ್ತಾರೆ. ಇಂತಹವರನ್ನು ಇಲ್ಲಿ 'ಸ್ವಾಮಿಯಾರ್, ಅಯ್ಯರ್' (ಅಯ್ಯನವರು) ಎಂಬುದಾಗಿ ಸಂಬೋಧಿಸುತ್ತಾರೆ. (ಬೇರೆ ಸಮಾಜದವರು) ಇಂತಹ ಸ್ವಾಮಿಗಳೇ ಅಲ್ಲಿನ ವೀರಶೈವ ಸಮಾಜಕ್ಕೆ 'ಶುಭಾಶುಭ' ಕಾರ್ಯಗಳನ್ನು ನೆರವೇರಿಸಲು ಸಹಕರಿಸುವವರು. ಆದರೆ ಇಂತಹವರನ್ನು ಆಂಧ್ರಪ್ರದೇಶದಲ್ಲಿ ಆರಾಧ್ಯ ಬ್ರಾಹ್ಮಣರೆಂಬುದಾಗಿಯೂ ಕರೆಯುವುದನ್ನು ಕೇಳುತ್ತೇವೆ. ಕರ್ನಾಟಕದಲ್ಲಿ ಇಂತಹ ಕಾರ್ಯಗಳಿಗೆಲ್ಲಾ ಬರುವವರು ಆಯಾ ಮಠಗಳ ವ್ಯಾಪ್ತಿಯಲ್ಲಿನ ಗುರುಬಳಗವೇ. ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿರುವ ವೀರಶೈವ ಧರ್ಮೀಯರು ಪುಣ್ಯವಂತರು. ಆದರೆ ಈ ಪುಣ್ಯದ ಅವಕಾಶಗಳನ್ನು ಇಲ್ಲಿನ ಸಮುದಾಯ ಅರ್ಥೈಸಿಕೊಳ್ಳುವುದರಲ್ಲಿ ಪ್ರಶ್ನೆಯಿದೆ? ವೀರಶೈವ ಧರ್ಮವನ್ನು ಅನೇಕ ವೀರಶೈವೇತರರೂ ದರ್ಶಿಸಲು ಹೊರಟಿರುತ್ತಾರೆ. ಆದರೆ ಇವರಾರೂ ಇದರ ಆಂತರ್ಯ ಸತ್ಯವನ್ನು ನಿಷ್ಪಕ್ಷಪಾತವಾಗಿ ಸಂಶೋಧಿಸಲು ಪ್ರಯತ್ನಿಸಲಿಲ್ಲ! ಇದಕ್ಕೆ ಹಲವಾರು ಕಾರಣಗಳಿವೆ. (೧) ರಾಜಕೀಯ ಪ್ರೇರಣೆ, (೨) ಧಾರ್ಮಿಕ, (೩) ಸಾಮಾಜಿಕ, (೪) ಭೌತಿಕ ಪ್ರೇರಣೆ ಇತ್ಯಾದಿ. ಕರ್ನಾಟಕದಲ್ಲಿ ವೀರಶೈವಕ್ಕೆ ವಿರೋಧ - ಎಲ್ಲಾ ಧರ್ಮಗಳದೂ ಇದೆ. ಪ್ರಬಲವಾಗಿ ವೈಷ್ಣವ - ಜೈನರದು. ಇದೇ ವಾತಾವರಣ ತಮಿಳುನಾಡಿನಲ್ಲಿ ಹಿಂದೆಯೂ ಇತ್ತು ಈಗಲೂ ಇದೆ, ಆದರೆ ಶೈವಕ್ಕೆ ಹಿಂದಿನವರು ನೀಡಿದ ಪೋಷಣೆಯಂತೆ ವೀರಶೈವವನ್ನು ಆದರಿಸಿದರು. ಆಲಂಗಿಸಿದ್ದರು.

ಭಾರತ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮೊದಲು ನಮ್ಮನ್ನಾಳಿದ ಬ್ರಿಟಿಷರು ಈ ಪ್ರದೇಶಗಳಲ್ಲಿ ಕ್ರೈಸ್ತ ಧರ್ಮಕ್ಕೆ ನೀಡಿದಂತೆ ಮತ್ತಾವ ಧರ್ಮಕ್ಕೂ ಪ್ರೋತ್ಸಾಹ ನೀಡದಾದರು. ಇದರ ಜೊತೆಗೆ ಈ ವೀರಶೈವ ಧರ್ಮದ ಪ್ರಚಾರಕರೂ (ತಮಿಳುನಾಡು-ಆಂಧ್ರ-ಮಹಾರಾಷ್ಟ್ರ) ಬಿಟ್ಟು ಹೊರಗಿನ ರಾಜ್ಯಗಳಲ್ಲಿ ಪ್ರಚಾರ ಮಾಡಲು ಮನಸ್ಸು ಮಾಡಲಿಲ್ಲ. (ಪ್ರಸ್ತುತದಲ್ಲಿ ಈ ಕೆಲಸವು ಕರ್ನಾಟಕದಲ್ಲಿಯೂ ನಡೆಯಬೇಕಿದೆ). ೧೨ನೇ ಶತಮಾನದಾಚೆ ಕಾಶ್ಮೀರ-ಸಿಂಹಳದಲ್ಲೂ ವೀರಶೈವ ಧರ್ಮ ಪ್ರಚಾರದಲ್ಲಿತ್ತೆಂದು ತಿಳಿದಿದ್ದರೂ ಅದರ ವರ್ಚಸ್ಸು ಅಲ್ಲಿನ ರಾಜಕೀಯ ವಿಪ್ಲವಗಳಿಂದಾಗಿ ವೃದ್ಧಿಗೊಳ್ಳಲಿಲ್ಲ! ಕರ್ನಾಟಕದಲ್ಲಿನ ವೀರಶೈವರುಗಳೂ ತಮ್ಮ ಧರ್ಮದ ಹಿರಿಮೆಗಳಲ್ಲಿಯೇ ಮಗ್ನರಾದರೆ ವಿನಹ ಅದರ ಪ್ರಭಾವವು ಅನ್ಯರಾಜ್ಯ-



ದೇಶಗಳನ್ನು ದಾಟಿ ಬೆಳೆಯಲು ಯತ್ನಿಸಲಿಲ್ಲ. ಕೆಲವು ಕಡೆ ಈ ಧರ್ಮವನ್ನು ಆಶ್ರಯಿಸಿ ಬಂದವರನ್ನೂ ಈ ಧರ್ಮದಲ್ಲಿದ್ದ ಹಿಂದಿನವರು ಆದರಿಸಿ ಕೂಡಿಕೊಳ್ಳಲು ಇಚ್ಛಿಸದೆ ಹೊರಗಿನಿಂದ ಬಂದವರೆಂದು ಅಸ್ಪೃಶ್ಯತೆಯಿಂದಲೇ ಕಾಣುವಂತಾದುದು. ಈ ಎಲ್ಲಾ ಕಾರಣಗಳಿಂದ ಈ ಧರ್ಮವು ಕರ್ನಾಟಕದ ಪ್ರಾಂತೀಯ ಧರ್ಮವಾಗಿಯೇ ಉಳಿಯಿತೇ ವಿನಹ ಅಂತರರಾಷ್ಟ್ರೀಯತೆಯ ವ್ಯಾಪ್ತಿಗೆ ಬರಲಿಲ್ಲ! ಹಾಗೂ ಈ ಸಮುದಾಯದ ಶರಣರಿಂದ ರಚಿತವಾದ ವಚನ ಸಾಹಿತ್ಯವು ರಾಶಿಯಷ್ಟಿದ್ದರೂ, ಕಲ್ಯಾಣದ ಕ್ರಾಂತಿಯ ನಂತರ ಸುಲಭವಾಗಿ ದೊರೆತಿರಲಿಲ್ಲಾ! ದೊರೆತರೂ ಇದರ ವೈಶಿಷ್ಟ್ಯತೆಯನ್ನು ಕೆಲವು ಪಂಥದವರು ದ್ವೇಷದಿಂದಲೇ ಮೌಲೀಕರಿಸುವಂತಹ ರೀತಿಯಿತ್ತು. ಆದರೆ ಫ.ಗು. ಹಳಕಟ್ಟಿಯಂತಹ ಮಹನೀಯರ 'ಕಾಯಕ'ದಿಂದ ಈ ಸಾಹಿತ್ಯದ ಹಿರಿಮೆಯು ಹೊಸ ಜಗತ್ತಿಗೆ ಗೋಚರವಾಗಿದ್ದು. ಅದರಿಂದ ವೀರಶೈವ ಧರ್ಮದ ಮಹತ್ತು ಜಗತ್ತಿಗೆ ತಿಳಿದದ್ದು. ಆದರೆ ಇದೇ ಧರ್ಮವು ಅಂದಿನ ಹಾಗೂ ಇಂದಿನ ರಾಜಕೀಯ ವೈಪರಿತ್ಯದಿಂದಾಗಿ ಈ ಧರ್ಮ ತನ್ನ ತಾಯಿ ನೆಲದಲ್ಲಿಯೇ ಅನಾಥಪ್ರಜ್ಞೆಗೆ ದೂಡಲ್ಪಟ್ಟು "ಹರಿಯದ ಕೆರೆಯ ನೀರಾಗಿದೆ". ಆದರೆ ಇಲ್ಲಿನವರಿಗೆ ಇರುವ ಅವಕಾಶಗಳಂತೆ, ಹೊರ ನಾಡಿನಲ್ಲಿರುವ ವೀರಶೈವರಿಗೆ, ಅಲ್ಲಿನ ವೀರಶೈವ ಮಠ ನಡೆಸಬಹುದಾದ ಶಿವಾನುಭವ ಗೋಷ್ಠಿಗಳು, ಶರಣತತ್ವ ಪ್ರಚಾರ, ಸ್ವಧರ್ಮೀಯರ ಸಭೆ ಸಮಾರಂಭಗಳು, ವಿಪುಲತರವಾದ ಸಾಹಿತ್ಯವಸ್ತುಗಳ - ಪೂಜಾಕೈಂಕರ್ಯಗಳೂ ಯಾವುವೂ ದೊರೆಯುವ ಅವಕಾಶಗಳಿಲ್ಲ. ಈ ಕಾರಣಗಳಿಂದಾಗಿ ತಮಿಳುನಾಡಿನಲ್ಲಿರುವ ವೀರಶೈವರು ಸಾಮಾನ್ಯಶೈವರಂತಾಗಿ ಇಂದು ಬದುಕುತ್ತಿದ್ದಾರೆ. ಆದುದರಿಂದ ಇಂತಹ ಅನಾಥ ಸಮುದಾಯ ಮಿತ್ರರನ್ನು ನಮ್ಮ ವಿಶಾಲ ಸಂಸಾರಕ್ಕೆ ಸೇರಿಸಿಕೊಳ್ಳಲು ಇಲ್ಲಿನ ಮಠಗಳು-ಧರ್ಮಸಂಸ್ಥೆಗಳೂ, ವಿದ್ವಾಂಸರೂ-ಸಂಘ-ಸಹಕಾರಗಳೂ-ಸಾಹಿತ್ಯಗಳೂ ಮುಂದೆ ಬಂದು ಆದರಿಸಿ ಸಹಕರಿಸುವ ಕರುಣೆ ತೋರಿದರೆ ಮಾತ್ರ ನಮ್ಮ ಧರ್ಮದ ನೆಲೆಯು ಗಟ್ಟಿಯಾದೀತು.

೧೨ನೇ ಶತಮಾನದ ಕಲ್ಯಾಣದ ಕ್ರಾಂತಿ, ೧೭-೧೮ನೇ ಶತಮಾನದ ಮಧ್ಯೆ ಮೈಸೂರು ಅರಸರಾದ ಚಿಕ್ಕದೇವರಾಯನ ಆಡಳಿತದ ರೈತರ ದಂಗೆ ಎಂಬುದನ್ನು ತುಳಿಯಲು ಪರೋಕ್ಷವಾಗಿ ಅಂದಿನ ಆಡಳಿತ-ನಂಜನಗೂಡಿನಲ್ಲಿ ೭೦೦ ವೀರಶೈವ ಮಠ - ಹಾಗೂ ೪೦೦ ಜಂಗಮರ ಹತ್ಯೆಗಳ ಕಾರಣವಾಗಿ ಈ ಧರ್ಮದ ಅವನತಿಗೆ ಆರಂಭವಾದದ್ದು, ಆನಂತರದ ಮೈಸೂರಿನ ಹೈದರಾಲಿ ಹಾಗೂ ಟಿಪ್ಪುಸುಲ್ತಾನರುಗಳು ನಡೆಸಲು ಯತ್ನಿಸಿದ ಮತಾಂತರಕ್ಕೆ ಹೆದರಿದ ಈ ನಾಡಿನ - ಗಡಿಭಾಗದ ವೀರಶೈವರು - ತಮಿಳುನಾಡಿನ ಗಡಿಭಾಗದ ಒಳಭಾಗಗಳಲ್ಲಿದ್ದು ಆಶ್ರಯ ಪಡೆಯುತ್ತಾರೆ. ಊಟಿ, ಕೊಯಮತ್ತೂರು, ಸೇಲಂ, ಗೋಪಿಶೆಟ್ಟಿಪಾಳಯಂ, ಈರೋಡು ಜಿಲ್ಲೆಯ ಪಳೆಯೂರು-ಕೊಂಡಯ್ಯನಪಾಳೆಯ ಇತ್ಯಾದಿ ಕಡೆ. ಇವೆಲ್ಲರೂ ಕೆಲವರು ನಂಜನಗೂಡು ತಾಲ್ಲೂಕು ತಗಡೂರು ಗ್ರಾಮಕ್ಕೆ ಸೇರಿದವರಾಗಿದ್ದಾರೆ. ಸ್ವಾತಂತ್ರ್ಯ

ನಂತರ ಈ ದೇಶದವರಿಗೆ ಧಾರ್ಮಿಕಶಕ್ತಿಯ ಅವಲೋಕನಕ್ಕೆ ಅವಕಾಶಗಳು ದೊರೆತವು. ತಾಯಿನಾಡಿನಿಂದ ವಲಸೆ ಹೋದವರು ಮತ್ತೆ ಹಿಂದಿರುಗಿ ಬಂದರು. ಬರಲಾಗದವರು ಅಲ್ಲೆ ಹಿಂದಿನಿಂದಲೂ ಇದ್ದ ವೀರಶೈವರು. ತಾವಿದ್ದಲ್ಲೇ ತಮ್ಮ ಧರ್ಮಾಚರಣೆಗೆ ತೊಡಗಿದರು. ಆದರೆ ಅದರಲ್ಲಿಯೂ ಕರ್ನಾಟಕದ ಸಂಪರ್ಕವನ್ನು ತಮ್ಮಲ್ಲಿನ ಶುಭ ಕಾರ್ಯಗಳಿಗಾಗಿ ಹಂಚಿಕೊಂಡು ಬಂದು ಹೋಗುವವರುಗಳೂ ಇದ್ದಾರೆ.

ಹೀಗೆ ವೀರಶೈವಧರ್ಮೀಯರು ಕೊಯಮತ್ತೂರು ಜಿಲ್ಲೆಯ ಸೂಲೂರು, ಪೊಳ್ಳಾಚಿ, ಆನೆಮಲೆ, ಅರ್ಧನಾರೀಪಾಳಯ, ವಿ.ಕೆ. ಪೂದೂರು, ಕಾರಮಡೈ, ಮೆಟ್ಟು ಪಾಳಯಂ ನೆಲ್ಲಿತುರೈ, ಅವಿನಾಸಿಗಳಲ್ಲಿಯೂ, ತಿರುಪ್ಪೂರು ಜಿಲ್ಲೆಯ ತಿರುಪ್ಪೂರು ಸಿಟಿ, ಉಡುಮಲೈಪೇಟೆಯಲ್ಲಿಯೂ, ನೀಲಗಿರಿ ಜಿಲ್ಲೆಯ ಕೊತಗಿರಿ, ಕಿಲ್‌ಕೊತ್ತಗಿರಿ, ಕಾಟೇರಿ, ಊಟಿ, ಕುನ್ನೂರುಗಳಲ್ಲಿಯೂ, ಈರೋಡು ಜಿಲ್ಲೆಯ ಈರೋಡು ಸಿಟಿ, ಗೋಪಿ, ಅಯ್ಯಪಾಳಯಂ, ಸದುಮುಗೈ, ಕೊಂಡೆಯಂಪಾಳೆಯಂ (ಪಳೆಯೂರು) ಸತ್ಯಮಂಗಲಂ, ತಾಳವಾಡಿ, ಪುಂಚೈ ಪುಳಿಯಂಬಟ್ಟಿ, ಭವಾನಿಗಳಲ್ಲಿಯೂ, ನಾಮಕಲ್ಲು ಜಿಲ್ಲೆಯ ಕೊಮರಪಾಳಯಂ, ಪರಮತಿವೇಲೂರುಗಳಲ್ಲಿಯೂ, ಸೇಲಂ ಜಿಲ್ಲೆಯ ಕಾತೇರಿ, ತೇವೂರು, ಸೇಲಂ ಸಿಟಿ, ಆತ್ತೂರು, ಮೇಟೂರು, ವಾಳಪಾಡಿ, ಬೇಲೂರು, ಸದಾಶಿಪುರಂ, ವಿ. ಪುದೂರ್‌ಗಳಲ್ಲಿಯೂ, ಧರ್ಮಪುರಿ ಜಿಲ್ಲೆಯ ಧರ್ಮಪುರಿ ಪಟ್ಟಣ, ತೊಪ್ಪೂರು ಪೆನ್ನಾಗರಂ, ಪಳೆಕ್ಕೋಟೆ, ಜಕ್ಕಸಮುದ್ರಂ, ಮಾರಂಡಳ್ಳಿ, ಕಂಬನಲ್ಲೂರು, ಮಲ್ಲುಪಟ್ಟಿಗಳಲ್ಲಿಯೂ, ಕೃಷ್ಣಗಿರಿ ಜಿಲ್ಲೆ ಕೃಷ್ಣಗಿರಿಟಾನ್, ಬರೂರು, ಅರಸಂಬಟ್ಟಿ, ಪೋಚಂಪಳ್ಳಿ ಜಗದೇವಿ, ತೋಹರಪಳ್ಳಿ, ಊತಂಗರೈ, ವೆಪ್ಪನಪಳ್ಳಿ, ಕಾವೇರಿಪಟ್ಟಣ, ಹೊಸೂರುಗಳಲ್ಲಿಯೂ, ಕರೂರು ಜಿಲ್ಲೆಯ - ಪುಲಿಯೂರು, ಪಲ್ಲಪಟ್ಟಿ, ತಿರುಚ್ಚಿ ಜಿಲ್ಲೆಯ - ಟಾನ್‌ತುರೈಯೂರು, ಮುಸುರಿ, ಊಯೆಕೊಂಡನ್, ಮಾನಸನೆಲ್ಲೂರು ಗಳಲ್ಲಿಯೂ, ದಿಂಡಿಗಲ್ ಜಿಲ್ಲೆಯ ದಿಂಡಿಗಲ್, ಪಳನಿ, ವೆಲೂರು ಜಿಲ್ಲೆಯ ಕಂತಿಲಿ, ಮಧುರೈ ಜಿಲ್ಲೆಯ ಮಧುರೆ ನಗರ, ಕೂಡಲೂರು ಜಿಲ್ಲೆಯ ಪನರುತಿ, ವಿರುದಾಚಲಂ, ಕುಂಭಕೋಣಂ ಪುದುಚೇರಿಗಳಲ್ಲಿಯೂ ವಾಸವಾಗಿರುತ್ತಾರೆ. ಇದರ ಜತೆಗೆ ತಮಿಳುನಾಡಿನ ರಾಜಧಾನಿಯಾದ ಚೆನ್ನೈ ಮಹಾನಗರದಲ್ಲಿಯೂ ಇದ್ದಾರೆ. ಇವರಲ್ಲಿ ಬೇಸಾಯ-ವ್ಯಾಪಾರ-ಉದ್ಯೋಗ ಪೌರೋಹಿತ್ಯ, ಕಸುಬುಗಳಲ್ಲಿಯೂ ತೊಡಗಿರುತ್ತಾರೆ.

ಆಧುನಿಕ ವಿದ್ಯಾಭ್ಯಾಸದ ಸೆಳೆತಕ್ಕೆ ತಕ್ಕಂತೆ, ಅಲ್ಲಿರುವ ಕೆಲವು ವೀರಶೈವ ಸಂಘಸಂಸ್ಥೆಗಳು, ಒಂದೆರಡು ಕಡೆ ವಿದ್ಯಾಸಂಸ್ಥೆಗಳನ್ನೂ, ವಿದ್ಯಾರ್ಥಿನಿಲಯಗಳನ್ನೂ ತೆರೆದಿರುತ್ತಾರೆ. ಪಾಂಡಿಚೇರಿಯ ಹತ್ತಿರದ 'ಮೈಲಮ್' (ಬೊಮ್ಮೆಯ ಪಾಲಿಯಪುರ ಮಠದವರು - ತಮಿಳು ವಿದ್ವಾಂಸರ ಕಾಲೇಜನ್ನು ತೆರೆದಿರುತ್ತಾರೆ, ಇದಕ್ಕೆ ಸರ್ಕಾರದ ಮಾನ್ಯತೆ ಲಭಿಸಿದೆ. ಹಾಗೆಯೇ ಕೊಯಮತ್ತೂರಿನಲ್ಲಿ ಸ್ಥಾಪಿಸಿರುವ "ವೀರಶೈವ ಲಿಂಗಾಯತ್ ಎಜುಕೇಷನಲ್ ವೆಲ್‌ಫೇರ್ ಅಸೋಷಿಯೇಷ-ಕೊಯಮತ್ತೂರು



ಶ್ರೀ ಸಿದ್ಧಲಿಂಗಯೋಗೀಶ್ವರಸ್ವಾಮಿ ಮಠ, ೧೫೫, ಶುಕ್ರವಾರಪೇಟೆ - ೬೪೧೦೦೧ ಇಲ್ಲಿ ಹದಿನೆಂಟು ವರ್ಷಗಳಿಂದ ತಮಿಳುನಾಡಿನ ವೀರಶೈವ ಧರ್ಮದ ಪ್ರಚಾರ ಕೇಂದ್ರದಂತೆ ಕೆಲಸ ಮಾಡುತ್ತಿದೆ. ಈ ಸಂಸ್ಥೆಯು ಆರ್ಥಿಕವಾಗಿ ಹಿಂದಿರುವ ಬಡ ವೀರಶೈವ ವಿದ್ಯಾರ್ಥಿಗಳಾಗಿ ಉಚಿತ ವಿದ್ಯಾರ್ಥಿನಿಲಯವನ್ನೂ - ವಿದ್ಯಾರ್ಥಿವೇತನ ವನ್ನೂ ನೀಡುತ್ತಾ, ಅಂತೆಯೇ ಪ್ರತಿಭಾವಂತ ಮಕ್ಕಳಿಗಾಗಿ ಬಹುಮಾನಗಳನ್ನೂ ನೀಡುತ್ತಾ ಬರುತ್ತಿದೆ. ಈ ಸಂಸ್ಥೆಯು ತನ್ನ ಎಲ್ಲಾ ಶುಭಸಮಾರಂಭ - ಬಸವ ಜಯಂತಿ ಕಾರ್ಯಕ್ರಮಗಳಿಗೆ, ಪೂಜ್ಯ ಶ್ರೀ ಶಿವಕುಮಾರ ಸ್ವಾಮೀಜಿ ಸಿದ್ಧಗಂಗಾಮಠ ತುಮಕೂರು, ಶ್ರೀ ಸುತ್ತೂರು ಜಗದ್ಗುರುಗಳು, ಚಿತ್ರದುರ್ಗದ ಶ್ರೀಗಳಾದಿಯಾಗಿ - ಸಮಾಜದ ಎಲ್ಲಾ ಹಿರಿಯ-ಕಿರಿಯ ಮಠಾಧಿಪತಿಗಳೊಂದಿಗೆ, ಹಾಗೂ ಕರ್ನಾಟಕದ ಅನೇಕ ವಿದ್ವಾಂಸರೊಂದಿಗೆ ಸಂದರ್ಶನ ಇತ್ಯಾದಿಗಳನ್ನು ಆಗಿಂದಾಗ್ಗೆ ಹಮ್ಮಿಕೊಂಡು, ಅಲ್ಲಿನ ವೀರಶೈವಧರ್ಮೀಯರಿಗೆ ದಾರಿ ತೋರುತ್ತಿದೆ.

ಇದರೊಂದಿಗೆ ಕರ್ನಾಟಕದ ಮಠಗಳಲ್ಲಿ ಈ ನಾಡಿನ ತಾಳವಾಡಿ ಪಿರ್ಕಾ, ಸತ್ತಿ ತಾ. ಮೆಲ್ಲನಗುಳಿ ಎಂಬ ಊರಿನವರಾದ ಶ್ರೀ ಸಿದ್ಧಮಲ್ಲಸ್ವಾಮಿಗಳು, ಕರ್ನಾಟಕದ ಗುಂಡ್ಲುಪೇಟೆ ತಾಲ್ಲೂಕಿನ ಸೋವಳ್ಳಿಯ ವೀರಸಿಂಹಾಸನ ಶಿಲಾಮಠದ ಸ್ವಾಮಿಗಳಾಗಿಯೂ, ಅಧಿಕಾರದಲ್ಲಿದ್ದಾರೆ. ಸೇಲಂ ಜಿಲ್ಲೆಯ ಸದಾಶಿವಪುರದ ಶ್ರೀ ಅಂಕಪ್ಪದೇವರು ಎಂಬುವವರೂ ಇದೇ ಮಠದಲ್ಲಿ ಕಂತೆಭಿಕ್ಷ-ಕೋರಣ್ಯ ಭಿಕ್ಷೆ-ಕಾಯಕ ಮಾಡುತ್ತಿದ್ದುದು ಉಂಟು. ಅಂತೆಯೇ ಕೊಯಮತ್ತೂರು-ಉದಕಮಂಡಲಗಳ ಮಠದ ಸ್ವಾಮಿಗಳಾಗಿರುವವರು ಕರ್ನಾಟಕದ ಪ್ರಸಿದ್ಧ ಮಠವಾದ ಶ್ರೀ ಸುತ್ತೂರು ಮಠದ ವತಿಯಿಂದಲೇ ಬಂದು ಸೇವೆ ಸಲ್ಲಿಸುತ್ತಿರುವವರು.

ಹೀಗೆ ಕರ್ನಾಟಕದ ವೀರಶೈವರು ತಮಿಳುನಾಡಿನ ಸ್ವಧರ್ಮೀಯರೊಂದಿಗೆ ಅನುಗಾಲವೂ ಸಹಕರಿಸುತ್ತಲೇ ಅಲ್ಲಿನವರ ಏಳ್ಗೆಗಾಗಿ ಶ್ರಮಿಸಿರುವುದು ಬಲ್ಲ ವಿಚಾರವಾಗಿದೆ. ಇಂದಿನ ನವೀನ ಯುಗದಲ್ಲಿನ ಬದಲಾವಣೆಗೆ ಹೊಂದಿಕೊಂಡು ಅದರಂತೆ ಸದ್ಧರ್ಮದಲ್ಲಿ ಬಾಳಿ ಬದುಕುವುದಕ್ಕೆ ತಮಿಳುನಾಡಿನ ವೀರಶೈವರಿಗೆ, ಕರ್ನಾಟಕದವರಾದ ನಾವು - ಇವ ನಮ್ಮವ - ಇವ ನಮ್ಮವನೆಂದು ಬರಮಾಡಿಕೊಳ್ಳುವ ಸಹೃದಯತೆಯನ್ನು ತೋರಿದರೆ ಸಾಕು.

## ಗ್ರಂಥಋಣ


೧) ವೀರಶೈವ ಸಮನ್ವಯ, ಡಾ. ಪಿ.ವಿ. ಕುಲಕರ್ಣಿ, ಏಪ್ರಿಲ್ ೧೯೮೭ರ ಸಂಚಿಕೆ - ಶ್ರೀ ಮಹಂತ ಮಠ, ಚಿಕ್ಕಪೇಟೆ, ಬೆಂಗಳೂರು ಪ್ರಕಾಶನ

೨) ವೀರಶೈವ ವಿಚಾರಧಾರೆ, ಹೆಚ್. ಗಂಗಾಧರನ್, ಪೂರ್ಣಗಂಗಾ ಪ್ರಕಾಶನ, ರಾಮಾನುಜ ರಸ್ತೆ, ಮೈಸೂರು

೩) ಬಸವ ಪಥ ಮಾಸಪತ್ರಿಕೆ, ಡಿಸೆಂಬರ್ ೨೦೦೫ರ ಸಂಚಿಕೆ, ಬಸವ ಸಮಿತಿ, ಬೆಂಗಳೂರು


□

# ವಾರ್ತಾವಿಹಾರ

## ವ್ಯಕ್ತಿಯ ಘನತೆ ಆತನ ಮಾನವೀಯ ಸೇವೆ ಹಾಗೂ ಕರುಣೆಯನ್ನು ಅವಲಂಬಿಸಿದೆ - ಶ್ರೀ ರಾಜ್‌ಕೇಶ್ವರ್

"ಒಬ್ಬ ವ್ಯಕ್ತಿಯ ಘನತೆಯು ಆತನ ಮಾನವೀಯ ಸೇವೆ ಹಾಗೂ ಕರುಣೆಯನ್ನು ಅವಲಂಬಿಸಿದೆಯೇ ಹೊರತು ಆತನ ಅಂತಸ್ತು, ಅಧಿಕಾರಗಳನ್ನಲ್ಲ" ಎಂದು ಮಾರಿಷಸ್ ಗಣರಾಜ್ಯದ ಅಧ್ಯಕ್ಷರಾದ ಶ್ರೀ ರಾಜ್‌ಕೇಶ್ವರ್ ಪುರ್ಯಾಗ್‌ರವರು ಅಭಿಪ್ರಾಯಪಟ್ಟರು.

ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಬಳಗಗಳು ಹಾಗೂ ವೀರಶೈವ ಸಂಘಸಂಸ್ಥೆಗಳ ಒಕ್ಕೂಟವು ಮೈಸೂರಿನಲ್ಲಿ ದಿನಾಂಕ 7.6.2014 ರಂದು ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು. ಎಂಟು ಶತಮಾನಗಳ ಹಿಂದೆ ಬಸವೇಶ್ವರರು ಜಾತಿಮತ ಸಮಸ್ಯೆಗಳಿಂದ ಆವೃತವಾಗಿದ್ದ ಸಮಾಜದಲ್ಲಿ ಸಮಾನತೆ ಹಾಗೂ ಭ್ರಾತೃತ್ವದ ಪರಿಕಲ್ಪನೆಯನ್ನು ಸಾಕಾರಗೊಳಿಸಿದರೆಂದು ಶ್ಲಾಘಿಸಿದರು.

ಶ್ರೀ ಬಸವೇಶ್ವರರ ಸಾಮಾಜಿಕ ಪುನರುತ್ಥಾನದ ಕಾಣ್ಕೆ ಹಾಗೂ ದೂರದೃಷ್ಟಿಯನ್ನು ಸ್ಮರಿಸಿದ ಅವರು ಸಮಾನತೆ ಹಾಗೂ ಮಾನವೀಯ ಹಕ್ಕುಗಳ ಮಹತ್ವವನ್ನು ಒತ್ತಿ ಹೇಳಿದರು. ಇಂಥದೊಂದು ಸಾರವತ್ತಾದ ಸಂದೇಶ ವಿಶ್ವದಾದ್ಯಂತ ಪ್ರಸಾರವಾಗಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು.

"ಸಾಮಾಜಿಕ ಅನಿಷ್ಟಗಳು ಹಾಗೂ ಅಸಮಾನತೆಯನ್ನು ಬಡಿದೋಡಿಸುವ ಪ್ರಮುಖ ಸಾಧನ ಎಂದರೆ ಶಿಕ್ಷಣ. ವಿದ್ಯಾಪ್ರಸಾರದಿಂದ ಮಾತ್ರ ಸಮಾಜದಲ್ಲಿ ಬೇರೂರಿರುವ ಪೂರ್ವಾಗ್ರಹಗಳನ್ನು ಹೊರಗಟ್ಟಲು ಸಾಧ್ಯ. ಸಮಾನತೆಯಿಂದ ಧಾರ್ಮಿಕ ಹಾಗೂ ಸಾಂಸ್ಕೃತಿಕ ವಿಕಾಸ ಉಂಟಾಗುತ್ತದೆ. ನಮ್ಮನ್ನು ಇತರರು ಹೇಗೆ ಕಾಣಬೇಕೆಂದು ಬಯಸುತ್ತಾರೋ, ನಾವೂ ಇತರರನ್ನು ಹಾಗೆಯೇ ಕಾಣುವ ದೃಷ್ಟಿಯನ್ನು ಬೆಳೆಸಿಕೊಂಡಾಗ ಮಾತ್ರ ಸಾಮಾಜಿಕ ಅನ್ಯಾಯಗಳನ್ನು ತಡೆಗಟ್ಟಬಹುದು" ಎಂದು ಅವರು ನುಡಿದರು.

ಮಾರಿಷಸ್‌ನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಸೇವಾಕಾರ್ಯವನ್ನು ಅವರು ತುಂಬು ಹೃದಯದಿಂದ ಪ್ರಶಂಸಿಸಿದರು.



ಪರಮಪೂಜ್ಯ ಜಗದ್ಗುರುಗಳು ಹಾಗೂ ಚಿತ್ರದುರ್ಗದ ಮುರುಘಾಮಠದ ಶರಣರು ಶ್ರೀ ರಾಜ್‌ಕೇಶ್ವರ್ ಪುರ್ಯಾಗ್ ದಂಪತಿಗಳನ್ನು ಗೌರವಿಸಿ ಆಶೀರ್ವದಿಸಿದರು.

ನಿವೃತ್ತ ನ್ಯಾಯಮೂರ್ತಿ ಶ್ರೀ ಅರಳಿ ನಾಗರಾಜ್‌ರವರು ಸ್ವಾಗತಿಸಿ ಕಾರ್ಯಕ್ರಮದ ವಿವರ ನೀಡಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಬಿ.ಎನ್. ಬೆಟ್‌ಕೆರೂರ್‌ರವರು ವಂದನೆ ಸಲ್ಲಿಸಿದರು.

## ಪ್ರೊ. ಸಿ.ಎನ್.ಆರ್. ರಾವ್‌ಗೆ ಶ್ರೀ ಸುತ್ತೂರು ಮಠದಿಂದ ಅಭಿನಂದನೆ

ಪರಮ ಪೂಜ್ಯ ಜಗದ್ಗುರುಗಳವರ ಸನ್ನಿಧಿಯಲ್ಲಿ ಸುತ್ತೂರು ಶ್ರೀಮಠದ ವತಿಯಿಂದ ಭಾರತ ರತ್ನ ಡಾ. ಸಿ.ಎನ್.ಆರ್. ರಾವ್ ಅವರನ್ನು ಅಭಿನಂದಿಸಲಾಯಿತು. ಈ ಸಮಾರಂಭದಲ್ಲಿ ಭಾಗವಹಿಸಿದ್ದ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಮಾತನಾಡುತ್ತ ಭಾರತ ರತ್ನ, ವಿಜ್ಞಾನಿ ಡಾ. ಸಿ.ಎನ್.ಆರ್. ರಾವ್ ಅವರು ನೊಬೆಲ್ ಪ್ರಶಸ್ತಿಗೆ ಅರ್ಹರು. ಅವರಿಗೆ ನೊಬೆಲ್ ಪ್ರಶಸ್ತಿ ಸಿಗಲಿ ಎಂದು ಹಾರೈಸಿದರು.

ದಿನಾಂಕ 13.6.2014 ರಂದು ಮೈಸೂರು ವಿ.ವಿ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಹಾಗೂ ಎನ್‌ಐಇ ಸಹಯೋಗದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಾ. ರಾವ್ ಅವರು ಕನ್ನಡ ಮಾಧ್ಯಮದಲ್ಲಿ ಓದಿ ವಿಜ್ಞಾನಿಯಾದವರು. ಕನ್ನಡ ಮಾಧ್ಯಮದಲ್ಲಿ ಓದಿದರೆ ಯಾವುದೇ ಕ್ಷೇತ್ರದಲ್ಲೂ ಸಾಧನೆ ಮಾಡಬಹುದು. ಅಂತಹವರಲ್ಲಿ ಡಾ. ರಾವ್ ಒಬ್ಬರು. ರಾವ್ ಅವರ ಸಾಧನೆ ಇಂಗ್ಲಿಷ್ ವ್ಯಾಮೋಹಿಗಳ ಕಣ್ಣು ತೆರೆಸಲಿ ಎಂದು ಹೇಳಿದರು. ರಾಜ್ಯ ಸರ್ಕಾರದ ವತಿಯಿಂದ ಜೂ. 18 ರಂದು ಭಾರತರತ್ನ ಡಾ. ಸಿ.ಎನ್.ಆರ್. ರಾವ್ ಅವರನ್ನು ಗೌರವಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಭಾರತ ರತ್ನ ಶ್ರೇಷ್ಠವಾದ ನಾಗರಿಕ ಪ್ರಶಸ್ತಿಯಾಗಿದ್ದು, ಎಲ್ಲರಿಗೂ ಈ ಗೌರವ ಸಿಗುವುದಿಲ್ಲ. ಅಸಾಮಾನ್ಯ ಸಾಧನೆ ಮಾಡಿದವರಿಗೆ ಭಾರತ ರತ್ನ ದೊರೆಯುತ್ತದೆ ಎಂದರು.

ರಾವ್ ಅವರನ್ನು ಅಭಿನಂದಿಸುವ ಮೂಲಕ ನಮ್ಮನ್ನು ನಾವೇ ಗೌರವಿಸಿದಂತಾಗಿದೆ. ರಾವ್ ಅವರು ವಿಜ್ಞಾನ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿದ್ದಾರೆ. ವಿಶ್ವದ ವಿವಿಧ ವಿಶ್ವವಿದ್ಯಾನಿಲಯಗಳಿಂದ ರಾವ್ ಅವರು 63 ಗೌರವ ಡಾಕ್ಟರೇಟ್‌ಗಳು ಬಂದಿವೆ. ಈಗ ಅವರಿಗೆ ಭಾರತ ರತ್ನ ಸಿಕ್ಕಿರುವುದು ನಾಡಿಗೆ ಸಂದ ಗೌರವ. ಮೂಲ ವಿಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುವಂತೆ ಹಲವಾರು ಬಾರಿ ರಾವ್ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಿದ್ದಾರೆ ಎಂದು ತಿಳಿಸಿದರು. ಮೈಸೂರು ವಿವಿ ಶತಮಾನೋತ್ಸವ ಆಚರಣೆಗೆ ಸರ್ಕಾರದ ವತಿಯಿಂದ ಅಗತ್ಯ ಅನುದಾನ ಮತ್ತು ಸಹಕಾರ ನೀಡಲಾಗುವುದು ಎಂದ ಅವರು, ಶತಮಾನೋತ್ಸವವನ್ನು ಅದ್ದೂರಿಗಿಂತ ಅರ್ಥಪೂರ್ಣವಾಗಿ

ಆಚರಿಸಬೇಕು ಎಂದರು. ಕಂದಾಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಶ್ರೀನಿವಾಸಪ್ರಸಾದ್ ಮಾತನಾಡಿ, ದೇಶದ ಕೀರ್ತಿ ಬೆಳೆಸುತ್ತಿರುವವರು ವಿಜ್ಞಾನಿಗಳು, ಕ್ರೀಡಾಪಟುಗಳು, ಸಾಹಿತಿಗಳು ಎಂದ ಅವರು, ಇಂದುಮತಿರಾವ್ ಅವರನ್ನು ಒಮ್ಮೆ ಭೇಟಿಯಾದಾಗ ರಾಜಕಾರಣಿಗಳ ಬಗ್ಗೆ ಬೈದಿದ್ದರು. ನಂತರ ನನಗೆ ಅದು ಅರ್ಥವಾಯಿತು ಎಂದರು.

ಶಾಸಕ ವಾಸು, ರಾಜ್ಯ ಮುಕ್ತ ವಿವಿ ಕುಲಪತಿ ಪ್ರೊ. ಎಂ.ಜಿ. ಕೃಷ್ಣನ್, ಎಸ್‌ಬಿಐ ಆಡಳಿತ ಮಂಡಳಿ ಅಧ್ಯಕ್ಷ ಶ್ರೀ ಎಂ. ಶ್ರೀಪಾದರಾವ್ ಇದ್ದರು.

**ಮನುಷ್ಯರ ನಡುವೆ ಪ್ರೀತಿ ಇದ್ದರೆ ಅದೇ ನಿಜವಾದ ಶ್ರೀಮಂತಿಕೆ**

ದಿನಾಂಕ 14.6.2014 ರಂದು ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಿದ್ದ 'ಶಾಂತಿ ಶಿಖರ' ನೂತನ ಭವನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯವನ್ನು ವಹಿಸಿ ಪರಮಪೂಜ್ಯ ಜಗದ್ಗುರುಗಳವರು ಮಾತನಾಡಿದರು.

ಜನರು ಹಣ ಸಂಪಾದನೆಯನ್ನೇ ಗುರಿಯಾಗಿಸಿಕೊಳ್ಳದೆ, ಸಾಮಾಜಿಕ ಸೇವಾ ಮನೋಭಾವವನ್ನು ಮೈಗೂಡಿಸಿಕೊಳ್ಳಬೇಕು. ಇಂತಹ ಸೇವೆಯಿಂದ ದೇಶದ ಅಭಿವೃದ್ಧಿ ಸಾಧ್ಯ. ಮನುಷ್ಯ ಅಹಂಕಾರವನ್ನು ಮರೆತು, ಒಬ್ಬರನ್ನೊಬ್ಬರು ಪ್ರೀತಿ ವಿಶ್ವಾಸದಿಂದ ಕಾಣಬೇಕು. ಆದರೆ, ಇದನ್ನು ಮರೆತು, ವಸ್ತುಗಳನ್ನು ಪ್ರೀತಿಸುತ್ತಿದ್ದಾನೆ. ಮನುಷ್ಯರ ನಡುವೆ ಪ್ರೀತಿಯಿದ್ದರೆ, ಅದೇ ನಿಜವಾದ ಶ್ರೀಮಂತಿಕೆ ಎಂದು ಅಭಿಪ್ರಾಯಪಟ್ಟರು.

ಸಮಾಜದಲ್ಲಿ ಕಬಳಿಸುವ ಪ್ರವೃತ್ತಿ ದಿನೇದಿನೇ ಹೆಚ್ಚುತ್ತಿದೆ, ನಾನು ನನ್ನದು, ನನ್ನ ಕುಟುಂಬ ಎಂಬ ಭಾವನೆಯಿಂದ ಹೊರಬಂದು ಸ್ವಲ್ಪ ಪ್ರಮಾಣದ ದಾನ-ಧರ್ಮ ಮಾಡಿದರೆ ಇಡೀ ಭರತಖಂಡ ರಾಮರಾಜ್ಯವಾಗಲಿದೆ ಎಂದರು.

ಮನುಷ್ಯ ನಾನು ಎಂಬ ಅಹಂ ಬಿಡಬೇಕು. ಆಗ ಮಾತ್ರ ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಶಾಂತಿ ನೆಲೆಸಲು ಸಾಧ್ಯ. ಮನುಷ್ಯ ಮೊದಲು ತನ್ನನ್ನು ತಾನು ಅರ್ಥಮಾಡಿಕೊಳ್ಳಬೇಕು. ಆದರೆ ಮನುಷ್ಯ-ಮನುಷ್ಯರನ್ನು ಪ್ರೀತಿಸುವ ಬದಲು ವಸ್ತುಗಳನ್ನು ಪ್ರೀತಿಸುತ್ತಿದ್ದಾನೆ. ಇದರಿಂದ ಮಾನವೀಯ ಮೌಲ್ಯಗಳ ಕೊಂಡಿ ಕಳಚುತ್ತಿದೆ ಎಂದು ವಿಷಾದಿಸಿದರು.

ವಿಶ್ವದ 130ಕ್ಕೂ ಹೆಚ್ಚು ದೇಶಗಳಲ್ಲಿ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಶಾಂತಿಯನ್ನು ಹಂಚುತ್ತಿದೆ. ಇದು ಅದ್ಭುತ ಕಾರ್ಯ. ಹೆಸರಿಗೆ ತಕ್ಕಂತೆ ಶಾಂತಿ ಶಿಖರದಲ್ಲಿ ಶಾಂತಿ ಸಿಗಲಿ ಎಂದು ಶುಭ ಹಾರೈಸಿದರು.

ಜನಪ್ರತಿನಿಧಿಗಳು ದೇಶದ ಅಭಿವೃದ್ಧಿಗೆ ಹಾಗೂ ಸಮಾಜದ ಅಭಿವೃದ್ಧಿಗೆ



ಸಮರ್ಪಕವಾಗಿ ಕೊಡುಗೆ ನೀಡಬೇಕಾದರೆ ಅವರಿಗೆ ಮೌಲ್ಯಾಧಾರಿತ ಶಿಕ್ಷಣದ ಅಗತ್ಯವಿದೆ ಎಂದು ಶಾಸಕ ಶ್ರೀ ವಾಸು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನವದೆಹಲಿಯ ಓಂ ಶಾಂತಿ ರಿಟ್ರೀಟ್ ಸೆಂಟರ್‌ನ ನಿರ್ದೇಶಕರಾದ ರಾಜಯೋಗಿನಿ ಬ್ರಹ್ಮಕುಮಾರಿ ಆಶಾಜಿ, ಮೈಸೂರು ಈಶ್ವರಿ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಕುಮಾರಿ ಲಕ್ಷ್ಮೀಜಿ, ರಾಜಯೋಗಿ ಬ್ರಹ್ಮಕುಮಾರ ಕರುಣ್ಯಜಿ, ತೆಲಂಗಾಣ ರಾಜ್ಯದ ಶಾಸಕ ಶ್ರೀ ಗಂಗಾರಾಮ್ ಮತ್ತಿತರರು ಉಪಸ್ಥಿತರಿದ್ದರು.

**ವೀರಶೈವ ಸಾಹಿತ್ಯ ಚರಿತ್ರೆ ಲೋಕಾರ್ಪಣೆ**

ಬೆಂಗಳೂರಿನ ಪ್ರಿಯದರ್ಶಿನಿ ಪ್ರಕಾಶನ, ಜೆಎಸ್‌ಎಸ್ ಮಹಾವಿದ್ಯಾಪೀಠ ಜಂಟಿ ಆಶ್ರಯದಲ್ಲಿ ಸುತ್ತೂರಿನಲ್ಲಿ ದಿನಾಂಕ 1.7.2014 ರಂದು ಹಮ್ಮಿಕೊಂಡಿದ್ದ ವೀರಶೈವ ಸಾಹಿತ್ಯ ಚರಿತ್ರೆ ಪುಸ್ತಕದ ಸಂಪುಟ 3, ಭಾಗ 1-2 ಕೃತಿಗಳು ಲೋಕಾರ್ಪಣೆಗೊಂಡವು.

ವೀರಶೈವರ ಸಮಗ್ರ ಗ್ರಂಥಭಂಡಾರ ಅಡಕವಾಗಿರುವ ಈ ಪುಸ್ತಕದಲ್ಲಿ ಆ ಕಾಲದ ವೀರಶೈವ ವಾಙ್ಮಯದ ದರ್ಶನವೂ ಲಭ್ಯವಾಗಿದೆ. ವೀರಶೈವರ ಸಮಗ್ರ ಸಾಹಿತ್ಯದ ಹೂರಣ ಇದರಲ್ಲಿ ಅಡಕವಾಗಿದೆ ಎಂದು ಡಾ. ಸಿಪಿಕೆ ಹೇಳಿದರು.

ಅತ್ಯಂತ ಸಾರ್ವಕಾಲಿಕಸಂಪನ್ನವಾದ ಈ ಕೃತಿಯಲ್ಲಿ ಸಣ್ಣಪುಟ್ಟ ದೋಷಗಳು ಕಾಣಿಸಿಕೊಂಡಿವೆ. ಹರಿಶ್ಚಂದ್ರ ಕಾವ್ಯವು ಕಾವ್ಯವೋ ಇಲ್ಲ ಚರಿತ್ರೆಯೊ ಎಂಬುದು ಬಗೆಹರಿಯಬಹುದಾಗಿದೆ. ಹರಿಹರನ ಶತಕವನ್ನು ಇದರ ಅಂತಿಮ ಭಾಗದಲ್ಲಿ ಸೇರಿಸಿರುವುದು ಸರಿಯಲ್ಲ. ಅದನ್ನು ಆತನ ಯುಗದ ಜೊತೆಗೆ ಸೇರಿಸಬೇಕು ಎಂದು ಅಭಿಪ್ರಾಯಪಟ್ಟರು. ವಚನಗಳ ನಿಜವಾದ ವಾರಸುದಾರ ಸರ್ವಜ್ಞ ಎಂದು ಪ್ರತಿಪಾದಿಸಿದ ಅವರು, ಈ ಮಹಾನುಭಾವ ಮಹಿಳೆಯರ ಬಗೆಗೆ ಗೌರವ ಹಾಗೂ ನಿಂದನೆ ಎರಡನ್ನೂ ತೋರುವ ಮೂಲಕ ದ್ವಂದ್ವ ನಿಲುವು ತಾಳಿದ್ದಾನೆ ಎಂದು ಹೇಳಿದರು.

ವೀರಶೈವ ಸಾಹಿತ್ಯ ಚರಿತ್ರೆಯ ಸಂಪುಟ 3, ಭಾಗ 1-2 ಕೃತಿಗಳ ಲೋಕಾರ್ಪಣೆಯನ್ನು ಬಿಜಾಪುರದ ಶ್ರೀ ಸಿದ್ಧೇಶ್ವರ ಸ್ವಾಮೀಜಿ ನೆರವೇರಿಸಿದರು.

ಸಮಾರಂಭದ ಸಾನ್ನಿಧ್ಯವನ್ನು ಪರಮಪೂಜ್ಯ ಜಗದ್ಗುರುಗಳು ವಹಿಸಿದ್ದರು. ವೇದಿಕೆಯ ಮೇಲೆ ಕೃತಿಯ ಕರ್ತೃ ಡಾ. ವಿದ್ಯಾಶಂಕರ್ ಉಪಸ್ಥಿತರಿದ್ದರು.

**ಜಯಂತಿಗಳ ಆಚರಣೆ ವ್ಯಕ್ತಿಯ ವೈಭವೀಕರಣದ ವೇದಿಕೆಯಾಗಬಾರದು**

ದಿನಾಂಕ 5.7.2014 ರಂದು ಹುಣಸೂರಿನಲ್ಲಿ ನಡೆದ ಬಸವ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯವನ್ನು ವಹಿಸಿ ಮಾತನಾಡಿದ ಪರಮಪೂಜ್ಯರು ಜಯಂತಿಗಳ

ಆಚರಣೆಗಳು, ವ್ಯಕ್ತಿಯ ವೈಭವೀಕರಣಕ್ಕೆ ವೇದಿಕೆಯಾಗಬಾರದು, ಬದಲಾಗಿ ವ್ಯಕ್ತಿಯ ಆದರ್ಶಗಳನ್ನು ಪಾಲಿಸಲು ಪಣ ತೊಡುವ ಮೆಟ್ಟಿಲಾಗಬೇಕು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ವಿ. ಶ್ರೀನಿವಾಸ ಪ್ರಸಾದ್ ಅವರು ಮಾತನಾಡಿ, ಮಹನೀಯರ ಜಯಂತಿಗಳು ಸಮಾಜಮುಖಿ ಚಿಂತನೆಯನ್ನು ಹುಟ್ಟುಹಾಕುವ ಸ್ಫೂರ್ತಿಯ ಚಿಲುಮೆಗಳಾಗಬೇಕೆಂದು ತಿಳಿಸಿದರು.

ಸಮಾರಂಭದಲ್ಲಿ ಶಾಸಕರಾದ ಶ್ರೀ ಎಚ್.ಪಿ. ಮಂಜುನಾಥ್, ಶ್ರೀ ಎಸ್. ಚಿಕ್ಕಮಾಧು, ಗಾವಡಗೆರೆ ಮಠದ ಶ್ರೀಗಳು, ಮಾದಹಳ್ಳಿ ಮಠದ ಶ್ರೀಗಳು, ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಬಸವರಾಜು, ತಾಲ್ಲೂಕು ಮಹಾಸಭಾ ಅಧ್ಯಕ್ಷರಾದ ಶ್ರೀ ಎಚ್.ಎಸ್. ಸೋಮಶೇಖರ್ ಅವರು ಭಾಗವಹಿಸಿದ್ದರು.

**ಸುತ್ತೂರಿನಲ್ಲಿ ದೊಡ್ಡಮ್ಮತಾಯಿ ದೇವಸ್ಥಾನ ಉದ್ಘಾಟನೆ**

ಸುತ್ತೂರನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಅನುದಾನ ನೀಡಲಿದೆ ಎಂದು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಹೇಳಿದರು.

ಸುತ್ತೂರಿನಲ್ಲಿ ದಿನಾಂಕ 14.7.2014 ರಂದು ಆಯೋಜಿಸಿದ್ದ ದೊಡ್ಡಮ್ಮತಾಯಿ ದೇವಸ್ಥಾನದ ಪುನರ್ ನಿರ್ಮಿತ ಮತ್ತು ಸುತ್ತೂರಮ್ಮ ದೇವಸ್ಥಾನದ ಜೀರ್ಣೋದ್ಧಾರಿತ ಕಟ್ಟಡಗಳ ಉದ್ಘಾಟನೆ, ದೇವತಾ ಮೂರ್ತಿಗಳ ಪುನರ್ ಪ್ರತಿಷ್ಠಾಪನೆ, ಸಂಪ್ರೋಕ್ಷಣೆ ಹಾಗೂ ಅಂಕಸ್ಥಾಪನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಗ್ರಾಮದಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸಲಾಗಿದೆ. ಒಳಚರಂಡಿಯ ತ್ಯಾಜ್ಯವನ್ನು ಹೊರಬಿಡಲು ಸ್ಥಳದ ಅಗತ್ಯ ಇದೆ. ಕೂಡಲೆ ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತ್ ಸಿಇಒ ಸೂಕ್ತ ಸ್ಥಳ ನಿಗದಿಪಡಿಸಬೇಕು. ಗ್ರಾಮವನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲು ಗ್ರಾಮಸ್ಥರು ಮತ್ತು ಪರಮಪೂಜ್ಯ ಶ್ರೀಗಳು ಶ್ರಮಿಸುತ್ತಿದ್ದಾರೆ. ಸರ್ಕಾರದಿಂದಲೂ ಅಗತ್ಯ ಅನುದಾನ ನೀಡಲಾಗಿದೆ. ವರುಣಾ ಕ್ಷೇತ್ರದ ಜನತೆಗೆ ನಾನು ಎಷ್ಟು ಧನ್ಯವಾದ ಹೇಳಿದರೂ ಕಡಿಮೆ ಎಂದರು.

**ದೇವಸ್ಥಾನದ ವಿಷಯ ಬೇಡ :** ದೇವರ ಹೆಸರಲ್ಲಿ ಅಮಾನವೀಯ ಕೆಲಸ ಆಗಬಾರದು. ಅನೇಕ ಕಡೆ ಜಾತಿ ಆಧಾರದ ಮೇಲೆ ದೇವಸ್ಥಾನಕ್ಕೆ ಅನೇಕರನ್ನು ಬಿಡುವುದಿಲ್ಲ. ಕೆಲವರಿಗೆ ದೇವಸ್ಥಾನದ ಪ್ರವೇಶ ನಿರಾಕರಿಸಲಾಗುತ್ತದೆ. ಇದು ನಾವು ಮಾಡಿಕೊಂಡ ಕೆಟ್ಟ ಸಂಪ್ರದಾಯ. ಆದ್ದರಿಂದಲೆ ನಾರಾಯಣ ಗುರುಗಳು ಕೇರಳದಲ್ಲಿ ಪ್ರತ್ಯೇಕ ದೇವಸ್ಥಾನಗಳನ್ನು ತೆರೆದಿದ್ದಾಗಿ ಹೇಳಿದರು. ಅಂಕ ಸ್ಥಾಪನೆ, ಅಂಕ ಮರು ಸ್ಥಾಪನೆ ಹಿಂದಿನಿಂದಲೂ ನಾವು ಮಾಡಿಕೊಂಡು ಬಂದ ಪದ್ಧತಿ. ಊರಿಗೆ ಒಳ್ಳೆಯದಾಗಲಿ ಎಂಬ ಕಾರಣಕ್ಕೆ ಅಂಕ ಪ್ರತಿಷ್ಠಾಪಿಸಲಾಗುತ್ತದೆ. ಮೂರ್ತಿಯೊಂದನ್ನು ಪ್ರತಿಷ್ಠಾಪಿಸಿ, ಆ



ಮೂಲಕ ದೇವರನ್ನು ಕಾಣುತ್ತೇವೆ. ನನ್ನೊಬ್ಬನಿಗೆ ಒಳ್ಳೆಯದು ಮಾಡು ಎಂದರೆ ದೇವರು ಒಳ್ಳೆಯದು ಮಾಡುವುದಿಲ್ಲ. ಎಲ್ಲರಿಗೂ ಒಳ್ಳೆಯದು ಮಾಡು ಎಂದು ಕೇಳಬೇಕು. ಅಲ್ಲದೆ ತಪ್ಪು ಮಾಡಿ ಕ್ಷಮಿಸು ಎಂದರೆ ದೇವರು ಕ್ಷಮಿಸುವುದಿಲ್ಲ. ಬದಲಿಗೆ ಬೇರೆಯವರಿಗೆ ಕೆಡಕು ಮಾಡದಂತೆ ನಡೆದುಕೊಂಡರೆ ಅದು ದೇವರ ಸೇವೆ ಮಾಡಿದಂತೆಯೆ. ನಾನೂ ಸಹ ದೇವಸ್ಥಾನಗಳಿಗೆ ಹೋಗುತ್ತೇನೆ, ಪೂಜೆ ಮಾಡಿಸುತ್ತೇನೆ, ಕೈ ಮುಗಿಯುತ್ತೇನೆ. ಆದರೆ ಯಾರಿಗೂ ದೇವಸ್ಥಾನಕ್ಕೆ ಹೋಗಬೇಡಿ ಎಂದಿಲ್ಲ. ಇರಲಿ ದೇವರ ವಿಷಯ ಸಾಕು, ಆಮೇಲೆ ಈ ವಿಷಯ ಎಲ್ಲೆಲ್ಲಿಗೋ ಹೋಗುತ್ತದೆ ಎಂದು ಮಾತು ನಿಲ್ಲಿಸಿದರು.

ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮೀಜಿ ಮಾತನಾಡಿ, ನಮಗೆ ಆಹಾರ, ಬೆಳಕು, ನೀರು ಕೊಡುವ ನಿಸರ್ಗಕ್ಕೆ ನಾವು ಋಣಿ ಆಗಿರಬೇಕು. ಯಾವುದನ್ನು ನಾವು ನಿಯಂತ್ರಿಸಲು ಸಾಧ್ಯವಿಲ್ಲವೋ ಆ ಶಕ್ತಿಯನ್ನು ನಾವು ದೇವರು ಎಂದು ಕರೆಯುತ್ತೇವೆ. ಅಂತಹ ದೇವರನ್ನು ನಾವು ನಿಸರ್ಗದ ಮೂಲಕ ಕಾಣುತ್ತಿದ್ದೇವೆ ಎಂದು ಹೇಳಿದರು.

ಸಮಾರಂಭದಲ್ಲಿ ಸಂಸದ ಶ್ರೀ ಆರ್. ಧ್ರುವನಾರಾಯಣ, ವಿಧಾನ ಪರಿಷತ್ ಸದಸ್ಯ ಶ್ರೀ ಆರ್. ಧರ್ಮಸೇನ, ಶ್ರೀ ಸಿದ್ಧರಾಜು, ಜಿ.,ಪಂ. ಹಂಗಾಮಿ ಅಧ್ಯಕ್ಷ ಶ್ರೀ ದ್ವಾರಕೀಶ್, ಜಿ.ಪಂ. ಸದಸ್ಯ ಶ್ರೀ ಮಾದಪ್ಪ, ತಾ.ಪಂ. ಅಧ್ಯಕ್ಷ ಶ್ರೀ ಮಲ್ಲಿಕಾರ್ಜುನಸ್ವಾಮಿ ಮುಂತಾದವರು ಉಪಸ್ಥಿತರಿದ್ದರು.

**ಜನಪದ ಮತ್ತು ಶಿಷ್ಟ ಸಾಹಿತ್ಯದ ನಡುವಿನ ಸೇತುವೆ**

ದಿನಾಂಕ 20.7.2014 ರಂದು ಬೆಂಗಳೂರು ನಗರದಲ್ಲಿ ಏರ್ಪಡಿಸಿದ್ದ, ಗೊ.ರು.ಚ. ಅವರ ಅಭಿನಂದನಾ ಸಮಾರಂಭದಲ್ಲಿ ಪರಮಪೂಜ್ಯರು ಮಾತನಾಡುತ್ತ 'ತಮ್ಮನ್ನು ಆಸೆ, ಆಮಿಷಗಳಿಗೆ ಒಳಪಡಿಸುವಂತಹ ಸಂಗತಿಗಳನ್ನು ದೂರವಿಟ್ಟು, ಶ್ರೇಷ್ಠತಮ ಬದುಕು ನಡೆಸಿದ ಗೊರುಚ, ಜನಪದ ಮತ್ತು ಶಿಷ್ಟ ಸಾಹಿತ್ಯದ ನಡುವೆ ಸೇತುವೆಯಾಗಿ ವಿಪುಲ ಸಾಹಿತ್ಯ ಕೃಷಿ ಮಾಡಿದವರು' ಎಂದರು.

ತನಗಾಗಿ ಯಾವುದನ್ನೂ ಬಯಸದೆ, ಮಾಸಿಕ ವೇತನದ ಹೊರತಾಗಿ ಬಂದ ಎಲ್ಲ ಗೌರವಧನ ಮತ್ತು ಭತ್ಯೆಗಳನ್ನು ತಾವು ಸೇವೆ ಸಲ್ಲಿಸಿದ ಸಂಘಸಂಸ್ಥೆಗಳಿಗೆ ಅರ್ಪಿಸಿದ ನಿಸ್ವಾರ್ಥ ಜೀವಿ ಗೊರುಚ ಎಂದು ಶ್ಲಾಘಿಸಿದರು.

ರೈಲ್ವೆ ಸಚಿವ ಶ್ರೀ ಡಿ.ವಿ. ಸದಾನಂದಗೌಡ ಮಾತನಾಡಿ, ಸರ್ಕಾರಿ ನೌಕರಿಯನ್ನು ಹೊಟ್ಟೆಪಾಡಿಗೆಂದು ಭಾವಿಸದೆ, ಸರ್ಕಾರ ಮತ್ತು ಸಮುದಾಯದ ನಡುವೆ ಸೇತುವೆ ಕಟ್ಟುವ ಹೊಸ ಜಾಗ ಎನ್ನುವ ಅದ್ಭುತ ಪರಿಕಲ್ಪನೆ ತೋರಿದವರು ಗೊ.ರು.ಚ ಎಂದು ಹೇಳಿದರು.

ಅಂತರಂಗ, ಬಹಿರಂಗ ಶುದ್ಧತೆ ಜತೆಗೆ ಮೃದು ವಚನದಿಂದ ಅಜಾತಶತ್ರುವಾಗಿ, ನಿರಾಡಂಬರದಿಂದ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಗೊ.ರು.ಚ ಸಾರ್ವಜನಿಕ ಜೀವನದಲ್ಲಿರುವ ಎಲ್ಲರಿಗೂ ಮಾದರಿ ಎಂದು ಅಭಿಪ್ರಾಯಪಟ್ಟರು.

ಸಂಸದ ಶ್ರೀ ಬಿ.ಎಸ್. ಯಡಿಯೂರಪ್ಪ ಮಾತನಾಡಿ, 'ಶರಣರ ಜೀವನ್ಮುಖಿ ಧೋರಣೆ ಮೈಗೂಡಿಸಿಕೊಂಡು, ಅವರ ತತ್ವಾದರ್ಶಗಳನ್ನು ಪಾಲಿಸಿಕೊಂಡು ಬದುಕಿರುವ ಗೊರುಚ ಸಾಧನೆಯನ್ನು ಮಾತಾಗಿಸಿದವರು ಎಂದು ಬಣ್ಣಿಸಿದರು.

ಜನಪದ ಸಾಹಿತ್ಯ ಯಾರಿಗೂ ಬೇಡವಾದ ಕಾಲಘಟ್ಟದಲ್ಲಿ ವಿಶ್ವದ ಮೊಟ್ಟಮೊದಲ ಜನಪದ ವಿಶ್ವವಿದ್ಯಾಲಯ ರೂಪಿಸಿದವರು ಗೊರುಚ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಗೊರುಚ ಅಭಿನಂದನಾ ಗ್ರಂಥ ಸೇರಿದಂತೆ 9 ಕೃತಿಗಳನ್ನು ವಿವಿಧ ಗಣ್ಯರು ಬಿಡುಗಡೆಗೊಳಿಸಿದರು.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಪುರುಷೋತ್ತಮಾನಂದ ಸ್ವಾಮೀಜಿ, ಶ್ರೀ ಪಿ.ಜಿ.ಆರ್. ಸಿಂಧ್ಯಾ, ವಿಧಾನ ಪರಿಷತ್ ಸದಸ್ಯ ಶ್ರೀ ಎಂ.ವಿ. ರಾಜಶೇಖರನ್, ವಿಶ್ರಾಂತ ಕುಲಪತಿ ಡಾ. ಎಂ.ಎಂ. ಕಲಬುರ್ಗಿ, ಸಂಶೋಧಕ ಶ್ರೀ ಎಂ. ಚಿದಾನಂದಮೂರ್ತಿ, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಡಾ. ಸಿ. ಸೋಮಶೇಖರ್ ಅಭಿನಂದನಾ ಸಮಿತಿ ಪ್ರಧಾನ ಕಾರ್ಯದರ್ಶಿ ಶ್ರೀ ಕೆ.ವಿ. ನಾಗರಾಜಮೂರ್ತಿ ಮತ್ತಿತರರು ಉಪಸ್ಥಿತರಿದ್ದರು.

**ವೈಯಕ್ತಿಕ ಶ್ರೀಮಂತಿಕೆ ತರುವ ಸಾಮಾಜಿಕ ಬಡತನ!**

'ಜಗತ್ತು ಬದಲಾಗಿದೆ ಎನ್ನುತ್ತಲೇ ಮನುಷ್ಯರು ಬದಲಾಗುತ್ತಿದ್ದಾರೆ. ಆಧುನಿಕತೆ, ನಾಗರಿಕತೆಯ ಬೆರಗಿಗೆ ಮರುಳಾಗಿ ಮೂಲ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ' ಎಂದು ಡಾ. ಪ್ರದೀಪ್‌ಕುಮಾರ್ ಹೆಬ್ರಿ ವಿಷಾದಿಸಿದರು.

ಮಂಡ್ಯ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದ ಸ್ವತಂತ್ರ ಸಿದ್ಧಲಿಂಗೇಶ್ವರ ವೇದಿಕೆಯಲ್ಲಿ ಶನಿವಾರ ಆರಂಭಗೊಂಡ ಮಂಡ್ಯ ಜಿಲ್ಲಾ ದ್ವಿತೀಯ ಶರಣ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ ವಹಿಸಿ ಮಾತನಾಡಿದರು.

ಬದುಕಿನ 'ಅರ್ಥ' ಆರ್ಥಿಕತೆಯತ್ತಲೇ ಸುತ್ತುತ್ತಿದೆ. ಹಣದ ಅಮಲು, ಆಸೆಯ ನಶೆಯಲ್ಲಿ ತೇಲಿ, ಜಗದ ಮಾನವೀಯ ಮೌಲ್ಯಗಳಿಗೆ ಕೊಳ್ಳಿ ಇಡಲಾಗುತ್ತಿದೆ. ಇದೆಲ್ಲವನ್ನು ನಾವು ನಂಬಿದ ದೇವರ ಸಾಕ್ಷಿಯಾಗಿಯೇ ಮಾಡುತ್ತಿದ್ದೇವೆ ಎಂದರು.

ವೈಯಕ್ತಿಕವಾಗಿ ನಾವೆಲ್ಲಾ ಶ್ರೀಮಂತರು. ಆದರೆ, ಸಾಮಾಜಿಕವಾಗಿ ಬಡವರು. ಎಲ್ಲರೊಳಗೊಂದಾಗಿ ಬಾಳುವುದನ್ನು ಮರೆತಿದ್ದೇವೆ. ಸ್ನೇಹ-ವಿಶ್ವಾಸಗಳು ವ್ಯವಹಾರಕ್ಕೆ ಸೀಮಿತವಾಗುತ್ತಿವೆ. ಮನುಷ್ಯನ ದುರ್ವರ್ತನೆಗಳಿಂದ ಮೌಲ್ಯಯುತ ಬದುಕಿನ ಅವಕಾಶವಾಗುತ್ತಿದೆ. ಇದರಿಂದ ನಾವು ಅನೈತಿಕತೆಯಿಂದ ಪಾತಾಳ ತಲುಪುತ್ತಿದ್ದೇವೆ.



ಇಂತಹ ದಿನಗಳಲ್ಲಿ ಮಾನವತೆ ಸ್ಥಾಪನೆಗೆ ವಚನಗಳು ಚಿಕಿತ್ಸಕ ಸಾಧನೆಗಳಾಗಿವೆ ಎಂದು ಪ್ರತಿಪಾದಿಸಿದರು.

ವಚನಗಳು ಎಲ್ಲ ರೋಗಗಳಿಂದಲೂ ಮುಕ್ತವಾಗಿಸುವ ನಿತ್ಯ ಸಂಜೀವಿನಿ. ದೈಹಿಕ ಕಾಯಿಲೆಗಳು ಈ ಜನ್ಮದಲ್ಲಿ ಮಾತ್ರ ಘಾಸಿಗೊಳಿಸಿದರೆ, 'ಭವರೋಗ' ಜನ್ಮಜನ್ಮಾಂತರದಲ್ಲೂ ಕಾಡುತ್ತದೆ. ಇವುಗಳಿಂದ ಮುಕ್ತಿ ಪಡೆಯಲು ಶರಣ ಸಮ್ಮೇಳನಗಳು ಸುಲಭ ದಾರಿಗಳಾಗಿವೆ ಎಂದರು.

ಶರಣ ಸತ್ಸಂಗದಿಂದಾಗುವ ಅನುಭಾವ, ನಮ್ಮ ಅಜ್ಞಾನದ ಕತ್ತಲೆಯನ್ನು ದೂರ ಮಾಡುತ್ತದೆ. ಪರಮಸತ್ಯದ ಅರಿವನ್ನುಂಟುಮಾಡುತ್ತದೆ. 'ವಚನ' ಕೇವಲ ಕೃತಕ ವಾಗ್ರಚನೆಯಲ್ಲ. ಅದೊಂದು ಅನುಭಾವದ ದಿವ್ಯಾಭಿವ್ಯಕ್ತಿ. ಶಿವ, ಶಿವತತ್ವವನ್ನು ಅರಿಯುವ ನಿಜವಾದ ಮಾರ್ಗದರ್ಶಿ. ವಚನಗಳಿಗೆ ಬೆಲೆ ಕಟ್ಟಲಾಗದು. ಅವು ನಮಗಾಗಿ ಪೂರ್ವಿಕರು ಕೊಡಿಟ್ಟ ಬಹು ಅಮೂಲ್ಯವಾದ ಆಸ್ತಿ. ವಚನಗಳ ಸಾರ ಅಮೃತಧಾರೆಯಂತೆ ಎಂದು ವಿಶ್ಲೇಷಿಸಿದರು.

**ಬೆಡ್‌ರೂಂ ಮನೆ ಸಂಸ್ಕೃತಿ**: 'ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ' ಎನ್ನುವ ಬಸವಣ್ಣನ ಮಾತನ್ನು ಗಾಳಿಗೆ ತೂರಿದ್ದೇವೆ. ಬದುಕಿನ ಎಲ್ಲ ರಂಗಗಳಲ್ಲೂ ನನಗೇನು ಲಾಭ ಎಂದೇ ಚಿಂತಿಸುತ್ತೇವೆ. ಕೊಡುವ ಬದಲು ಪಡೆಯುವುದರಲ್ಲೇ ಆಸಕ್ತಿ ತೋರುತ್ತಿದ್ದೇವೆ. ದೋಚುವ, ಬಾಚುವ, ಕೂಡಿಡುವ ಪ್ರವೃತ್ತಿ ಹೆಚ್ಚುತ್ತಿದೆ. ಹತ್ತಾರು ಮಂದಿ ಜೊತೆಯಾಗಿ ಕುಳಿತು ಊಟ ಮಾಡುವ 'ಪಡಸಾಲೆ ಮನೆ' ಸಂಸ್ಕೃತಿಯಿಂದ ಇಬ್ಬರೇ ಇರುವ 'ಬೆಡ್‌ರೂಂ ಮನೆ' ಸಂಸ್ಕೃತಿಗೆ ನಮ್ಮನ್ನು ಒಗ್ಗಿಸಿಕೊಂಡಿದ್ದೇವೆ ಎಂದು ವಿಷಾದದಿಂದ ನುಡಿದರು.

ಇಂದು ನಗರೀಕರಣ ಸಂಸ್ಕೃತಿ ವಿಜೃಂಭಿಸುತ್ತಿದೆ. ಎಲ್ಲರಿಗೂ ಸಂಪಾದನೆಗಾಗಿ ಮಾತ್ರ ವಿದ್ಯೆ, ಉದ್ಯೋಗ ಬೇಕಿದೆ. 'ದುಡಿತದ ಗಳಿಕೆ'ಯ ಬದಲಾಗಿ 'ಹೇಗಾದರೂ ಗಳಿಕೆ' ಎಂಬುದೇ ಎಲ್ಲರಿಗೂ ಮುಖ್ಯವಾಗಿದೆ. ವೇಗವಾಗಿ ಬೆಳೆಯುತ್ತಿರುವ ನಗರಗಳು ಹಳ್ಳಿಗಳನ್ನು ಆಪೋಶನಗೈಯುತ್ತಿವೆ. ದೊಡ್ಡ ನಗರಗಳು ಚಿಕ್ಕ ಹಳ್ಳಿಗಳ ಸಮಾಧಿಯಂತೆ ಕಾಣುತ್ತಿವೆ. ಮನುಷ್ಯನ ದಾಹಕ್ಕೆ ಪ್ರಕೃತಿ ನಾಶವಾಗುತ್ತಿದೆ. ಹಸಿರು ಬೆಳೆದು ಹಸಿವ ತಣಿಸುವುದನ್ನು ಮಾನವ ಮರೆಯುತ್ತಿದ್ದಾನೆ. ಉಳುವ ಹೊಲಗದ್ದೆಗಳು ಸೈಟುಗಳಾಗುತ್ತಿವೆ. ಮುಂದಿನ ಜನಾಂಗಕ್ಕೆ ಬೇಕಾಗುವ ದವಸಧಾನ್ಯಗಳನ್ನು ಬೆಳೆಯುವುದೆಲ್ಲಿ? ಬೆಳೆಯುವವರಾರು ಎಂಬುದು ಯಕ್ಷಪ್ರಶ್ನೆಯಾಗಿದೆ ಎಂದರು.

ಪರಮಪೂಜ್ಯ ಜಗದ್ಗುರುಗಳು ಹಾಗೂ ಆದಿಚುಂಚನಗಿರಿ ಶ್ರೀಗಳವರು ಸಮ್ಮೇಳನದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

### ನವದೆಹಲಿಯಲ್ಲಿ ಜೆಎಸ್‌ಎಸ್ ಭವನ ಉದ್ಘಾಟನೆ

"ಜನತೆಯ ಹೃದಯದಲ್ಲಿ ಸನ್ನಡತೆಯನ್ನು ಬೆಳೆಸಿದರೆ ಮನಸ್ಸಿನ ನೋವುಗಳು ನಿವಾರಣೆಯಾಗುತ್ತವೆ, ಜನರಲ್ಲಿ ಒಗ್ಗಟ್ಟು ಮೂಡುತ್ತದೆ ಮತ್ತು ಈ ಭೂಮಿಯು ವಾಸಯೋಗ್ಯವಾದ ಸ್ಥಳವಾಗುತ್ತದೆ" ಎಂದು ಮಾಜಿ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು ಅಭಿಪ್ರಾಯಪಟ್ಟರು. ಅವರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠವು ನವದೆಹಲಿಯ ಸಾಕೇತ್‌ನಲ್ಲಿ ನಿರ್ಮಿಸಿರುವ ಜೆಎಸ್‌ಎಸ್ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರದ ಉದ್ಘಾಟನೆಯ ಶುಭ ಸಂದರ್ಭದಲ್ಲಿ ದಿನಾಂಕ 28.7.2014 ರಂದು ಪಾಲ್ಗೊಂಡು ಮಾತನಾಡುತ್ತಿದ್ದರು.

ತಮ್ಮ ಅನುಕರಣೀಯ ಮಾತಿನ ಮೋಡಿಯಿಂದ ಅವರು ನೆರೆದಿದ್ದ ಎಲ್ಲರ ಮನ ಸೆಳೆದರು. "ನಮ್ಮ ಪರಿಸರವನ್ನು ಕಲ್ಮಶರಹಿತವನ್ನಾಗಿಸಬೇಕು, ಹಸಿರಾಗಿಯೂ ಶುಚಿಯಾಗಿಯೂ ಇಟ್ಟುಕೊಳ್ಳಬೇಕು, ಬಡತನವನ್ನು ಹೋಗಲಾಡಿಸಬೇಕು, ಯುದ್ಧಭಯವಿಲ್ಲದ ಶಾಂತ ವಾತಾವರಣವನ್ನು ನಿರ್ಮಿಸಬೇಕು, ಎಲ್ಲ ಪ್ರಜೆಗಳೂ ಸುಖದಿಂದಿರಬೇಕು" ಎಂದ ಅವರ ನುಡಿಗಳಿಗೆ ಸಭಿಕರು ಕರತಾಡನದ ಮೂಲಕ ಸಹಮತ ವ್ಯಕ್ತಪಡಿಸಿದರು.

ಆಶೀರ್ವಚನ ನೀಡಿದ ಪರಮಪೂಜ್ಯ ಜಗದ್ಗುರುಗಳವರು ಈ ನೂತನ ಆಧ್ಯಾತ್ಮಿಕ ಕೇಂದ್ರವನ್ನು ಸುತ್ತೂರು ಶ್ರೀಮಠದ 23ನೆಯ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಸಮರ್ಪಿಸುತ್ತಿರುವುದಾಗಿ ತಿಳಿಸಿದರು. ಸುತ್ತೂರು ಶ್ರೀಮಠದ ಕೀರ್ತಿಯು ವಿಂಧ್ಯಾಚಲದಿಂದ ಉತ್ತರಕ್ಕೂ ವ್ಯಾಪಿಸುವಂತೆ ಮತ್ತು ಜನಸೇವೆಗಾಗಿ ಸಾಗರದಿಂದಾಚೆಗೂ ಹಬ್ಬುವಂತೆ ಮಾಡಿದ ಕೀರ್ತಿ ರಾಜೇಂದ್ರ ಶ್ರೀಗಳವರಿಗೆ ಸಲ್ಲಬೇಕೆಂದರು. "ಪ್ರಸ್ತುತ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕೇಂದ್ರವನ್ನು ತರುಣರು ಮತ್ತು ಹಿರಿಯರ ಬುದ್ಧಿಶಕ್ತಿಯನ್ನು ಉತ್ತೇಜಿಸಿ ಅವರುಗಳನ್ನು ಧೀಮಂತ ರಾಷ್ಟ್ರಕರನ್ನಾಗಿಸುವ ಉದ್ದೇಶದಿಂದ ಪ್ರಾರಂಭಿಸಲಾಗಿದೆ. ಇದನ್ನು ಸಾರ್ಥಕಗೊಳಿಸುವ ಜವಾಬ್ದಾರಿ ಇಲ್ಲಿನ ಜನರುಗಳಿಗೆ ಸೇರಿದೆ" ಎಂದು ನುಡಿದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೂಜ್ಯ ಜಗದ್ಗುರು ಶ್ರೀ ನಿರ್ಮಲಾನಂದನಾಥ ಸ್ವಾಮಿಗಳವರು ಮಾತನಾಡಿ ಸುತ್ತೂರು ಶ್ರೀಮಠದ ಸರ್ವತೋಮುಖ ಕಾರ್ಯಚಟುವಟಿಕೆಗಳನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. "ಶ್ರೀಮಠದ ಚಟುವಟಿಕೆಗಳು ರಾಜ್ಯ, ರಾಷ್ಟ್ರಮಟ್ಟದಲ್ಲಿ ಮಾತ್ರವಲ್ಲದೆ ವಿಶ್ವಾದ್ಯಂತ ವ್ಯಾಪಿಸಿರುವ ಪರಿ ಅಮೋಘವಾಗಿದೆ. ಇಂಥ ಕ್ರಮಗಳಿಂದಾಗಿ ಭಗವದ್ಗೀತೆ, ಉಪನಿಷತ್ತುಗಳು ಮುಂತಾದ ಧರ್ಮಗ್ರಂಥಗಳು ಜಗತ್ತಿನಾದ್ಯಂತ ಜನರ ಗಮನಕ್ಕೆ ಬರುವಂತಾಗಿವೆ. ವಿವಿಧ ದೇಶಗಳ ಮತ್ತು ಧರ್ಮಗಳ ಅನುಯಾಯಿಗಳ ಮೆಚ್ಚುಗೆಗೆ ಪಾತ್ರವಾಗುವಂತಾಗಿವೆ" ಎಂದು ಹಾರೈಸಿದರು.



ಶ್ರೀ ಸಿದ್ಧಗಂಗಾ ಮಠದ ಕಿರಿಯ ಸ್ವಾಮೀಜಿಗಳಾದ ಪೂಜ್ಯ ಶ್ರೀ ಸಿದ್ಧಲಿಂಗ ಸ್ವಾಮಿಗಳವರು ಕೂಡ ಸುತ್ತೂರು ಶ್ರೀಮಠವು ತನ್ನ ದೂರದೃಷ್ಟಿ ಮತ್ತು ಜನಮುಖಿಯಾದ ಕಾರ್ಯಚಟುವಟಿಕೆಗಳಿಂದ ಸಮಾಜಕ್ಕೆ ವಿವಿಧ ರೀತಿಯಲ್ಲಿ ಉಪಯುಕ್ತವಾಗಿರುವುದನ್ನು ಉಲ್ಲೇಖಿಸಿದರು. ಈ ಕೇಂದ್ರವು ಸ್ಥಳೀಯ ಜನರ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಆಶೋತ್ತರಗಳನ್ನು ಪೂರೈಸುವಂತಾಗಲೆಂದು ಆಶಿಸಿದರು.

ಕನಕಪುರ ಶ್ರೀ ದೇಗುಲಮಠದ ಶ್ರೀ ಮುಮ್ಮಡಿ ನಿರ್ವಾಣಸ್ವಾಮಿಗಳವರು ಮತ್ತು ಹಲವಾರು ಜನ ಧರ್ಮಗುರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಕರ್ನಾಟಕದ ಮಾಜಿ ರಾಜ್ಯಪಾಲ ಶ್ರೀ ಹಂಸರಾಜ್ ಬಾರಧ್ವಾಜ್‌ರವರು ಪತ್ನಿಸಮೇತರಾಗಿ ಕೇಂದ್ರಕ್ಕೆ ಭೇಟಿ ನೀಡಿ ಶುಭ ಕೋರಿದರು. ಹಲವಾರು ಗಣ್ಯರು, ಅಧಿಕಾರಿಗಳು ಮತ್ತು ಶಾಲೆಯ ಮಕ್ಕಳು ಸಮಾರಂಭದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಬಿ. ಸುರೇಶ್ ಸ್ವಾಗತಿಸಿದರು. ದೆಹಲಿಯಲ್ಲಿ ಜೆಎಸ್‌ಎಸ್ ಸಂಸ್ಥೆಯ ಸಲಹೆಗಾರರಾದ ಡಾ. ಎಂ.ಎಲ್. ಗುಪ್ತರವರು ವಂದನಾರ್ಪಣೆ ಮಾಡಿದರು. ಜೆಎಸ್‌ಎಸ್ ಅಕ್ಯಾಡೆಮಿ ಆಫ್ ಟೆಕ್ನಿಕಲ್ ಎಜುಕೇಶನ್ನಿನ ಪ್ರಾಂಶುಪಾಲರಾದ ಡಾ. ನಾಗಭೂಷಣ್‌ರವರು ಕಾರ್ಯಕ್ರಮ ನಿರೂಪಣೆ ಮಾಡಿದರು.

ಜೆಎಸ್‌ಎಸ್ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರದ ಉದ್ಘಾಟನಾ ಕಾರ್ಯಕ್ರಮಗಳು ಜುಲೈ 28 ರಿಂದ 30 ರವರೆಗೆ ನಡೆದುವು. ಆ ಅವಧಿಯಲ್ಲಿ ಪೂಜೆ, ಭಜನೆ, ಸಂಗೀತ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದುವು.

### ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದ ಪ್ರವಚನ

ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರಾವಣಮಾಸದಾದ್ಯಂತ ಪ್ರತಿನಿತ್ಯ ಸಂಜೆ 7 ರಿಂದ 8 ರವರೆಗೆ ನಡೆಯಲಿರುವ ಮಹಾಕವಿ ರಾಘವಾಂಕನ "ಹರಿಶ್ಚಂದ್ರ ಕಾವ್ಯ"ದ ಪ್ರವಚನ ಉದ್ಘಾಟನಾ ಕಾರ್ಯಕ್ರಮದ ಸಮಾರಂಭವು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 26.7.2014ರಂದು ಚಾಲನೆಗೊಂಡಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಡರಹಳ್ಳಿಯ ಶ್ರೀ ಪಟ್ಟದಮಠದ ಷ.ಬ್ರ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳವರು ಮಾತನಾಡಿ, "ಬದುಕು ಎಂಬುದು ದೇವರು ಮಾನವನಿಗೆ ಕೊಟ್ಟಿರುವ ಒಂದು ದೊಡ್ಡ ವರ. ಬದುಕಿನ ಸಂಕೀರ್ಣತೆಯನ್ನು ಇಂದು ಕಲ್ಪಿಸಿಕೊಳ್ಳುವುದೇ ಕಷ್ಟಸಾಧ್ಯವಾಗಿದೆ. ಬದುಕು ಪರೋಪಕಾರಕ್ಕೆ ಒಲಿದಿರಬೇಕು. ಶರಣರ ಜೀವನ, ನಡೆನುಡಿಗಳು ನಮ್ಮ ಬದುಕಿಗೆ ದಾರಿದೀಪವಾಗಬೇಕು. ಉತ್ತಮ ಚಿಂತನೆಗಳಿಂದ ಮಾತ್ರ ಬದುಕು ಉತ್ತಮವಾಗಲು ಸಾಧ್ಯ" ಎಂದು ನುಡಿದರು.

ದಕ್ಷಿಣ ಫ್ಲಾರಿಡ ವಿಶ್ವವಿದ್ಯಾನಿಲಯದ ಆಧ್ಯಾತ್ಮಿಕ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಗಿಲ್‌ಬೆನ್ ಹೆರೂಟ್‌ರವರು ಮಾತನಾಡಿ, "ಹಂಪೆಯ ಹರಿಹರ ಹಾಗೂ ಶಿವಶರಣರ ರಗಳೆಗಳ ಬಗ್ಗೆ ನಾನು ಸಂಶೋಧನೆ ನಡೆಸುತ್ತಿದ್ದೇನೆ. ಕನ್ನಡದ ಪ್ರಾಚೀನ ಸಾಹಿತ್ಯ ಅದ್ಭುತವಾದುದು. ಚಂಪೂ, ರಗಳೆ, ಸಾಂಗತ್ಯ, ತ್ರಿಪದಿ ಮುಂತಾದ ವಿವಿಧ ಪ್ರಕಾರಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಹರಿಶ್ಚಂದ್ರ ಕಾವ್ಯವನ್ನು ಮುಂದಿನ ವರ್ಷ ಅಮೆರಿಕದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸಲಾಗುವುದು. ಅಮೆರಿಕನ್ನರಿಗೆ ಸಾಹಿತ್ಯ, ಸಂಶೋಧನೆಯಲ್ಲಿ ಆಸಕ್ತಿ ಇದೆ. ಅಲ್ಲಿ ಕೆಲವರಿಗೆ ಮಾತ್ರ ಕನ್ನಡ ಬರುತ್ತದೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸಿ, ಅದರ ಸೌಂದರ್ಯವನ್ನು ಎಲ್ಲರೂ ಅನುಭವಿಸುವಂತಾಗಲಿ" ಎಂದು ಆಶಿಸಿದರು.

ಪ್ರೊ. ಎಚ್.ಬಿ. ದೇವಣ್ಣನವರು "ಹರಿಶ್ಚಂದ್ರ ಕಾವ್ಯ" ಪ್ರವಚನವನ್ನು ಪ್ರಾರಂಭಿಸಿದರು. ಶ್ರೀ ಡಿ.ಎಂ. ಸಿದ್ಧಲಿಂಗಸ್ವಾಮಿಯವರು ಕಾವ್ಯವಾಚನ ಮಾಡಿದರು.

**ಮೈಸೂರಿನಲ್ಲಿ ಶ್ರಾವಣಮಾಸ ಪ್ರವಚನ**

"ಭಗವಂತನನ್ನು ಸುಲಭವಾಗಿ ಕಾಣುವ ಸಾಧನವೇ ಭಕ್ತಿಮಾರ್ಗ" ಎಂದು ಮೈಸೂರಿನ ಕಾರ್ಮಿಕ ನ್ಯಾಯಾಲಯದ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಸ್.ಕೆ. ಒಂಟಿಗೋಡಿಯವರು ಅಭಿಪ್ರಾಯಪಟ್ಟರು.

ಮೈಸೂರಿನಲ್ಲಿರುವ ಸುತ್ತೂರು ಶಾಖಾಮಠದಲ್ಲಿ ಇಡೀ ಶ್ರಾವಣಮಾಸ ಪ್ರತಿನಿತ್ಯ ಸಂಜೆ 6.30 ರಿಂದ 7.30 ರವರೆಗೆ ನಡೆಯಲಿರುವ ಪ್ರವಚನ ಕಾರ್ಯಕ್ರಮವನ್ನು ದಿನಾಂಕ 27.7.2014 ರಂದು ಉದ್ಘಾಟಿಸಿ ಮಾತನಾಡಿದ ಅವರು "ಅಧ್ಯಯನದ ದೃಷ್ಟಿಯಿಂದ ಶ್ರಾವಣಮಾಸ ಅತ್ಯಂತ ಶ್ರೇಷ್ಠವಾದುದು. ಶರಣರ ವಚನಗಳನ್ನು ತಿಳಿದವರಿಂದ ಕೇಳಿಸುವುದು, ಸದ್ವಿಚಾರಗಳನ್ನು ಕೇಳಿ ತಿಳಿಯುವುದರಿಂದ ಜನರ ಮನಸ್ಸಿನಲ್ಲಿ ಸದ್ವಿಚಾರಗಳ ಬೀಜ ಮೊಳೆತು ಹೆಮ್ಮರವಾಗಿ ಬೆಳೆಯಲು ಸಾಧ್ಯವಾಗುತ್ತದೆ" ಎಂದು ನುಡಿದರು.

ಸರ್ಪಭೂಷಣ ಶಿವಯೋಗಿಗಳವರ "ಕೈವಲ್ಯ ಕಲ್ಪವಲ್ಲರಿ" ಕಾವ್ಯದ ಪ್ರವಚನವನ್ನು ನಿವೃತ್ತ ಪ್ರಾಧ್ಯಾಪಕರಾದ ಡಾ. ಕೆ. ಅನಂತರಾಮುರವರು ಪ್ರಾರಂಭಿಸಿದರು. ಶ್ರೀ ಸುರೇಶ್‌ರವರು ಕಾವ್ಯವಾಚನ ಮಾಡಿದರು. ನ್ಯಾಯಾಧೀಶರಾದ ಶ್ರೀ ಜಗದೀಶ್, ನಿವೃತ್ತ ಪ್ರಾಧ್ಯಾಪಕರಾದ ಡಾ. ಸಿ.ಜಿ. ಉಷಾದೇವಿ, ಪ್ರಾಂಶುಪಾಲರಾದ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರುಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಲಲಿತಕಲಾ ತಂಡದವರು ಪ್ರಾರ್ಥಿಸಿದರು. ಶ್ರೀ ಶಿವಯೋಗಿದೇವರು ಸ್ವಾಗತಿಸಿದರು. ಶ್ರೀ ಮೃತ್ಯುಂಜಯದೇವರು ವಂದಿಸಿದರು. ಶ್ರೀ ಕೇದಾರದೇವರು ಕಾರ್ಯಕ್ರಮ ನಿರೂಪಿಸಿದರು.



**ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಗೀತದ ರಸಹೊನಲು**

ಕರ್ನಾಟಕ ಸಂಗೀತ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಹಾಗೂ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನು ದಿನಪೂರ್ತಿ ಪ್ರಸ್ತುತಿಪಡಿಸುವ ಮೂಲಕ ದಿನಾಂಕ 27.7.2014 ರಂದು ಸಂಗೀತ ವಿದ್ವಾಂಸರು ಸುತ್ತೂರಿನಲ್ಲಿ ತ್ರಿಮೂರ್ತಿಗಳ ಆರಾಧನೆಯನ್ನು ಶ್ರದ್ಧಾಭಕ್ತಿಗಳಿಂದ ನೆರವೇರಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ "ತ್ರಿಮೂರ್ತಿಗಳ ಸಂಗೀತೋತ್ಸವ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಸಂಸತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ಅವರು, "ಸಂಗೀತಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಆಗಬೇಕಾಗಿರುವ ಕೆಲಸಕಾರ್ಯಗಳ ಪ್ರಸ್ತಾವನೆಯನ್ನು ತಜ್ಞರು ಸಲ್ಲಿಸಿದರೆ ಅದನ್ನು ಆದ್ಯತೆಯ ಮೇರೆಗೆ ಜಾರಿಗೆ ತರಲು ಪ್ರಯತ್ನಿಸಲಾಗುವುದು. ಮೂಲತಃ ಸಾಂಸ್ಕೃತಿಕ ಹಿನ್ನೆಲೆಯಿರುವ ಮೈಸೂರು ಪ್ರದೇಶ ಸ್ವಾತಂತ್ರ್ಯಪೂರ್ವದಲ್ಲಿಯೂ ಕಲೆಗೆ ತುಂಬ ಪ್ರಸಿದ್ಧವಾಗಿತ್ತು. ಅಂತಹ ಪರಂಪರೆಯನ್ನು ಪುನರುತ್ಥಾನಗೊಳಿಸುವ ಮೂಲಕ ನಾಡಿಗೆ ಕೀರ್ತಿ ತರುವ ಕೆಲಸ ಆಗಬೇಕಾಗಿದೆ ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಸರ್ವಮಂಗಳಾ ಶಂಕರ್‌ರವರು ಮುಖ್ಯ ಅತಿಥಿಗಳಾಗಿ, ಎಲ್ಲಾ ಕಾಲಕ್ಕೂ ಸಂಗೀತಾಸಕ್ತರ ಮನ ಸೂರೆಗೊಂಡಿವೆ. ಸಂಸ್ಕೃತಿಯ ಬೇರುಗಳನ್ನು ಗಟ್ಟಿಗೊಳಿಸಿವೆ. ಹೃದಯಂಗಮ ಪ್ರೀತಿ, ವಾತ್ಸಲ್ಯಮಯ ಮಮತೆ ಅವರ ರಚನೆಗಳಲ್ಲಿ ವ್ಯಕ್ತವಾಗಿವೆ. ಇಂದು ಸಮಾಜದಲ್ಲಿರುವ ಅಹಿತಕರ ಘಟನೆಗಳನ್ನು ತಡೆಗಟ್ಟಲು ಇಂತಹ ಕಾರ್ಯಕ್ರಮಗಳು ಪರೋಕ್ಷವಾಗಿ ಸಹಾಯಕವಾಗಲಿವೆ" ಎಂದು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನ ಅಧ್ಯಕ್ಷ ಶ್ರೀ ಕೆ.ವಿ. ಮೂರ್ತಿಯವರು ಮಾತನಾಡಿ, "ಜೆಎಸ್‌ಎಸ್ ಸಂಗೀತ ಸಭೆಯು ಕಳೆದ ಮೂರು ದಶಕಗಳಿಂದ ಶಾಸ್ತ್ರೀಯ ಸಂಗೀತದ ಅಭಿವೃದ್ಧಿಗಾಗಿ ಶ್ರಮಿಸುತ್ತಿದೆ. ಕಲಾವಿದರಿಗೆ ಪ್ರೋತ್ಸಾಹ, ಪುರಸ್ಕಾರ ನೀಡುವುದು, ಬೆಳದಿಂಗಳ ಸಂಗೀತ, ಸಂಗೀತೋತ್ಸವ ಮುಂತಾದ ಕಾರ್ಯಕ್ರಮಗಳ ಮೂಲಕ ನಾದಯಜ್ಞದಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದೆ" ಎಂದು ತಿಳಿಸಿದರು.

ಕರ್ನಾಟಕದ ಪ್ರಮುಖ ನಗರಗಳಿಂದ ಹಾಗೂ ಹೊರ ರಾಜ್ಯಗಳಿಂದ ಬಂದಿದ್ದ ನೂರಾರು ಸಂಗೀತ ವಿದ್ವಾಂಸರು ಮತ್ತು ವಿದುಷಿಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

**ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರೆಯಬೇಕು**

"ಕೇಂದ್ರ ನಾಗರಿಕ ಸೇವೆಗಳಿಗೆ ಆಯ್ಕೆಯಾಗುವ ಪ್ರತಿಭಾವಂತರು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸಿಕೊಡಲು ಶ್ರಮಿಸಬೇಕು" ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ತಿಳಿಸಿದರು.

ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಸಂಸ್ಥೆಯು 2013ನೇ ಸಾಲಿನಲ್ಲಿ ಕೇಂದ್ರ ನಾಗರಿಕ ಸೇವೆಗಳಿಗೆ ಆಯ್ಕೆಯಾದ ಪ್ರತಿಭಾವಂತರನ್ನು ಗೌರವಿಸಲು ದಿನಾಂಕ 19.7.2014ರಂದು ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, "ದೇಶದಲ್ಲಿ ಇಂದು ಅನೇಕ ರೀತಿಯ ಸಮಸ್ಯೆಗಳಿವೆ. ಇವುಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಹೆಚ್ಚು ಗಮನ ವಹಿಸಬೇಕು. ರಾಜಕೀಯ ವ್ಯಕ್ತಿಗಳು ಕೇವಲ ಐದು ವರ್ಷ ಮಾತ್ರ ಅಧಿಕಾರದಲ್ಲಿರಲು ಸಾಧ್ಯ. ಆದರೆ, ನಾಗರಿಕ ಸೇವೆಗಳಿಗೆ ಆಯ್ಕೆಯಾದವರು 30ಕ್ಕೂ ಹೆಚ್ಚು ವರ್ಷಗಳ ಕಾಲ ಸೇವೆಗಾಗಿ ಅಧಿಕಾರ ಚಲಾಯಿಸಬಹುದು. ಈ ಅವಕಾಶವನ್ನು ಒಳ್ಳೆಯ ಕೆಲಸಗಳಿಗೆ ಉಪಯೋಗಿಸಿಕೊಳ್ಳಬೇಕು" ಎಂದರು.

ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯನವರು ಮಾತನಾಡಿ "ಜಸ್ಟಿಸ್‌ನಿಂದ ಆಯ್ಕೆಯಾಗಿರುವ 15 ಮಂದಿ ಪೈಕಿ ಹೆಚ್ಚಿನವರು ಹಿಂದುಳಿದ ವರ್ಗಕ್ಕೆ ಸೇರಿದವರು ಎಂದು ತಿಳಿದಿದ್ದೇನೆ. ಸರ್ಕಾರ ಕೂಡ ಹಿಂದುಳಿದ ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧಪಡಿಸಲು ಉಚಿತ ತರಬೇತಿ ಹಾಗೂ ಶಿಷ್ಯವೇತನ ನೀಡುತ್ತಿದ್ದು, ಕೆಳಸಮುದಾಯದ ಜನರು ಉನ್ನತ ಹುದ್ದೆ ಅಲಂಕರಿಸಬೇಕು ಎಂಬುದು ಸರ್ಕಾರದ ಉದ್ದೇಶ" ಎಂದು ನುಡಿದರು.

ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಶ್ರೀ ಅನಂತಕುಮಾರ್ ಮಾತನಾಡಿ "ನಿಮಗೆ ಜೀವನದಲ್ಲಿ ಒಂದೇ ಪರೀಕ್ಷೆ. ನಮಗೆ ಪ್ರತಿ ಐದು ವರ್ಷಕ್ಕೊಮ್ಮೆ ಪರೀಕ್ಷೆ. ನಮ್ಮ ಅಧಿಕಾರ ಐದು ವರ್ಷದ ಮಧ್ಯದಲ್ಲೇ ಮೊಟಕುಗೊಳ್ಳಲೂ ಬಹುದು. ಆದರೆ, ನಿಮ್ಮ ಅಧಿಕಾರ ಆ ರೀತಿಯಲ್ಲ. ಹಾಗಾಗಿ ಸಿಕ್ಕಿರುವ ಈ ಸುವರ್ಣಾವಕಾಶವನ್ನು ಸರಿಯಾಗಿ ಬಳಸಿಕೊಳ್ಳಿ" ಎಂದರು.

"ಜಸ್ಟಿಸ್‌ನಂತಹ ಕೇಂದ್ರಗಳು ರಾಜ್ಯಾದ್ಯಂತ ವಿಭಾಗೀಯ ಮಟ್ಟದಲ್ಲಿ ನಡೆಯುವಂತಾಗಬೇಕು. ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಬಿಹಾರ ಮತ್ತು ಉತ್ತರಪ್ರದೇಶದ ವಿದ್ಯಾರ್ಥಿಗಳೇ ಹೆಚ್ಚು ಉತ್ತೀರ್ಣರಾಗುತ್ತಿದ್ದಾರೆ. ಅಲ್ಲಿ ನೀಡುತ್ತಿರುವ ತರಬೇತಿ ಹೇಗಿದೆ ಎಂದು ಪರಿಶೀಲಿಸಿ ಅದೇ ಮಾದರಿಯನ್ನು ರಾಜ್ಯದಲ್ಲೂ ಅಳವಡಿಸಿಕೊಳ್ಳಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಶ ಹಿಂದಿ ಬಳಕೆ ಮಾಡದಿರುವ ಬಗ್ಗೆ ಕೆಲವು ಅಭ್ಯರ್ಥಿಗಳು ದೆಹಲಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ. ಹಾಗಾಗಿ ಈ ಹಿಂದೆ ಇದ್ದ



ಸ್ಪರ್ಧಾತ್ಮಕ ಪರೀಕ್ಷೆ ಮಾದರಿಯನ್ನೇ ಮುಂದುವರಿಸುವ ಬಗ್ಗೆ ಪ್ರಧಾನಿಯೊಂದಿಗೆ ಮಾತುಕತೆ ನಡೆಸುತ್ತೇನೆ" ಎಂದು ತಿಳಿಸಿದರು.

ಜಸ್ಟಿಸ್‌ನಿಂದ ತರಬೇತಿ ಪಡೆದು ನಾಗರಿಕ ಸೇವೆಗಳಿಗೆ ಆಯ್ಕೆಯಾಗಿರುವ ಹದಿನೈದು ಜನ ಅಭ್ಯರ್ಥಿಗಳನ್ನು ಅಭಿನಂದಿಸಲಾಯಿತು. ಶಾಸಕ ಶ್ರೀ ಆರ್. ಅಶೋಕ್, ವಿಧಾನಪರಿಷತ್ತಿನ ಸದಸ್ಯ ಶ್ರೀ ಎಂ.ವಿ. ರಾಜಶೇಖರನ್ ಮತ್ತಿತರರು ಉಪಸ್ಥಿತರಿದ್ದರು.

**ಸಾಧಕರ ಪಟ್ಟಿ**

ಜೆಎಸ್‌ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆದ 20 ವಿದ್ಯಾರ್ಥಿಗಳು ಸಂದರ್ಶನದ ಹಂತಕ್ಕೆ ತಲುಪಿದ್ದು ಅಂತಿಮವಾಗಿ 15 ಜನ ಆಯ್ಕೆಯಾಗಿದ್ದಾರೆ. ಇವರ ಪೈಕಿ 11 ಅಭ್ಯರ್ಥಿಗಳು ಪದವಿ, ಇಬ್ಬರು ವೈದ್ಯಕೀಯ ಪದವಿ, ಮತ್ತಿಬ್ಬರು ಸ್ನಾತಕೋತ್ತರ ಪದವಿ ಪಡೆದವರಾಗಿದ್ದಾರೆ.

**ಗಳಿಸಿದ ರ್‍ಯಾಂಕ್ ವಿವರಗಳು**

ಬಿ.ಎಂ. ಲಕ್ಷ್ಮೀ ಪ್ರಸಾದ್ (151 ನೇ ರ್‍ಯಾಂಕ್), ಸಿ.ಟಿ. ಶಿಲ್ಪಾ ನಾಗ್ (311), ಬಿ. ನಾಗೇಶ್ ಕುಮಾರ್ (314), ಶ್ರೇಯಸ್ ಜಿ. ಹೊಸೂರ್ (430), ಬಿ.ಕೆ. ರಾಹುಲ್ ಹೆಗ್ಡೆ (435), ಜಿ.ಎಂ. ವಿನಯ್ (459), ರಕ್ಷಿತಾ ಕೆ. ಮೂರ್ತಿ (512), ವಿ. ಸುನೀಲ್ (516), ಅನೀಶ್ ಹೆಗ್ಡೆ (597), ಪಿ. ರಾಘವೇಂದ್ರ (769), ಕೆ.ಎಂ. ಶ್ರೇಯಸ್ (819), ಆರ್. ಚೇತನ್ (844), ಉಮೇಶ್ ಎಸ್. ರಾಥೋಡ್ (939), ಡಾ. ಪ್ರಿಯಾಂಕ ಎಲ್. ನಾಯಕ್ (947) ಹಾಗೂ ಬಿ.ಜೆ. ಲೋಕೇಶ್ (1076).

**ಸುತ್ತೂರು ಜ್ಞಾನಾನ್ನ ದಾಸೋಹದ ನೆಲೆಬೀಡು**

"ಸುತ್ತೂರು ಮಠದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಜಗತ್ತನ್ನೇ ಕುಟುಂಬವಾಗಿ ಪ್ರೀತಿಸುವ ಹೃದಯವೈಶಾಲ್ಯ ಹೊಂದಿದ್ದರು" ಎಂದು ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್‌ರವರು ಹೇಳಿದರು. ಅವರು ಸುತ್ತೂರು ಶ್ರೀಕ್ಷೇತ್ರದ ಮೈಸೂರು ಶಾಖಾ ಮಠದಲ್ಲಿ ದಿನಾಂಕ 26.8.2014 ರಂದು ನಡೆದ ಡಾ. ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 99ನೇ ಜಯಂತಿ ಮಹೋತ್ಸವದಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದರು.

"ಸುತ್ತೂರು ಶ್ರೀಕ್ಷೇತ್ರವು ಸುಮಾರು ಹನ್ನೊಂದು ದಶಕಗಳ ಇತಿಹಾಸ ಹೊಂದಿದೆ. ಜಾತಿ, ಧರ್ಮಗಳ ವೈಭವೀಕರಣ ಮಾಡದೆ ಮನುಕುಲದ ಒಳಿತಿಗಾಗಿ ಶ್ರಮಿಸುತ್ತಿದೆ. ಸ್ವಾತಂತ್ರ್ಯಪೂರ್ವದಲ್ಲಿ ಹಣ ಕೊಟ್ಟರೂ ಆಹಾರ ಸಿಗದಿದ್ದಂಥ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಆಹಾರ, ವಸತಿಗಳನ್ನು ಒದಗಿಸಿ ಅಸಹಾಯಕರ ಏಳಿಗೆಗೆ ಶ್ರಮಿಸಿ ಜನರ ಮನಃಪಟಲದಲ್ಲಿ ಅಚ್ಚಳಿಯದೆ ಉಳಿದ ಧಾರ್ಮಿಕ ಮುಖಂಡರು ಶ್ರೀ ಶಿವರಾತ್ರಿ

ರಾಜೇಂದ್ರ ಮಹಾಸ್ವಾಮೀಜಿಯವರು. ಅವರು ಶೋಷಿತ ವರ್ಗದವರ ಮೇಲೂ ಅಪಾರ ಪರಿಣಾಮ ಬೀರಿದ್ದರು" ಎಂದು ಗೌರವಪೂರ್ವಕವಾಗಿ ಸ್ಮರಿಸಿದರು.

"ಸಾಮಾಜಿಕ ಪರಿವರ್ತನೆ ಮತ್ತು ಕ್ರಾಂತಿಕಾರಕ ಬದಲಾವಣೆಯ ನಿಟ್ಟಿನಲ್ಲಿ ಶ್ರೀಗಳವರು ಅಭೂತಪೂರ್ವ ಕೆಲಸಗಳನ್ನು ಮಾಡಿದರು. ಯಾವುದೇ ದೇಗುಲ, ಮಠಗಳಿಗೆ ಹೋಗದ ರಾಷ್ಟ್ರಕವಿ ಕುವೆಂಪುರವರು ಸ್ವಾಮೀಜಿಯವರ 70ನೇ ಜಯಂತ್ಯುತ್ಸವದಲ್ಲಿ ಪಾಲ್ಗೊಂಡು 'ಅರ್ಚನ' ಎಂಬ ಸ್ಮರಣಗ್ರಂಥವನ್ನು ಬಿಡುಗಡೆಗೊಳಿಸಿದ್ದರು. ಸ್ವಾಮೀಜಿಯವರ ಜ್ಞಾನಾನ್ನದಾಸೋಹ ತಮಗೆ ತುಂಬ ಹಿಡಿಸಿದೆ ಎಂದು ಅವರು ಹೇಳಿದ್ದರು" ಎಂದು ಶ್ರೀ ವಿ. ಶ್ರೀನಿವಾಸಪ್ರಸಾದ್ ನೆನಪಿಸಿಕೊಂಡರು.

ಕೇಂದ್ರ ವಿಮಾನಯಾನ ರಾಜ್ಯ ಸಚಿವ ಶ್ರೀ ಜಿ.ಎಂ. ಸಿದ್ದೇಶ್ವರರವರು ಮಾತನಾಡಿ, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ಪೀಠಾರೋಹಣ ಮಾಡಿದ ಮೇಲೆ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ಹೊಸ ಆಯಾಮ ನೀಡಿದರು" ಎಂದು ಹೇಳಿದರು.

"ಬಡತನ, ಅಜ್ಞಾನ, ನಿರುದ್ಯೋಗ ಹೋಗಲಾಡಿಸಲು ರಾಜೇಂದ್ರ ಶ್ರೀಗಳವರು ಶ್ರಮಿಸಿದರು. ತಮ್ಮ ಶಿಕ್ಷಣವನ್ನು ಬದಿಗೊತ್ತಿ ಜನತೆಗೆ ಶಿಕ್ಷಣ ಕಲಿಸುವ ಮಹಾನ್ ಕಾಯಕದಲ್ಲಿ ತೊಡಗಿಕೊಂಡರು. ಇದರ ಫಲವಾಗಿ 1954 ರಲ್ಲಿ ಮೈಸೂರಿನಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಆರಂಭಿಸಿದರು. ಅದರ ಮೂಲಕ ಅನೇಕ ವಿದ್ಯಾಸಂಸ್ಥೆ, ವಸತಿ ಶಾಲೆಗಳನ್ನು ಆರಂಭಿಸಿ ಜ್ಞಾನಾನ್ನದಾಸೋಹ ಒದಗಿಸಿದರು. ಜೆಎಸ್‌ಎಸ್ ಸಂಸ್ಥೆಯ ಕಾರ್ಯಚಟುವಟಿಕೆ ಇಂದು ವಿಶ್ವವ್ಯಾಪಿಯಾಗಿ ಹಬ್ಬಿದೆ" ಎಂದು ನುಡಿದರು.

ಸಹಕಾರ ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್‌ರವರು ಮಾತನಾಡಿ, ರಾಜೇಂದ್ರ ಶ್ರೀಗಳವರ 100ನೇ ವರ್ಷದ ಜಯಂತ್ಯುತ್ಸವದ ಅಂಗವಾಗಿ ಇಡೀ ವರ್ಷ ರಾಜ್ಯಮಟ್ಟದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು.

ಭಾರತದಲ್ಲಿರುವ ನಮೀಬಿಯ ದೇಶದ ರಾಯಭಾರಿ ಶ್ರೀಮತಿ ಎಲಿಜಬೆತ್ ಏನಲಿ ವನ್ನಿಷ್‌ರವರು ಮಾತನಾಡಿ "ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ನಮೀಬಿಯದ 17 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇಲ್ಲಿನ ಶಿಕ್ಷಣ ನಮ್ಮ ವಿದ್ಯಾರ್ಥಿಗಳಿಗೆ ಇಷ್ಟವಾಗಿದೆ. ಇಲ್ಲಿಯ ಜೆಎಸ್‌ಎಸ್ ಆಸ್ಪತ್ರೆ ಮತ್ತು ಕಾಲೇಜುಗಳಿಗೆ ಭೇಟಿ ನೀಡಿದ್ದೆ. ಅಲ್ಲಿ ಅತ್ಯುತ್ತಮ ಆಧುನಿಕ ಸೌಲಭ್ಯಗಳಿದ್ದು ಕಲಿಕೆಗೆ ಪೂರಕ ವಾತಾವರಣವಿದೆ. ಇಂಥದೊಂದು ಸಂಸ್ಥೆಯನ್ನು ಹೊಂದಿರುವ ನೀವೇ ಭಾಗ್ಯಶಾಲಿಗಳು" ಎಂದರು. ಹಿರಿಯ ಸಾಹಿತಿ ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯನವರು ನುಡಿನಮನ ಸಲ್ಲಿಸಿದರು.

ಲೋಕಸೇವೆ ಮಾಡಿದ ಕಾಯಕಯೋಗಿ ಶ್ರೀ ರಾಜೇಂದ್ರ ಮಹಾಸ್ವಾಮಿಗಳ ಕಾಲಮಾನ ಜೆಎಸ್‌ಎಸ್ ಸಂಸ್ಥೆಯ ಪಾಲಿಗೆ ಸುವರ್ಣಯುಗವೇ ಆಗಿತ್ತು ಎಂದು



ಸಿರಿಗೆರೆಯ ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬಣ್ಣಿಸಿದರು.

ಸಾವಿರಾರು ಬಡಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ ಕಲ್ಪಿಸಿದರು. ಅನಕ್ಷರಸ್ಥರೋ, ಅಲ್ಪವಿದ್ಯಾವಂತರೋ ಆಗಿಯೇ ಉಳಿಯುತ್ತಿದ್ದ ಅನೇಕಾನೇಕ ಮಂದಿಗೆ ಪೂರ್ಣ ವಿದ್ಯಾವಂತರನ್ನಾಗಿ ಮಾಡಿದ ಶ್ರೀಗಳು ಮಠಾಧೀಶರ ಸಾಲಿನಲ್ಲಿ ಅಗ್ರಪಂಕ್ತಿಯಲ್ಲಿದ್ದಾರೆ. ಶ್ರೀಗಳು ಮಾತೃಹೃದಯೀ ಆಗಿದ್ದರು. ತಮ್ಮ ಚಿಕಿತ್ಸ ಗುಣ, ಸೌಜನ್ಯ ಮತ್ತು ಸಮಾಜಮುಖಿ ಚಿಂತನೆಯಿಂದಲೇ ಇಡೀ ನಾಡಿನ ಮನಸ್ಸನ್ನೇ ಗೆದ್ದರು. ಇದು ಎಲ್ಲರಿಂದ ಸಾಧ್ಯವಿಲ್ಲ ಎಂದರು.

ಇದೇ ಸಂದರ್ಭದಲ್ಲಿ ಶ್ರೀ ಕೆ.ಸಿ. ಶಿವಪ್ಪನವರು ಸಂಪಾದಿಸಿದ್ದ 'ರಾಜೇಂದ್ರ ನುಡಿ ನಮನ' ಮತ್ತು 'ರಾಜೇಂದ್ರ ಕವನ ಕುಸುಮ' ಕೃತಿಗಳನ್ನು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರು ಲೋಕಾರ್ಪಣೆ ಮಾಡಿದರು. 'ಪ್ರಸಾದ' ವಿಶೇಷ ಸಂಚಿಕೆಯನ್ನು ಸಚಿವ ಶ್ರೀ ಎಚ್.ಎಸ್. ಮಹದೇವಪ್ರಸಾದ್ ಬಿಡುಗಡೆ ಮಾಡಿದರು. 'ಜೆಎಸ್‌ಎಸ್ ವಾರ್ತಾಪತ್ರ'ವನ್ನು ಸಚಿವ ಶ್ರೀ ವಿ. ಶ್ರೀನಿವಾಸಪ್ರಸಾದ್ ಬಿಡುಗಡೆ ಮಾಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿದ್ದರು. ಶಾಸಕರುಗಳಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ವಾಸು, ಶ್ರೀ ತನ್ವೀರ್ ಸೇಠ್ ಮತ್ತು ಶ್ರೀ ಎಂ.ಕೆ. ಸೋಮಶೇಖರ್ ಉಪಸ್ಥಿತರಿದ್ದರು.

***

ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಪುತ್ಥಳಿಯ ಬೆಳ್ಳಿ ಪಲ್ಲಕ್ಕಿ ಉತ್ಸವವು ಅಂದು ಬೆಳಗ್ಗೆ 8.00 ಗಂಟೆಗೆ ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಹೊರಟು ಬಸವೇಶ್ವರ ವೃತ್ತ, ಚಾಮರಾಜ ಜೋಡಿ ರಸ್ತೆ, ರಾಮಾನುಜ ರಸ್ತೆ, ಕಂಸಾಳೆ ಮಹಾದೇವಯ್ಯ ವೃತ್ತ, ಎಲೆತೋಟದ ರಸ್ತೆ, ಜೆಎಸ್‌ಎಸ್ ಕಾಲೇಜು ಮಾರ್ಗವಾಗಿ ಸುತ್ತೂರು ಮಠ ತಲುಪಿತು. ವಿವಿಧ ಕಲಾತಂಡಗಳು ಮೆರವಣಿಗೆಗೆ ಮೆರುಗು ನೀಡಿದವು.

ಗುರು ಮುನಿದಡೆ ಒಂದು ದಿನ ತಾಳುವೆ,
ಲಿಂಗ ಮುನಿದಡೆ ದಿನವರೆ ತಾಳುವೆ,
ಜಂಗಮ ಮುನಿದಡೆ ಕ್ಷಣಮಾತ್ರ ತಾಳಿದೆನಾದಡೆ,
ಎನ್ನ ಪ್ರಾಣದ ಹೋಕು ಕೂಡಲಸಂಗಮದೇವಾ.

- ಬಸವಣ್ಣ

## ಸಾದರ ಸ್ವೀಕಾರ

* ಸೂಕ್ಷ್ಮ ಅರ್ಥಶಾಸ್ತ್ರ : ಪ್ರೊ. ಎಸ್. ಮರುಳಸಿದ್ದಪ್ಪ, ಕವಿತಾ ಪ್ರಕಾಶನ, ಬೆಂಗಳೂರು, ಪು. 319, ಬೆಲೆ ರೂ. 200
* ಸೂಕ್ಷ್ಮ ಮತ್ತು ಸಮಗ್ರ ಅರ್ಥಶಾಸ್ತ್ರ (2014-15ರ ಪರಿಷ್ಕೃತ ಪಠ್ಯಪುಸ್ತಕ): ಪ್ರೊ. ಎಸ್. ಮರುಳಸಿದ್ದಪ್ಪ, ಕವಿತಾ ಪ್ರಕಾಶನ, ಬೆಂಗಳೂರು, ಪು. 415, ಬೆಲೆ ರೂ. 240
* ಬೆಂಗಳೂರು ವಿ.ವಿ. ವ್ಯವಹಾರಿಕ ಅರ್ಥಶಾಸ್ತ್ರ, ಬಿ.ಎ., ಬಿ.ಎಸ್ಸಿ ಪ್ರಥಮ ಸೆಮಿಸ್ಟರ್: ಪ್ರೊ. ಎಸ್. ಮರುಳಸಿದ್ದಪ್ಪ, ಕವಿತಾ ಪ್ರಕಾಶನ, ಬೆಂಗಳೂರು, ಪು. 132, ಬೆಲೆ ರೂ. 120
* ಅರ್ಥಶಾಸ್ತ್ರ ಅಧ್ಯಯನಕ್ಕೆ ಸಂಖ್ಯಾಶಾಸ್ತ್ರ ಮತ್ತು ಭಾರತದ ಆರ್ಥಿಕ ಅಭಿವೃದ್ಧಿ (ಪ್ರಥಮ ಪಿಯುಸಿ ಅರ್ಥಶಾಸ್ತ್ರ ಪಠ್ಯಪುಸ್ತಕ): ಪ್ರೊ. ಎಸ್. ಮರುಳಸಿದ್ದಪ್ಪ, ಕವಿತಾ ಪ್ರಕಾಶನ, ಬೆಂಗಳೂರು, ಪು. 352, ಬೆಲೆ ರೂ. 200.
* ಆರ್ಥಿಕ ಚಿಂತನೆ ಬಸವಣ್ಣನವರು ಮತ್ತು ಗಾಂಧೀಜಿ, ಕವಿತಾ ಪ್ರಕಾಶನ, ಬೆಂಗಳೂರು, ಪು. 64, ಬೆಲೆ ರೂ. 60.
* ಕೆಳದಿ ಬಸವರಾಜ ಸಂಕಲಿಸಿದ ಶ್ರೀ ಶಿವತತ್ತ್ವ ರತ್ನಾಕರ : ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ದರೇಸ ಪಬ್ಲಿಕೇಶನ್ಸ್, ಬೆಂಗಳೂರು, ಪು. 624, ಬೆಲೆ ರೂ. 3000 (5 ಸಂಪುಟಗಳು)
* ಅಪೂರ್ವಪೂರ್ವ, ಕಾಂಬೋಡಿಯ - ವಿಯಟ್ನಾಂ ಪ್ರವಾಸ ಕಥನ : ವೆಂಕಟೇಶ ಮಾಚಕನೂರ, ಲೋಹಿಯಾ ಪ್ರಕಾಶನ, ಬಳ್ಳಾರಿ, ಪು. 164, ಬೆಲೆ ರೂ. 100
* ಗೊಂದಲಿಗ್ಯಾ : ಎಂ.ಎಂ. ಮದರಿ, ಲೋಹಿಯಾ ಪ್ರಕಾಶನ, ಬಳ್ಳಾರಿ, ಪು. 260, ಬೆಲೆ ರೂ. 150
* ಲಿಂಗಾಯತ ದರ್ಶನ (ಸಂ. 1, ಸಂಚಿಕೆ 9, ಸೆಪ್ಟೆಂಬರ್ 2014) : ವಚನ ಅಧ್ಯಯನ ಕೇಂದ್ರ, ಬೆಳಗಾವಿ.
* ದಯಾನಿಧಿ ಬಸವಣ್ಣ: ಎಂ.ಎ. ಹಂಚಿನಾಳ, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ, ಬೆಲೆ ರೂ. 10.
* ಸಿದ್ಧರಾಮೇಶ್ವರರ ಸತ್ಯಶುದ್ಧ ಟೀಕಿನ ಸಮಗ್ರ ಮಹಾವಚನಾಗಮ: ಪಿ.ಎಂ. ಗಿರಿರಾಜು, ಡಾ. ವಾಯ್ ಬಿ. ಕುಲಗೋಡ ಕಾಯಕ ಸಂಜೀವಿನಿ ಪ್ರತಿಷ್ಠಾನ, ರಾಮದುರ್ಗ, ಬೆಲೆ ರೂ. 500.
* ಬಂಥನಾಳ ಶ್ರೀ ಶಿವಯೋಗಿಗಳ ಸಮಗ್ರ ಸಾಹಿತ್ಯ ಸಂಪುಟ: ಸಂ. ದಾನಪ್ಪ ಬಗಲಿ ಮತ್ತು ವೀ.ಮ. ಥಾಲಬಾವಡಿ, ಶ್ರೀ ಶಿವಾನುಭವ ಪ್ರಕಾಶನ, ಬಂಥನಾಳ, ಬೆಲೆ ರೂ. 400.
* ಸ್ಥಾವರವಲ್ಲದ ಬದುಕು : ಬಸವಣ್ಣೆಪ್ಪ ರುದ್ರಪ್ಪ ಜಕಾತಿ, ಸಂ. ಡಾ. ಬಾಳಣ್ಣ ಶೀಗೀಹಳ್ಳಿ, ಶಾರದಾ ಪ್ರಕಾಶನ, ಕಿತ್ತೂರು, ಬೆಲೆ ರೂ. 180.

□




ಡಾ. ರಾಜೇಂದ್ರ ಶ್ರೀಗಳ ಜಯಂತಿ ಮಹೋತ್ಸವದ ಅಂಗವಾಗಿ ಕೇಂದ್ರ ವಿಮಾನಯಾನ ರಾಜ್ಯ ಸಚಿವ ಶ್ರೀ ಜಿ.ಎಂ. ಸಿದ್ಧೇಶ್ವರರವರು ಮಾತನಾಡುತ್ತಿರುವುದು




ಅಖಿಲ ಭಾರತ ವೀರಶೈವ ಮಹಾಸಭಾ, ಬಸವ ಬಳಗಗಳು ಹಾಗೂ ವೀರಶೈವ ಸಂಘಸಂಸ್ಥೆಗಳ ಒಕ್ಕೂಟವು ಮೈಸೂರಿನಲ್ಲಿ ಏರ್ಪಡಿಸಿದ್ದ ಬಸವ ಜಯಂತಿ ಮಹೋತ್ಸವದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಾರಿಷಸ್ ಗಣರಾಜ್ಯದ ಅಧ್ಯಕ್ಷರಾದ ಘನತೆವೆತ್ತ ಶ್ರೀ ರಾಜ್‌ಕೇಶ್ವರ್ ಪುರ್‍ಯಾಗ್ ಮತ್ತು ಶ್ರೀಮತಿ ಅನಿತಾ ಪುರ್‍ಯಾಗ್ ದಂಪತಿಗಳನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಮತ್ತು ಚಿತ್ರದುರ್ಗದ ಮುರುಘಾ ಶರಣರು ಗೌರವಿಸಿ ಆಶೀರ್ವದಿಸುತ್ತಿರುವುದು. ಚಿತ್ರದಲ್ಲಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ. ನಾಗರಾಜುರವರನ್ನು ಕಾಣಬಹುದು




ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಶ್ರಾವಣಮಾಸದ ಪ್ರವಚನ ಕಾರ್ಯಕ್ರಮದಲ್ಲಿ ದಕ್ಷಿಣ ಫ್ಲೋರಿಡಾ ವಿಶ್ವವಿದ್ಯಾನಿಲಯದ ಆಧ್ಯಾತ್ಮಿಕ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಗಿಲ್‌ಬೆನ್ ಹೆರೂಟ್‌ರವರು ಮಾತನಾಡುತ್ತಿರುವುದು. ಚಿತ್ರದಲ್ಲಿ ಶ್ರೀ ಸಿ. ಚನ್ನಕೃಷ್ಣಯ್ಯ, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಷ.ಬ್ರ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಎಲ್. ಮಾದಪ್ಪ ಹಾಗೂ ಶ್ರೀ ಸಿ. ಗುರುಸ್ವಾಮಿಯವರನ್ನು ಕಾಣಬಹುದು




ಸುತ್ತೂರು ಶ್ರೀಕ್ಷೇತ್ರದಲ್ಲಿ ತ್ರಿಮೂರ್ತಿಗಳ ಸಂಗೀತೋತ್ಸವವನ್ನು ಸಂಸದರಾದ ಶ್ರೀ ಪ್ರತಾಪ್ ಸಿಂಹರವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಕೆ.ವಿ. ಮೂರ್ತಿ, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಡಾ. ಸರ್ವಮಂಗಳಾ ಶಂಕರ್, ಶ್ರೀ ಸಿ.ಆರ್. ಹಿಮಾಂಶು ಹಾಗೂ ಪ್ರೊ. ಬಿ. ತಿಪ್ಪೇಸ್ವಾಮಿಯವರಿದ್ದಾರೆ